ಶೋಧ ಕಾರ್ಯಾಚರಣೆ ವೇಳೆ, 60 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ದಾಳಿಗಳು ಆರೋಪಿಗಳು ಮತ್ತು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿದ್ದ ಹಲವಾರು ಸ್ಥಿರ ಆಸ್ತಿಗಳ ವಿವರಗಳ ಹೊರತಾಗಿ, 45 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳಲ್ಲಿ ಅಪರಾಧದ ಆದಾಯ(ಪಿಒಸಿ) ಹೂಡಿಕೆಗಳ ಬಗ್ಗೆಯೂ ಒಳಗೊಂಡಿತ್ತು. ಎಆರ್ ಡೇರಿ ಫುಡ್ ಮತ್ತು ಇತರರ ವಿರುದ್ಧ ದಾಖಲಾದ ಎಫ್‌ಐಆರ್ ಆಧಾರದ ಮೇಲೆ 2002ರ ಪಿಎಂಎಲ್‌ಎ ಅನ್ವಯ ಇಡಿ ತನಿಖೆ ನಡೆಸುತ್ತಿದೆ.

ಆರೋಪಿಗಳು ತಿರುಮಲ ತಿರುಪತಿ ದೇವಸ್ಥಾನದ ಕೆಲವು ಅಧಿಕಾರಿಗಳೊಂದಿಗೆ ಪಿತೂರಿಯಲ್ಲಿ ನಂಬಿಕೆ ದ್ರೋಹ, ವಂಚನೆ ಮತ್ತು ಕಲಬೆರಕೆಯ ತುಪ್ಪವನ್ನು ಪೂರೈಸುವ ಮೂಲಕ ದೇವಾಲಯಕ್ಕೆ ಭಾರೀ ನಷ್ಟವನ್ನುಂಟು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

4ನೇ ಎಸ್-400 ತುಕಡಿ ಸುದರ್ಶನ ಚಕ್ರಕ್ಕೆ ಬಲ

• **ಹೊಸದಿಲ್ಲಿ:** ಭಾರತವು ರಷ್ಯಾದಿಂದ ಎಸ್-400 ಸುದರ್ಶನ ವಾಯುರಕ್ಷಣಾ ವ್ಯವಸ್ಥೆಯ 4ನೇ ತುಕಡಿಯನ್ನು ಸ್ವೀಕರಿಸಿದ್ದು, ಈ ಮೂಲಕ ದೇಶದ ಅಭೇದ್ಯ ಸುರಕ್ಷಾ ವ್ಯವಸ್ಥೆಯಾದ ಸುದರ್ಶನ ಚಕ್ರಕ್ಕೆ ಇನ್ನಷ್ಟು ಬಲ ಬಂದಂತಾಗಿದೆ.

ಮೂಲಗಳ ಪ್ರಕಾರ, ಕೆಲವೇ ದಿನಗಳ ಹಿಂದೆ ದೀರ್ಘದೂರ ವ್ಯಾಪ್ತಿಯ ಎಸ್-400ನ 4ನೇ ತುಕಡಿ ರಷ್ಯಾದಿಂದ ಭಾರತಕ್ಕೆ ಬಂದಿದೆ. ಶೀಘ್ರವೇ ಇದನ್ನು ಕಾರ್ಯಾಚರಣೆ ಪ್ರದೇಶವೊಂದರಲ್ಲಿ ನಿಯೋಜಿಸಲಾಗುವುದು. 2018ರ ಒಪ್ಪಂದದಂತೆ, 5.43 ಬಿ.ಡಾ. ವೆಚ್ಚದಲ್ಲಿ ರಷ್ಯಾದಿಂದ 5 ಎಸ್-400 ತುಕಡಿಗಳನ್ನು ಪಡೆಯಲು ನಿರ್ಧರಿಸಲಾಗಿತ್ತು. 5ನೇ ತುಕಡಿ ಕೆಲವೇ ತಿಂಗಳಲ್ಲಿ ಆಗಮಿಸಲಿದೆ.

ಎಸ್-400 ಬಹುಸ್ತರಗಳ ವಾಯುರಕ್ಷಣಾ ವ್ಯವಸ್ಥೆಯಾಗಿದ್ದು, ಏಕಕಾಲದಲ್ಲಿ 100ಕ್ಕೂ ಅಧಿಕ ದಾಳಿಗಳನ್ನು ತಡೆದು ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿದೆ. ಆಪರೇಷನ್ ಸಿಂದೂರ್ ವೇಳೆ ಈ ವಾಯುರಕ್ಷಣಾ ವ್ಯವಸ್ಥೆ ಪಾಕಿಸ್ತಾನದ ಎಲ್ಲ ದಾಳಿಗಳನ್ನೂ ಪೂರ್ಣವಾಗಿ ತಡೆದು ಧ್ವಂಸಗೊಳಿಸುವಲ್ಲಿ ಶಕ್ತವಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಪಾಕಿಸ್ತಾನದ ಬಹು ಬೆಲೆಯ ವೀಕ್ಷಣಾ ವಿಮಾನವನ್ನು 300 ಕಿಮೀ ದೂರದಲ್ಲೇ ನಾಶಗೊಳಿಸಿತ್ತು. ಇದು ಡ್ರೋನ್, ಯುದ್ಧ ವಿಮಾನಗಳು, ಉತ್ಕ್ಷೇಪಕ ಕ್ಷಿಪಣಿ ಬೆದರಿಕೆಗಳನ್ನು ಸಮರ್ಥವಾಗಿ ಹತ್ತಿಕ್ಕಬಲ್ಲ ರಕ್ಷಣಾ ವ್ಯವಸ್ಥೆಯೆಂದೇ ಪರಿಗಣಿತವಾಗಿದೆ.

ಸ್ವದೇಶಿ ಕುಶ ಯೋಜನೆ: ಇದೇ ವೇಳೆ ಭಾರತವು ಸ್ವದೇಶಿ ಕುಶ ವಾಯುರಕ್ಷಣಾ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸುತ್ತಿದ್ದು, ಇದು ಜಾಗತಿಕ ವ್ಯವಸ್ಥೆಗೆ ಸಮಬಲವಾಗಿ ದೀರ್ಘವ್ಯಾಪ್ತಿಯ ತಡೆ ಸಾಮರ್ಥ್ಯದ ಯೋಜನೆಯಾಗಿದೆ.

ಚಿನ್ನ ಮಾರಾಟ ಕೇವಲ ವದಂತಿ ಎಂದ ಆರ್‌ಬಿಐ

• **ಮುಂಬೈ:** ಭಾರತೀಯ ರಿಸರ್ವ್ ಬ್ಯಾಂಕ್ ಚಿನ್ನ ಮಾರಾಟ ಮಾಡಿದೆ ಎಂಬ ವರದಿಗಳನ್ನು ಬುಧವಾರ ನಿರಾಕರಿಸಿರುವ ಆರ್‌ಬಿಐ, ತನ್ನ ಭೌತಿಕ ಚಿನ್ನದ ದಾಸ್ತಾನಿನಲ್ಲಿ(880.52 ಟನ್) ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಸಂದರ್ಭದಲ್ಲಿ ವಿದೇಶಿ ವಿನಿಮಯ ಮೀಸಲನ್ನು ರಕ್ಷಿಸಲು ಆರ್‌ಬಿಐ ಸುಮಾರು 12 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಮಾರಾಟ ಮಾಡಿರಬಹುದು ಎಂಬ ವರದಿಗಳ ಬೆನ್ನಲ್ಲೇ ಕೇಂದ್ರ ಬ್ಯಾಂಕ್ ಈ ಸ್ಪಷ್ಟೀಕರಣ ನೀಡಿದೆ. ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 2026ರ ಮೇ 22ರ ವೇಳೆಗೆ ಶೇ.16.85ಕ್ಕೆ ಏರಿದೆ. ಮಾರ್ಚ್ 31, 2026ರಲ್ಲಿದ್ದ ಒಟ್ಟು 880.52 ಮೆಟ್ರಿಕ್ ಟನ್‌ಗಳಲ್ಲಿ, ವಿತರಣಾ ಇಲಾಖೆ(ಇಶ್ಯೂ ಡಿಪಾರ್ಟ್‌ಮೆಂಟ್) 312.32 ಮೆಟ್ರಿಕ್ ಟನ್ ಹೊಂದಿದ್ದರೆ, ಬ್ಯಾಂಕಿಂಗ್ ಇಲಾಖೆ 568.20 ಮೆಟ್ರಿಕ್ ಟನ್ ಚಿನ್ನವನ್ನು ಹೊಂದಿದೆ.

ಮಾಜಿ ಮಾವೋವಾದಿಗಳ ಕಿರಾಣಿ ಅಂಗಡಿಗೆ ಛತ್ತೀಸ್‌ಗಢ ಸಿಎಂ ಭೇಟಿ

ಪರಿವರ್ತನಾ ಜೀವನ ಕಂಡು ಸಂತಸ

• **ಬಿಜಾಪುರ:** ಪರಿವರ್ತನೆ ಜೀವನ ನಡೆಸಿದರೇ ಜೀವನದಲ್ಲಿ ಎಲ್ಲೆಡೆ ಮನ್ನಣೆ ದೊರಕುವುತ್ತದೆ ಎಂಬುದಕ್ಕೆ ಹಲವು ನಿದರ್ಶಗಳಿವೆ. ಇದಕ್ಕೆ ಸಾಕ್ಷಿ ಎಂಬಂತೆ ಮಾವೋವಾದಿ ಜೀವನದಿಂದ ಹೊರಬಂದು ಇಂದು ನ್ಯಾಯಯುತ ಜೀವನ ನಡೆಸುತ್ತಿರುವ ದಂಪತಿ ಉದಾಹರಣೆಯಾಗಿದ್ದಾರೆ. ಮಾವೋವಾದಿ ಜೀವನದಿಂದ ಹೊರಬಂದ ಮಾಜಿ ನಕ್ಸಲರ ಜೀವನ ರಾಜ್ಯದಲ್ಲಿ ಹೇಗೆ ಪರಿವರ್ತನೆ ಕಂಡಿದೆ ಎಂಬ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಸುಶಾಸನ್ ತಿಹಾರ್‌ನಲ್ಲಿ ನಡೆಸಿದ ಜನಸಂಪರ್ಕ ಕಾರ್ಯಕ್ರಮ ಅಪರೂಪದ ಸನ್ನಿವೇಶಕ್ಕೆ ಸಾಕ್ಷಿಯಾಗಿದೆ.

ಬಿಜಾಪುರದ ಕೊಂಡಪಲ್ಲಿ ಗ್ರಾಮದಲ್ಲಿ ಕಿರಾಣಿ ಅಂಗಡಿ ನಡೆಸುತ್ತಿರುವ ಮಾಜಿ ನಕ್ಸಲ್ ದಂಪತಿ ಮಾಸಾ ತಮೋ ಮತ್ತು ಜಯಮೋತಿಯವರ ಅಂಗಡಿಗೆ ಸಿಎಂ ಸಾಯಿ ಅವರು ಅಚ್ಚರಿ ಭೇಟಿ ನೀಡಿದ್ದಾರೆ. ಈ ಭೇಟಿ ದಂಪತಿಗೆ ಅಚ್ಚರಿ ಮೂಡಿಸಿದರೆ, ಸಿಎಂಗೆ ಖುಷಿ ತಂದಿದೆ. ಈ ಸಂವಾದವು ದಂಪತಿಯ ಸಮಾಜದ ಮುಖ್ಯವಾಹಿನಿಗೆ ಮರಳುವ ಗಮನಾರ್ಹ ಪ್ರಯಾಣವನ್ನು ಪ್ರದರ್ಶಿಸಿದ್ದು ಮಾತ್ರವಲ್ಲದೆ, ಶಾಂತಿ, ಅಭಿವೃದ್ಧಿ ಮತ್ತು ಪುನರ್‌ವಸತಿ ಉತ್ತೇಜಿಸುವ ಪ್ರಯತ್ನಗಳು ಜೀವನವನ್ನು ಸ್ಥಿರವಾಗಿ ಬದಲಾಯಿಸುತ್ತಿರುವ ವಿಶಾಲವಾದ ಪರಿವರ್ತನೆಯನ್ನು ಪ್ರತಿಬಿಂಬಿಸುತ್ತದೆ.

ಹಿಂಸಾಚಾರದಲ್ಲಿ ಭವಿಷ್ಯವಿಲ್ಲ: ಮಾವೋವಾದಿಗಳಾಗಿ ಮುಂದುವರಿದಲ್ಲಿ, ಅದು ನಮ್ಮೊಂದಿಗೆ ಕೊನೆಗೊಳ್ಳುವುದಿಲ್ಲ, ಅದು ತಲೆಮಾರುಗಳವರೆಗೆ ಮುಂದುವರಿಯುತ್ತದೆ ಎಂಬುದನ್ನು ಅರಿತ ಅವರು ಆ ಜೀವನಕ್ಕೆ ವಿದಾಯ ಹೇಳಿ ಹೊಸ ಜೀವನ ನಡೆಸಲು ಪ್ರಾರಂಭಿಸಿದ್ದಾರೆ. 2025ರ ಅಕ್ಟೋಬರ್‌ನಲ್ಲಿ ಶರಣಾಗಲು ನಿರ್ಧರಿಸಿದ ದಂಪತಿ, ಅದರಂತೆ ಸಮಾಜದ ಮುಖ್ಯವಾಹಿನಿಗೆ ಬಂದರು.



ದಂಪತಿ ಜೀವನ ಕತೆಗೆ ಕಿವಿಯಾದ ಸಿಎಂ

ಸಿಎಂ ಕಿರಾಣಿ ಅಂಗಡಿಗೆ ಭೇಟಿ ನೀಡಿದ್ದಲ್ಲದೇ ದಂಪತಿಯ ಭರವಸೆಯ ಕಥೆಗೆ ಕಿವಿಯಾಗಿದ್ದಾರೆ. ಇದರ ಜತೆಗೆ ಒಂದು ಬಾಟಲಿ ನೀರನ್ನು ಖರೀದಿಸಿದ್ದಾರೆ. ಅದೇ ರೀತಿ ದಂಪತಿಗಳೊಂದಿಗೆ ಆತ್ಮೀಯ ಸಂಭಾಷಣೆಯಲ್ಲಿ ತೊಡಗಿ, ಅವರ ಹೋರಾಟ, ಶರಣಾಗತಿ ಮತ್ತು ನವೀಕರಣದ ಕಥೆ ಕೇಳಿ ಖುಷಿಯಾಗಿದ್ದಾರೆ.

ರಾಹುಲ್ ಗಾಂಧಿಗೆ ಅನುಭವ ಇಲ್ಲ: ರಾಮಚಂದ್ರ ಗುಹಾ

ತೈಲ ಬಿಕ್ಕಟ್ಟು, ಯುದ್ಧ ನಿರ್ವಹಣೆ ಮೋದಿಯವರಿಂದ ಮಾತ್ರ ಸಾಧ್ಯ

• **ಬೆಂಗಳೂರು:** ನನಗಿಂತ ಹೆಚ್ಚು ಮೋದಿ-ಬಿಜೆಪಿಯನ್ನು ದ್ವೇಷಿಸುವವರು ಇರಲಾರರು. ಆದರೆ, ಇಂಧನ ಬಿಕ್ಕಟ್ಟು ಅಥವಾ ಯುದ್ಧದಂತಹ ಸನ್ನಿವೇಶವನ್ನು ಪ್ರಧಾನಿ ನರೇಂದ್ರ ಮೋದಿಯವರಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿರ್ವಹಿಸಲಾರರು ಎಂಬುದಾಗಿ ಎಡಪಂಥೀಯ ಇತಿಹಾಸಕಾರ ಹಾಗೂ ರಾಜಕೀಯ ವಿಶ್ಲೇಷಕ ರಾಮಚಂದ್ರ ಗುಹಾ ಅಭಿಪ್ರಾಯಪಟ್ಟಿರುವುದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ.



ರಾಹುಲ್ ಗಾಂಧಿಗೆ, ಅವರ ತಂದೆ, ಅಜ್ಜಿ, ಮುತ್ತಜ್ಜ ಪ್ರಧಾನಿಯಾಗಿದ್ದರು ಎಂಬುದನ್ನು ಹೊರತುಪಡಿಸಿ ಬೇರಾವುದೇ ಯಾವುದೇ ಅರ್ಹತೆ ಇಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಈ ಹಿಂದೆ ರಾಮಚಂದ್ರ ಗುಹಾ ಅವರು ಕಾಂಗ್ರೆಸಿನ ಅತ್ಯಂತ ನಿಕಟವರ್ತಿಯಾಗಿದ್ದವರು ಎಂಬುದಿಲ್ಲಿ ಉಲ್ಲೇಖನೀಯ. ಈ ಹಿಂದಿನ ಆಪರೇಷನ್ ಸಿಂದೂರ್ ಮತ್ತು ಈಗ ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗುಹಾ ಹೇಳಿಕೆ ಕಾಂಗ್ರೆಸಿಗೆ ತೀವ್ರ ಮುಜುಗರವನ್ನುಂಟು ಮಾಡಿದೆ.

ರಾಹುಲ್ ಕಾಂಗ್ರೆಸ್‌ಗೆ ಹೊರೆ: ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಕಾಂಗ್ರೆಸ್‌ಗೆ ಒಂದು ಹೊರೆಯಾಗಿದ್ದಾರೆ. ಕಾಂಗ್ರೆಸಿನ ಕೆಲಸ ಒಂದು ಕುಟುಂಬ ಸಂಸ್ಥೆಯಂತಿದೆ ಎಂದಿರುವ ಗುಹಾ ಅವರು, ರಾಹುಲ್‌ಗೆ 'ಗುರುತ್ವದ ಕೊರತೆ' ಇದೆ ಎನ್ನುವ ಮೂಲಕ ಗಾಂಧಿಯ ನಾಯಕತ್ವದಶೈಲಿಯನ್ನು ಪ್ರಶ್ನಿಸಿದ್ದಾರೆ. ನೆಹರೂ-ಗಾಂಧಿ ಕುಟುಂಬಕ್ಕೆ ನಿಕಟರಾಗಿದ್ದ ರಾಮಚಂದ್ರ ಗುಹಾ ಅವರಂತಹವರೇ ರಾಹುಲ್ ಗಾಂಧಿ ನಾಯಕತ್ವದ ಬಗ್ಗೆ ಪ್ರಶ್ನೆಗಳನ್ನೆತ್ತಿರುವುದು ಗಮನಾರ್ಹವಾಗಿದೆ.

ಸಂಪಾದಕೀಯ

ಅಗ್ನಿ ದುರಂತಗಳು: ನಿರ್ಲಕ್ಷ್ಯ ಸಲ್ಲದು

ದಿಲ್ಲಿಯ ಮಾಳವೀಯ ನಗರ ಪ್ರದೇಶದಲ್ಲಿರುವ ಹೋಟೆಲೊಂದರಲ್ಲಿ ಭೀಕರ ಅಗ್ನಿ ಅನಾಹುತ ಸಂಭವಿಸಿ ವಿದೇಶಿಯರೂ ಸೇರಿದಂತೆ 20ಕ್ಕೂ ಅಧಿಕ ಮಂದಿ ಸಾವಿಗೀಡಾಗಿರುವುದು ಅತ್ಯಂತ ಮನಕಲಕುವ ದುರಂತ. ದುರಂತದಲ್ಲಿ 40ಕ್ಕೂ ಅಧಿಕ ಮಂದಿಯನ್ನು ರಕ್ಷಿಸಲಾಗಿದೆಯಾದರೂ ಅವರಲ್ಲಿ ಕೆಲವರು ಗಂಭೀರ ಸುಟ್ಟ ಗಾಯಗಳನ್ನು ಪಡೆದಿದ್ದಾರೆ. ಇನ್ನು ಕೆಲವರು ಬೆಂಕಿಯಿಂದ ರಕ್ಷಿಸಿಕೊಳ್ಳಲು ಹೋಟೆಲ್ ಮಹಡಿಯಿಂದ ಕೆಳಗೆ ಹಾರಿ ಗಾಯಗೊಂಡ ಘಟನೆಯೂ ನಡೆದಿದೆ. ಇದು ದಿಲ್ಲಿಯಲ್ಲಿ ದಶಕಗಳ ಹಿಂದೆ ನಡೆದ ಉಪಹಾರ್ ಸಿನಿಮಾ ಮಂದಿರದ



ಅಗ್ನಿ ದುರಂತವೂ ಸೇರಿದಂತೆ ಹಲವಾರು ಅಗ್ನಿ ದುರಂತಗಳ ಕಹಿನೆನಪುಗಳನ್ನು ಮತ್ತೊಮ್ಮೆ ಕೆದಕಿದೆ.

ಇಂತಹ ಅಗ್ನಿದುರಂತಗಳು ಆಕಸ್ಮಿಕವಾದರೂ ಬಹುತೇಕ ಬಾರಿ ಮಾನವ ಪ್ರಮಾದಗಳೇ ಇದಕ್ಕೆ ಕಾರಣವಾಗಿರುತ್ತವೆ ಎನ್ನುವುದು ಸುಳ್ಳಲ್ಲ. ಅದರಲ್ಲಿಯೂ ಅಗ್ನಿದುರಂತದಲ್ಲಿ ಸಾವುನೋವುಗಳು ಹೆಚ್ಚಾಗಲಂತೂ ಮಾನವನ ದುರಾಸೆ, ನೀತಿನಿಯಮಗಳ ಉಲ್ಲಂಘನೆ, ಆಡಳಿತದ ನಿರ್ಲಕ್ಷ್ಯ ಮೊದಲಾದವು ಪ್ರಮುಖ ಕಾರಣಗಳಾಗಿರುತ್ತವೆ. ಪ್ರಸಕ್ತ ಮಾಳವೀಯ ನಗರದ ಹೋಟೆಲ್ ದುರಂತದಲ್ಲೂ ಇದೇ ಅಂಶಗಳು ಪ್ರಧಾನವಾಗಿ ಎದ್ದು ಕಾಣುತ್ತಿರುವುದು ದುರ್ದೈವ. ಉಪಹಾರ ಮತ್ತು ವಿರಾಮ ಪಡೆಯಲಷ್ಟೇ ಈ ಹೋಟೆಲ್‌ಗೆ ಅನುಮತಿ ನೀಡಲಾಗಿದ್ದು, ಆರು ಕೊಠಡಿಗಳಿಗಷ್ಟೇ ಪರವಾನಿಗೆ ನೀಡಲಾಗಿತ್ತು. ಆದರೆ ಅಲ್ಲಿ 25 ಕೊಠಡಿಗಳನ್ನು ಪರವಾನಿಗೆರಹಿತವಾಗಿ ಕಟ್ಟಲಾಗಿತ್ತು. ಅಷ್ಟು ದೊಡ್ಡ ಕಟ್ಟಡಕ್ಕೆ ಕೇವಲ ಒಂದು ನಿರ್ಗಮನ ದ್ವಾರವಿದ್ದು, ಅಗ್ನಿಶಾಮಕ ವಾಹನಗಳು ಆಗಮಿಸಲು ಅಗತ್ಯವಾಗಿರುವ ಸೂಕ್ತ ಸ್ಥಳಾವಕಾಶವನ್ನೂ ಬಿಟ್ಟಿರಲಿಲ್ಲ. ಇವೆಲ್ಲವೂ ಆಡಳಿತದ ಕಣ್ಣು ತಪ್ಪಿಸಿ ನಡೆದಿರಲಾರದು. ಸ್ಥಳೀಯಾಡಳಿತವು ಇವನ್ನು ಕಂಡೂ ಕಾಣದಂತೆ ವರ್ತಿಸಿರುವ ಹಾಗೂ ಅದಕ್ಕಾಗಿ ಸೂಕ್ತ 'ಪ್ರತಿಫಲ' ಪಡೆದಿರುವ ಸಾಧ್ಯತೆಗಳೂ ಇವೆ. ಬಹುತೇಕ ಪ್ರಕರಣಗಳಲ್ಲಿ ನಡೆಯುವುದು ಇದೇ ರೀತಿ. ಕಟ್ಟಡ ನಿರ್ಮಾಣದಲ್ಲಂತೂ ಇಂತಹ ನಿಯಮೋಲ್ಲಂಘನೆಗಳು ಸಾಕಷ್ಟು ನಡೆಯುತ್ತವೆ. ಅಗ್ನಿದುರಂತ ತಡೆಗೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ನಿಯಮವಿದ್ದರೂ ಅದನ್ನು ಕಟ್ಟಡ ನಿರ್ಮಾಣದ ವೇಳೆ ಪಾಲಿಸುವುದು ಕಡಿಮೆಯೆ.

ಇದೇವೇಳೆ, ಇತ್ತೀಚಿನ ತಿಂಗಳುಗಳಲ್ಲಿ ಹಲವಾರು ಅಗ್ನಿದುರಂತಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಕುರಿತಂತೆಯೂ ಹೆಚ್ಚಿನ ತನಿಖೆ ನಡೆಯುವ ಅಗತ್ಯವಿದೆ. ರೈಲುಗಳಲ್ಲಿ ಇತ್ತೀಚೆಗೆ ಬೆನ್ನುಬೆನ್ನಿಗೇ ನಡೆದ ಕೆಲವು ಅಗ್ನಿ ಆಕಸ್ಮಿಕಗಳಲ್ಲಿ ವಿಧ್ವಂಸಕರ ಕೈವಾಡವಿರುವುದನ್ನು ಬಳಿಕ ರೈಲ್ವೆ ಇಲಾಖೆ ಪತ್ತೆ ಹಚ್ಚಿತ್ತು. ಅದೇರೀತಿ, ಇನ್ನಿತರ ಅಗ್ನಿ ದುರಂತಗಳಲ್ಲೂ ವಿಧ್ವಂಸಕರ ಕೈವಾಡವಿದೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕಾಗಿದೆ. ದೇಶದ ಶಾಂತಿ, ಸುವ್ಯವಸ್ಥೆಯನ್ನು ಕೆಡಿಸಲು ದುಷ್ಟಶಕ್ತಿಗಳು ಸಕ್ರಿಯವಾಗಿರುವ ಹಿನ್ನೆಲೆಯಲ್ಲಿ ಈ ಆಯಾಮದಲ್ಲೂ ತನಿಖೆ ನಡೆಯುವುದು ಅವಶ್ಯವಾಗಿದೆ.

ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ



ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com

ಕೃತಕ ಬುದ್ಧಿಮತ್ತೆ ಇಂದು ಕೇವಲ ತಂತ್ರಜ್ಞಾನದ ಪದವಲ್ಲ, ಅದು ನಮ್ಮ ಬದುಕಿನ ರೀತಿ, ಕೆಲಸದ ವಿಧಾನ ಮತ್ತು ಜ್ಞಾನದ ಪ್ರವಾಹವನ್ನೇ ಮರುರೂಪಿಸುತ್ತಿರುವ ಮಹಾಶಕ್ತಿ ಎಂದರೆ ತಪ್ಪಾಗಲಾರದು. ಕೈಗಾರಿಕೆ, ಶಿಕ್ಷಣ, ಆರೋಗ್ಯ, ಕೃಷಿ, ಮಾಧ್ಯಮ ಮತ್ತು ಆಡಳಿತ ಸೇರಿದಂತೆ ಎಲ್ಲ ಕ್ಷೇತ್ರಗಳ ಮೇಲೂ ಅದರ ಪ್ರಭಾವ ಆಳವಾಗಿ ಬೀಳುತ್ತಿದೆ. ಇಂತಹ ಸಮಯದಲ್ಲಿ ಭಾರತದಂತಹ ಬಹುಭಾಷಿಕ ದೇಶದ ಮುಂದೆ ಒಂದು ಅತ್ಯಂತ ಮಹತ್ವದ ಪ್ರಶ್ನೆ ನಿಂತಿದೆ. ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ ಯಾವ ದಿಕ್ಕಿಗೆ ಸಾಗಲಿದೆ? ಕನ್ನಡ ಸೇರಿದಂತೆ ನಮ್ಮ ಭಾಷೆಗಳು ಈ ಹೊಸ ತಂತ್ರಜ್ಞಾನ ಅಲೆಯೊಂದಿಗೆ ಬೆಳೆದು ಬಲವಾಗಲಿವೆಯೇ ಅಥವಾ ಕ್ರಮೇಣ ಅಂಚಿಗೆ ಸರಿಯಲಿವೆಯೇ? ಇದು ಸದ್ಯಕ್ಕೆ ಎದ್ದಿರುವ ಪ್ರಶ್ನೆ.

ಹಿಂದೊಂದು ಕಾಲದಲ್ಲಿ ತಂತ್ರಜ್ಞಾನ ಅರ್ಥವಾಗಬೇಕಾದರೆ, ಇಂಗ್ಲಿಷ್ ಭಾಷೆ ಬೇಕೇ ಬೇಕು ಎಂಬಂತೆ ಆಲೋಚನೆ ಇತ್ತು. ಕಂಪ್ಯೂಟರ್ ಬಳಸುವುದರಿಂದ ಹಿಡಿದು ಅಂತರ್ಜಾಲದಲ್ಲಿ ಮಾಹಿತಿ ಹುಡುಕುವ ತನಕ, ಡಿಜಿಟಲ್ ಜಗತ್ತಿನ ಬಹುತೇಕ ಬಾಗಿಲುಗಳು ಇಂಗ್ಲಿಷ್ ಮೂಲಕವೇ ತೆರೆಯುತ್ತವೆ ಎಂಬ ಸ್ಥಿತಿ ಇತ್ತು. ಇದರ ಪರಿಣಾಮವಾಗಿ ಭಾರತೀಯ ಭಾಷೆಗಳು, ವಿಶೇಷವಾಗಿ ಪ್ರಾದೇಶಿಕ ಭಾಷೆಗಳು, ತಂತ್ರಜ್ಞಾನ ಕ್ಷೇತ್ರದಲ್ಲಿ ಹಿಂಬದಿಗೆ ಸರಿದವು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಈ ಚಿತ್ರಣ ಗಮನಾರ್ಹವಾಗಿ ಬದಲಾಗಿದೆ. ಭಾಷಾಮಾದರಿಗಳು, ಧ್ವನಿ ಗುರುತಿಸುವ ವ್ಯವಸ್ಥೆಗಳು, ಸ್ವಯಂ ಅನುವಾದ ಸಾಧನಗಳು ಮತ್ತು ಸಂವಾದಾತ್ಮಕ ಎಐ ವೇದಿಕೆಗಳು ಸ್ಥಳೀಯ ಭಾಷೆಗಳಿಗೆ ಹೊಸ ಅವಕಾಶಗಳನ್ನು ನೀಡಲು ಆರಂಭಿಸಿವೆ. ಇದರಿಂದ ಡಿಜಿಟಲ್ ಪ್ರವೇಶ ಇಂಗ್ಲಿಷ್ ಬಲ್ಲವರಿಗಷ್ಟೇ ಸೀಮಿತವಿಲ್ಲ ಎಂಬ ನಂಬಿಕೆ ಬಲಪಡುತ್ತಿದೆ.

ಇಂದು ಕನ್ನಡದಲ್ಲೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು ಸಾಧ್ಯವಾಗಿದೆ. ಕನ್ನಡದಲ್ಲೇ ಲೇಖನ ಬರೆಯಬಹುದು, ಪಠ್ಯವನ್ನು ಅನುವಾದಿಸಬಹುದು, ಪ್ರಸ್ತುತಿಗಳು ಮತ್ತು ಭಾಷಣಗಳನ್ನು ಸಿದ್ಧಪಡಿಸಬಹುದು. ಗ್ರಾಮೀಣ ರೈತನು ತನ್ನ ನೆಲದ ಸಮಸ್ಯೆಗೆ ತನ್ನ ಭಾಷೆಯಲ್ಲೇ ಕೃಷಿ ಸಲಹೆ ಪಡೆದುಕೊಳ್ಳಬಹುದು. ವಿದ್ಯಾರ್ಥಿಯೊಬ್ಬ ಕಷ್ಟವಾದ ಇಂಗ್ಲಿಷ್ ವಿಷಯವನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯ ನಾಗರಿಕನಿಗೆ ಸರ್ಕಾರಿ ಸೇವೆಗಳು, ಆರೋಗ್ಯ ಮಾಹಿತಿ ಮತ್ತು ಶಿಕ್ಷಣ ಸಂಬಂಧಿತ ನೆರವು ಸ್ಥಳೀಯ ಭಾಷೆಯಲ್ಲೇ ತಲುಪಬಹುದು. ತಂತ್ರಜ್ಞಾನವು ಜನರಿಗೆ ನಿಜವಾದ ಅರ್ಥದಲ್ಲಿ ಉಪಯುಕ್ತವಾಗುವುದಾದರೆ ಅದು ಅವರ ಭಾಷೆಯಲ್ಲಿ ಮಾತನಾಡಬೇಕು. ಈ ಅರ್ಥದಲ್ಲಿ ಎಐ ಭಾಷೆ ಪ್ರಜಾಪ್ರಭುತ್ವಕ್ಕೆ ಹೊಸ ಬಾಗಿಲು ತೆರೆದಿದೆ.

ಎಐ ಭಾರತೀಯ ಭಾಷೆಗಳ ಬೆಳವಣಿಗೆಗೆ ಒಂದು ಅಪರೂಪದ ಐತಿಹಾಸಿಕ ಅವಕಾಶವನ್ನೂ ಒದಗಿಸಿದೆ. ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿರುವ ಪುಸ್ತಕಗಳು, ಪತ್ರಿಕೆಗಳು, ಸಂಶೋಧನಾ ಕೃತಿಗಳು, ಶಾಸನಗಳು, ಜನಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ದಾಖಲೆಗಳು ಈಗ ವೇಗವಾಗಿ ಡಿಜಿಟಲ್ ರೂಪಕ್ಕೆ ಬರುತ್ತಿವೆ. ಹಿಂದೆ ಕೆಲವೇ ವಾಚನಾಲಯಗಳಲ್ಲಿ ಸೀಮಿತವಾಗಿದ್ದ ಜ್ಞಾನಸಂಪತ್ತು ಇಂದು ಬಹು ಜನರಿಗೆ ತಲುಪುವ ಅವಕಾಶ ಪಡೆಯುತ್ತಿದೆ. ಇದು ಕೇವಲ ಭಾಷೆಯನ್ನು ಉಳಿಸುವ ಕಾರ್ಯವಲ್ಲ, ಅದರಲ್ಲಿರುವ ಜ್ಞಾನವನ್ನು ಹೊಸ ಪೀಳಿಗೆಗಳಿಗೆ ಜೀವಂತವಾಗಿ ಸಾಗಿಸುವ ಪ್ರಕ್ರಿಯೆಯಾಗಿದೆ.

ಭಾರತದಲ್ಲಿ ಭಾಷಾ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಸರ್ಕಾರದ ಪಾತ್ರವೂ ನಿರ್ಣಾಯಕವಾಗಿದೆ. ಡಿಜಿಟಲ್ ಇಂಡಿಯಾ ಮುಂತಾದ ಯೋಜನೆಗಳು ಭಾರತೀಯ ಭಾಷೆಗಳನ್ನು ತಂತ್ರಜ್ಞಾನದ ಕೇಂದ್ರವಲಯಕ್ಕೆ ತರಬೇಕೆಂಬ ಆಶಯವನ್ನು ಹೊತ್ತಿವೆ. ಆದರೆ ಉದ್ದೇಶ ಘೋಷಿಸುವುದಷ್ಟೇ ಸಾಕಾಗುವುದಿಲ್ಲ, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಖಾಸಗಿ ತಂತ್ರಜ್ಞಾನ ಕಂಪನಿಗಳು, ಪ್ರಕಾಶಕರು ಮತ್ತು ಭಾಷಾ ತಜ್ಞರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಸಮೃದ್ಧ ಭಾಷಾ ಸಂಪನ್ಮೂಲಗಳು ನಿರ್ಮಾಣವಾಗುತ್ತವೆ. ನಿಘಂಟುಗಳು, ಪಠ್ಯ ಸಂಗ್ರಹಗಳು, ಧ್ವನಿ ಡೇಟಾ ಮತ್ತು ವಿವಿಧ ಬಳಕೆಯ ಉದಾಹರಣೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸುವುದು ಭಾಷಾಭವಿಷ್ಯದ ದೃಢ ನೆಲೆಯಲ್ಲಿ ಒಂದಾಗಿದೆ.

ಭಾರತದ ಭಾಷಾ ವೈವಿಧ್ಯತೆ ಜಗತ್ತಿನಲ್ಲಿ ಅಪರೂಪದ ಸಂಪತ್ತಾಗಿದೆ. ಸಂವಿಧಾನ ಮಾನ್ಯತೆ ನೀಡಿರುವ ಭಾಷೆಗಳ ಜೊತೆಗೆ ಅನೇಕ ಉಪ ಭಾಷೆಗಳು, ಪ್ರಾದೇಶಿಕ ಉಚ್ಚಾರಣೆಗಳು ಮತ್ತು ಸ್ಥಳೀಯ ಅಭಿವ್ಯಕ್ತಿಗಳು ನಮ್ಮ ಸಾಂಸ್ಕೃತಿಕ ಜೀವಂತಿಕೆಯನ್ನು ಪ್ರತಿನಿಧಿಸುತ್ತವೆ. ಇಂತಹ ವೈವಿಧ್ಯಪೂರ್ಣ ಪರಿಸರದಲ್ಲಿ ಎಐ ಅಭಿವೃದ್ಧಿಪಡಿಸುವುದು ಸುಲಭವಲ್ಲ, ಆದರೆ ಇದೇ ಸಂಕೀರ್ಣತೆ ಭಾರತವನ್ನು ಜಾಗತಿಕ ಮಟ್ಟದಲ್ಲಿ ಬಹುಭಾಷಿಕ ತಂತ್ರಜ್ಞಾನ ಅಭಿವೃದ್ಧಿಯ ಮುಂಚೂಣಿ ರಾಷ್ಟ್ರವನ್ನಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಅನೇಕ ಭಾಷೆಗಳ ನಡುವೆ ಸುಗಮವಾಗಿ ಕಾರ್ಯನಿರ್ವಹಿಸಬಲ್ಲ ಎಐ ಮಾದರಿಗಳು ಕೇವಲ ಭಾರತಕ್ಕಲ್ಲ, ಜಗತ್ತಿನ ಇತರ ಬಹುಭಾಷಿಕ ಸಮಾಜಗಳಿಗೂ ದಾರಿದೀಪವಾಗಬಹುದು.

ಸದ್ಯ ಭಾಷೆಗಳಿಗೆ ಒಂದಷ್ಟು ಸವಾಲುಗಳೂ ಎದ್ದಿವೆ ಅಂದರೆ, ಮಹತ್ವದ ಸವಾಲು ಡೇಟಾದ ಕೊರತೆ. ಎಐ ಯಾವುದೇ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಅದಕ್ಕೆ ಲಭ್ಯವಿರುವ ವಿಷಯದ ಆಧಾರದ ಮೇಲೆ. ಇಂಗ್ಲಿಷ್ ಭಾಷೆಯಲ್ಲಿ ಅಪಾರ ಪ್ರಮಾಣದ ಡಿಜಿಟಲ್ ವಿಷಯ ಲಭ್ಯವಿರುವುದರಿಂದ ಅದರ ಅಭಿವೃದ್ಧಿ ವೇಗವಾಗಿ ಸಾಗುತ್ತದೆ. ಆದರೆ ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯ, ಸಂಶೋಧನೆ, ಧ್ವನಿ ಮತ್ತು ಸಂವಾದ ಡೇಟಾ ಇನ್ನೂ ಸಮರ್ಪಕ ಪ್ರಮಾಣದಲ್ಲಿ ಲಭ್ಯವಿಲ್ಲ. ಈ ಕೊರತೆಯನ್ನು ನೀಗಿಸದೆ ಭಾಷಾ ತಂತ್ರಜ್ಞಾನವನ್ನು ಸಮಾನತೆಯ ದೃಷ್ಟಿಯಿಂದ ಬೆಳೆಸಲು ಸಾಧ್ಯವಿಲ್ಲ. ಇಲ್ಲದಿದ್ದರೆ ತಂತ್ರಜ್ಞಾನದ ಪ್ರಗತಿಯಲ್ಲಿಯೂ ಭಾಷಾ ಅಸಮಾನತೆ ಮುಂದುವರಿಯುವ ಅಪಾಯ ಹೆಚ್ಚುತ್ತದೆ.

ಇಂದಿನ ಮಕ್ಕಳು ಮತ್ತು ಯುವಜನರು ಡಿಜಿಟಲ್ ಜಗತ್ತಿನಲ್ಲೇ ಬೆಳೆಯುತ್ತಿದ್ದಾರೆ. ಅವರ ಕಲಿಕೆ, ಮನರಂಜನೆ, ಸಂವಹನ ಮತ್ತು ಅಭಿವ್ಯಕ್ತಿ ಹೆಚ್ಚಾಗಿ ಮೊಬೈಲ್ ಮತ್ತು ಇಂಟರ್ನೆಟ್ ಮೂಲಕವೇ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಆಕರ್ಷಕ, ಸಮಕಾಲೀನ ಮತ್ತು ಗುಣಮಟ್ಟದ ಡಿಜಿಟಲ್ ವಿಷಯಗಳನ್ನು ನಿರ್ಮಿಸುವುದು ಅತ್ಯಗತ್ಯ. ಇಂಥ ಸಂದರ್ಭದಲ್ಲಿ ಮಾಧ್ಯಮಗಳು, ಪ್ರಕಾಶಕರು, ಲೇಖಕರು ಮತ್ತು ಶಿಕ್ಷಕರ ಪಾತ್ರ ಇನ್ನಷ್ಟು ದೊಡ್ಡದಾಗುತ್ತದೆ. ಇಂದು ಅಂತರ್ಜಾಲದಲ್ಲಿ ಪ್ರಕಟವಾಗುವ ವಿಷಯವೇ ನಾಳೆಯ ಎಐಗೆ ಕಲಿಕೆಯ ಆಧಾರವಾಗುತ್ತದೆ. ಆದ್ದರಿಂದ ಕನ್ನಡದಲ್ಲಿ ಹೆಚ್ಚು ಗುಣಮಟ್ಟದ, ಪರಿಶುದ್ಧ ಮತ್ತು ವೈವಿಧ್ಯಮಯ ಡಿಜಿಟಲ್ ವಿಷಯ ಸೃಷ್ಟಿಯಾಗುವುದು ಅತ್ಯಗತ್ಯ. ನಮ್ಮ ಭಾಷೆಯಲ್ಲಿನ ಸಮೃದ್ಧ ವಿಷಯ ಹೆಚ್ಚಿದಷ್ಟೂ ಎಐ ಕೂಡ ಕನ್ನಡವನ್ನು ಹೆಚ್ಚು ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗುತ್ತದೆ. ಭಾಷೆಯ ಭವಿಷ್ಯವನ್ನು ಕೇವಲ ತಂತ್ರಜ್ಞಾನ ಕಂಪನಿಗಳ ಕೈಗೆ ಬಿಡದೆ, ಸಮಾಜವೇ ಅದರ ನಿರ್ಮಾಣದಲ್ಲಿ ಭಾಗವಹಿಸಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಎಐ ಹೊಸ ದಿಕ್ಕುಗಳನ್ನು ತೆರೆದಿದೆ. ಸ್ಥಳೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯವಸ್ತುಗಳನ್ನು ಸಿದ್ಧಪಡಿಸುವುದು, ವಿದ್ಯಾರ್ಥಿಗಳ ಕಲಿಕೆಯ ವೇಗಕ್ಕೆ ತಕ್ಕಂತೆ ವೈಯಕ್ತಿಕ ಸಹಾಯ ಒದಗಿಸುವುದು ಮತ್ತು ಕಠಿಣ ವಿಷಯಗಳನ್ನು ಸರಳ ಭಾಷೆಯಲ್ಲಿ ಅರ್ಥಮಾಡಿಕೊಡುವುದು ಈಗ ಸಾಧ್ಯವಾಗುತ್ತಿದೆ. ಮಾತೃಭಾಷಾಶಿಕ್ಷಣದ ಮಹತ್ವವನ್ನು ಪುನಃ ಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ ಎಐ ಒಂದು ಪರಿಣಾಮಕಾರಿ ಸಹಾಯಕ ಸಾಧನವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಆದರೆ ಅದನ್ನು ಸರಿಯಾಗಿ ಬಳಸಲು ಶಿಕ್ಷಕರ ಮಾರ್ಗದರ್ಶನ ಮತ್ತು ವಿಷಯದ ಗುಣಮಟ್ಟ ಎರಡೂ ಅವಶ್ಯಕ.

ಆದರೂ ತಂತ್ರಜ್ಞಾನವನ್ನು ಅಂತಿಮ ಪರಿಹಾರವೆಂದು ಭಾವಿಸುವುದು ತಪ್ಪು. ಭಾಷೆಯನ್ನು ಉಳಿಸುವುದು ಮತ್ತು ಬೆಳೆಸುವುದು ಕೇವಲ ಯಂತ್ರಗಳ ಹೊಣೆಗಾರಿಕೆಯಾಗುವುದಿಲ್ಲ. ಅದು ಸಮಾಜದ, ಶಿಕ್ಷಣ ಸಂಸ್ಥೆಗಳ, ಮಾಧ್ಯಮಗಳ, ಸರ್ಕಾರದ ಮತ್ತು ಪ್ರತಿಯೊಬ್ಬ ಭಾಷಾಭಿಮಾನಿಯ ಸಹಭಾಗಿತ್ವದಿಂದ ಮಾತ್ರ ಸಾಧ್ಯ. ಮನೆಗಳಲ್ಲಿ, ಶಾಲೆಗಳಲ್ಲಿ, ಕಚೇರಿಗಳಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಭಾಷೆಯ ಬಳಕೆ ಕುಂಠಿತವಾದರೆ ಅತ್ಯಾಧುನಿಕ ಎಐ ಕೂಡ ಆ ಭಾಷೆಯ ಜೀವಂತಿಕೆಯನ್ನು ಉಳಿಸಲು ಸಾಧ್ಯವಿಲ್ಲ. ಆದ್ದರಿಂದ ತಂತ್ರಜ್ಞಾನದ ಜೊತೆಗೆ ಮಾನವ ಬದ್ಧತೆಯೂ ಅನಿವಾರ್ಯವಾಗಿದೆ.

ಭಾರತವು ಜಗತ್ತಿನ ಅತ್ಯಂತ ಶ್ರೀಮಂತ ಭಾಷಾವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದು. ಈ ವೈವಿಧ್ಯತೆ ನಮ್ಮ ಸಾಂಸ್ಕೃತಿಕ ಶಕ್ತಿ, ಬೌದ್ಧಿಕ ಪರಂಪರೆ ಮತ್ತು ಸಾಮಾಜಿಕ ಚೈತನ್ಯದ ಗುರುತು. ಎಐ ಯುಗದಲ್ಲಿ ಈ ಭಾಷೆಗಳನ್ನು ಕೇವಲ ಸಂರಕ್ಷಿಸಬೇಕೆಂಬ ಮಟ್ಟದಲ್ಲಿ ನಿಲ್ಲುವುದು ಸಾಕಾಗುವುದಿಲ್ಲ. ಅವನ್ನು ಜ್ಞಾನಸೃಷ್ಟಿಯ, ಸಂಶೋಧನೆಯ, ನವೋದ್ಯಮದ ಮತ್ತು ಸಾರ್ವಜನಿಕ ಸಂವಾದದ ಪ್ರಬಲ ಮಾಧ್ಯಮಗಳನ್ನಾಗಿ ರೂಪಿಸುವ ಅಗತ್ಯ ಇದೆ. ಆಗ ಮಾತ್ರ ಭಾಷೆಗಳು ಭೂತಕಾಲದ ಸ್ಮಾರಕಗಳಾಗದೇ ಭವಿಷ್ಯದ ಸಾಧನಗಳಾಗುತ್ತವೆ.

ಕೊನೆಗೆ ಹೇಳುವುದಾದರೆ, ಎಐ ಯುಗದಲ್ಲಿ ಕನ್ನಡ ಉಳಿಯುತ್ತದೆಯೇ ಎಂಬ ಪ್ರಶ್ನೆ ಈಗ ಅಪ್ರಸ್ತುತ. ಕನ್ನಡ ಉಳಿಯುವುದು ಖಚಿತ. ಆದರೆ ಅದು ಡಿಜಿಟಲ್ ಜಗತ್ತಿನಲ್ಲಿ ನಾಯಕತ್ವ ವಹಿಸುತ್ತದೆಯೇ, ಜ್ಞಾನ ಸೃಷ್ಟಿಯ ಭಾಷೆಯಾಗುತ್ತದೆಯೇ ಮತ್ತು ಹೊಸ ತಲೆಮಾರಿನ ಚಿಂತನೆಯ ಮಾಧ್ಯಮವಾಗುತ್ತದೆಯೇ ಎಂಬುದೇ ನಮ್ಮ ಮುಂದಿರುವ ನಿಜವಾದ ಸವಾಲು. ಅದಕ್ಕೆ ಉತ್ತರವನ್ನು ನಾವು ಇಂದು ತೆಗೆದುಕೊಳ್ಳುವ ನಿರ್ಧಾರಗಳೇ ನಿರ್ಧರಿಸಲಿವೆ.

ತಂತ್ರಜ್ಞಾನವು ಭಾಷೆಯ ಪ್ರತಿಸ್ಪರ್ಧಿಯಲ್ಲ, ಅದು ಸರಿಯಾಗಿ ಬಳಸಿದರೆ ಭಾಷೆಯ ಅತ್ಯಂತ ಶಕ್ತಿಶಾಲಿ ಸಹಯೋಗಿಯಾಗಬಹುದು. ಭಾರತೀಯ ಭಾಷೆಗಳ ಭವಿಷ್ಯವನ್ನು ನಿರ್ಧರಿಸುವುದು ಯಂತ್ರಗಳಲ್ಲ, ಅವುಗಳನ್ನು ಬಳಸುವ ನಮ್ಮ ದೃಷ್ಟಿಕೋನ ಮತ್ತು ಬದ್ಧತೆಯೇ ಆಗಿದೆ.

ತುಪ್ಪವು ನಾಲಗೆಗೆ ಅಂಟುವುದಿಲ್ಲ

ಅಜ್ಞಂ ಕರ್ಮಾಣಿ ಲಿಂಪಂತಿ ತಜ್ಞಂ ಕರ್ಮ ನ ಲಿಂಪತಿ।
ಲಿಪ್ಯತೇ ರಸನೈವೈಕಾ ಸರ್ಪಿಷಾ ನ ತಥಾ ಕರಃ ॥

ಅಜ್ಞನನ್ನು ಕರ್ಮಗಳು ಅಂಟುವವು. ಬಲ್ಲವನನ್ನು ಕರ್ಮಗಳು ಅಂಟುವುದಿಲ್ಲ, ತುಪ್ಪವು ಕೈಗೆ ಅಂಟಿಕೊಂಡ ಹಾಗೆ ನಾಲಗೆಗೆ ಮಾತ್ರ ಅಂಟುವುದಿಲ್ಲ -ಎಂಬುದು ಶ್ಲೋಕಾರ್ಥ



ತುಪ್ಪ ಗೊತ್ತಿಲ್ಲದವರಿಲ್ಲ, ತುಪ್ಪವನ್ನು ತಿಂದಿರದವರು ಇಲ್ಲ. ನಮ್ಮ ಭಾರತೀಯ ಪರಂಪರೆಯಲ್ಲಿ ತುಪ್ಪಕ್ಕೆ ಮಹತ್ವದ ಸ್ಥಾನವಿದೆ ಎಂಬುದನ್ನು 'ಘೃತೇನ ವರ್ಧತೇ ಬುದ್ಧಿಃ' ಎಂಬ ಪ್ರಸಿದ್ಧ ಸೂಕ್ತಿ ತಿಳಿಸುತ್ತದೆ. 'ಘೃತಮಾಯುಃ ಘೃತಂ ಜ್ಯೋತಿಃ' ಎಂಬುದು ಪ್ರಸಿದ್ಧವಾದ ಇನ್ನೊಂದು ಲೋಕೋಕ್ತಿ. ತುಪ್ಪವೇ ಆಯಸ್ಸು, ತುಪ್ಪವೇ ಬೆಳಕು ಎಂಬುದು ಇದರ ಅರ್ಥ. ಆಯುಷ್ಯ ವೃದ್ಧಿಗಾಗಿ, ಆರೋಗ್ಯಪೂರ್ಣ ಬದುಕಿಗಾಗಿ ತುಪ್ಪವನ್ನು ತಿನ್ನಬೇಕು ಎಂಬುದು ಲಾಗಾಯ್ತಿನಿಂದಲೂ ಪ್ರಚಲಿತದಲ್ಲಿರುವ ಮಾತು. ಶುದ್ಧವಾದ ಬೆಳಕು, ಆರೋಗ್ಯಪೂರ್ಣ ವಾತಾವರಣ ಮನೆಯಲ್ಲಿರಬೇಕು ಎಂದು ನಾವು ಬಯಸುವುದಾದರೆ ಮನೆಯಲ್ಲಿ ತುಪ್ಪದ ದೀಪ ಬೆಳಗಿಸಬೇಕು ಎಂಬ ಪರಿಪಾಠವಿದೆ. ದೇವರ ಮುಂದೆ ತುಪ್ಪದ ದೀಪ ಹಚ್ಚುವುದು ಸರ್ವಶ್ರೇಷ್ಠ. ತುಪ್ಪದ ದೀಪ ಹಚ್ಚುತ್ತೇನೆ ಎಂದು ಹರಕೆ ಹೇಳುವವರಿದ್ದಾರೆ.

ಆಯುರ್ವೇದದ ದೃಷ್ಟಿಯಲ್ಲಿಯೂ ತುಪ್ಪ ಅತ್ಯಂತ ಮಹತ್ವದ್ದು. ಬೇರೆ ಬೇರೆ ರೋಗಗಳಿಗೆ ಆಯುರ್ವೇದದಲ್ಲಿ ಹೇಳುವ ಘೃತ ದಿವ್ಯೌಷಧಿ.

ಅಡುಗೆಯಲ್ಲಿಯೂ ಇದರ ಸ್ಥಾನ ಮಹತ್ವದ್ದು. ಶುದ್ಧ ತುಪ್ಪದಲ್ಲಿ ಮಾಡಿದ್ದು, ತುಪ್ಪದ ಒಗ್ಗರಣೆ, ಊಟದಲ್ಲಿ ಮೇಲಿನಿಂದ ತುಪ್ಪ ಬಳಸುವುದು ಇವೆಲ್ಲವೂ ರುಚಿಯನ್ನು ಇಮ್ಮಡಿಗೊಳಿಸುತ್ತದೆ. ಹೋಮಾದಿಗಳಲ್ಲಿ ಆಜ್ಯಾಹುತಿ ಶ್ರೇಷ್ಠ. ಒಟ್ಟಿನಲ್ಲಿ ತುಪ್ಪ ಮನುಕುಲದ ಅವಿಭಾಜ್ಯ ಅಂಗವೆಂದರೂ ತಪ್ಪಾಗಲಾರದು.

ತುಪ್ಪದ ವಿಶೇಷ ಗುಣವೆಂದರೆ ಕೈಗೆ ಅಂಟಿಕೊಳ್ಳುವುದು. ಕೈಗೆ ಅಂಟಿದರೆ ಸುಲಭದಲ್ಲಿ ಜಿಡ್ಡಿನ ಅಂಶ ಹೋಗುವುದಿಲ್ಲ. ಸ್ವಲ್ಪವೇ ತಾಗಿದರೂ ಆ ಜಿಡ್ಡಿನ ಅಂಶವನ್ನು ತೊಳೆದುಕೊಳ್ಳಲು ಸಾಬೂನು ಇತ್ಯಾದಿ ಬಳಸಬೇಕು. ಆಶ್ಚರ್ಯವೆಂದರೆ ತುಪ್ಪವೆಂದೂ ನಾಲಿಗೆಗೆ ಅಂಟಿಕೊಳ್ಳದು. ಎಷ್ಟೇ ತುಪ್ಪ ತಿಂದರೂ ಸಣ್ಣ ಕುರುಹು ಕೂಡಾ ನಾಲಿಗೆಯಲ್ಲಿರುವುದಿಲ್ಲ. ಇದು ಘೃತ ವೈಶಿಷ್ಟ್ಯ.

ಈ ಗುಣ ಧರ್ಮವನ್ನು ದೃಷ್ಟಾಂತವಾಗಿರಿಸಿ ಕವಿಯು ಕರ್ಮವಾಗಿ ವ್ಯಾಖ್ಯಾನಿಸುತ್ತಾನೆ ಕೈಗೆ ತುಪ್ಪವು ಅಂಟುವಂತೆ ಕರ್ಮವು ಅಜ್ಞರಿಗೆ ಅಂಟಿಕೊಳ್ಳುತ್ತದೆ. ನಾಲಿಗೆಗೆ ಅಂಟದಿರುವಂತೆ ತಜ್ಞರನ್ನು ಕರ್ಮವು ಅಂಟುವುದಿಲ್ಲ ಎಂಬುದಾಗಿ.

ಯಾವುದೇ ಕೆಲಸವನ್ನು ಮಾಡುವಾಗಲೂ ಪ್ರಾಮಾಣಿಕವಾಗಿ ಜಾಗೃತೆಯಿಂದ ಮಾಡಬೇಕು. ಯಾವುದೇ ದೋಷವಾಗದಂತೆ, ಆಕ್ಷೇಪಕ್ಕೆ ಈಡಾಗದಂತೆ ಕರ್ತವ್ಯವನ್ನು ನಿರ್ವಹಿಸಬೇಕು. ನಾಲಿಗೆಗೆ ತುಪ್ಪ ಅಂಟದ ತೆರದಲ್ಲಿ ಕರ್ಮಕ್ಕೆ ಅಂಟಿಕೊಳ್ಳಬಾರದು. ಬಲ್ಲವರು ಅಥವಾ ತಜ್ಞರು ಇದೇ ರೀತಿ ಬದುಕುತ್ತಾರೆ. ಇದೇ ರೀತಿ ಬದುಕನ್ನು ಕಟ್ಟಿಕೊಳ್ಳಬೇಕು. ಅಜ್ಞರು ಕರ್ಮದಲ್ಲಿ ತೊಡಗಿದರೆ ಕರ್ಮವನ್ನು ಬದುಕಿನುದ್ದಕ್ಕೂ ಅಂಟಿಸಿಕೊಳ್ಳುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ಈಡಾಗುತ್ತಾರೆ. ನೀರಿನಲ್ಲಿಯೇ ಇದ್ದರೂ ಕಮಲದ ಎಲೆ ನೀರನ್ನು ಅಂಟಿಸಿಕೊಳ್ಳದಿರುವಂತೆ, ಮಳೆ ಹನಿ ಬಿದ್ದರೂ ಕೆಸುವಿನ ಎಲೆ ಅಂಟಿಸಿಕೊಳ್ಳದಂತೆ ಕರ್ಮವನ್ನು ಮಾಡುತ್ತಾ, ಅದಕ್ಕೆ ಅಂಟಿಕೊಳ್ಳದೆ ಪ್ರಾಮಾಣಿಕವಾಗಿ ತಜ್ಞರೆನಿಸಿಕೊಳ್ಳಬೇಕೇ ವಿನಾ ಮೈ-ಮನಗಳನ್ನು ಗಬ್ಬೆಬ್ಬಿಸಿಕೊಳ್ಳುವ ಅಜ್ಞರಾಗಬಾರದು. ಇದನ್ನು ಕವಿ ಘೃತದ ದೃಷ್ಟಾಂತದೊಂದಿಗೆ ನಿರೂಪಿಸಿದ್ದಾನೆ.

ಮಾರ್ಕ್ಸಿಸ್ಟ್ ಇತಿಹಾಸಕಾರರ ಏಕಸ್ವಾಮ್ಯ ಮುರಿಯುತ್ತಿದೆ

ಸದಾನಂದ ಹೆಗ್ಡೆ



ತಥಾಕಥಿತ 'ಖ್ಯಾತ' ಇತಿಹಾಸಕಾರರಾದ ರೋಮಿಲಾ ಥಾಪರ್ ತಮ್ಮ ಒಂದು ವಿಡಿಯೋದಲ್ಲಿ ''ಪತಂಜಲಿಯು ಬ್ರಾಹ್ಮಣರು ಮತ್ತು ಶ್ರಮಣರ ನಡುವಿನ ಸಂಬಂಧವು ಹಾವು ಮುಂಗುಸಿಯಂತಿದೆ ಎಂಬುದಾಗಿ ಬಣ್ಣಿಸಿದ್ದಾನೆ'' ಎಂದು ಹೇಳಿರುವುದು ವೈರಲ್ ಆಗಿದೆ. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಸಂಘರ್ಷ ನಡೆಯುತ್ತಿತ್ತು ಎಂದು ಬಿಂಬಿಸುವ ಮಾರ್ಕ್ಸಿಸ್ಟ್ ಇತಿಹಾಸಕಾರರ ಚಾಳಿಗೆ ಥಾಪರ್ ಅವರ ಈ ಹೇಳಿಕೆಯೂ ಒಂದು ಸೂಕ್ತ ನಿದರ್ಶನ. ಆದರೆ "ಪತಂಜಲಿಯ ಮಹಾಭಾಷ್ಯದಲ್ಲಿ ಎಲ್ಲಿಯೂ ಇಂತಹ ವರ್ಣನೆ ಕಾಣಲು ಸಿಗುವುದೇ ಇಲ್ಲ. ಅವರ ಗ್ರಂಥದಲ್ಲಿ ಕೇವಲ ಒಂದು ಬಾರಿ ಮಾತ್ರ ಬ್ರಾಹ್ಮಣ ಮತ್ತು ಶ್ರಮಣರ ಉಲ್ಲೇಖ ಬರುತ್ತದೆ. ಆದರೆ ಅಲ್ಲಿಯೂ ಹಾವು-ಮುಂಗುಸಿಯ ಪ್ರಸ್ತಾವನೆ ಇಲ್ಲ" ಎಂಬುದಾಗಿ ಖ್ಯಾತ ಲೇಖಕರೊಬ್ಬರು ವಿವರಿಸುತ್ತಾರೆ. ಥಾಪರ್ ಇದೇ ಬ್ರಾಹ್ಮಣ- ಶ್ರಮಣರ ಸಂಘರ್ಷದ ಹೋಲಿಕೆಯನ್ನು ತಮ್ಮ ಇನ್ನೂ ಎರಡು ಪುಸ್ತಕಗಳಲ್ಲಿ ನೀಡಿದ್ದಿದೆ.

ಇದು ಕೆಲವು 'ಖ್ಯಾತನಾಮ' ಇತಿಹಾಸಕಾರರು ವಾಸ್ತವಿಕ ಸಂಗತಿಗಳನ್ನು ಹೇಗೆ ತಿರುಚುತ್ತಾರೆ ಎಂಬುದಕ್ಕೆ ನಿದರ್ಶನ. ದುರಂತವೆಂದರೆ ಇತರ ಇತಿಹಾಸಕಾರರನ್ನು ವಿಮರ್ಶೆಗೆ ಒಳಪಡಿಸುವ ನಮ್ಮ ಶಿಕ್ಷಣವೇತ್ತರರು ಇಂತಹ 'ಖ್ಯಾತನಾಮ' ಇತಿಹಾಸಕಾರರನ್ನು ಪರಾಮರ್ಶೆಗೆ ಒಳಪಡಿಸುವುದಿಲ್ಲ. ಅವರು ಹೇಳಿದ್ದೆಲ್ಲ ಕುರುಡಾಗಿ ನಂಬಲಾಗುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಕೆಲವೇ ಕೆಲವು ಮಾರ್ಕ್ಸಿಸ್ಟ್ ಇತಿಹಾಸಕಾರರೇ ದೇಶದ ಇತಿಹಾಸವನ್ನು ರೂಪಿಸಿದ್ದರು. ದಶಕಗಳ ಕಾಲ ಅವರದೇ ಆಧಿಪತ್ಯವಿತ್ತು. ಸಾಂಸ್ಥಿಕವಾಗಿಯೂ ಅತ್ಯಂತ ಪ್ರಭಾವ ಹೊಂದಿದ್ದರು. ಪಠ್ಯಪುಸ್ತಕ ಬರೆಯುತ್ತಿದ್ದುದು ಅವರೇ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಇಲಾಖೆಗಳಲ್ಲೂ ಅವರದೇ ಪಾರಮ್ಯ. ಮಾಧ್ಯಮಗಳಲ್ಲೂ ಅವರಿಗಷ್ಟೇ ಪ್ರಾಶಸ್ತ್ಯ. 'ನೈಜ, ಗಂಭೀರ ಇತಿಹಾಸಕಾರರು' ಯಾರು ಎಂಬುದನ್ನು ಕೂಡಾ ಅವರೇ ನಿರ್ಧರಿಸುತ್ತಿದ್ದರು. ವಿಪರ್ಯಾಸವೆಂದರೆ ತಮ್ಮನ್ನು ತಾವು 'ವೈಜ್ಞಾನಿಕ ಇತಿಹಾಸ'ದ ಸಂರಕ್ಷಕರು ಎಂದು ಹೇಳಿಕೊಳ್ಳುವ ಇವರು ತಾವು ಮಾತ್ರ ಯಾವುದೇ ಪರಾಮರ್ಶೆಗೆ ಒಳಪಡದ ರೀತಿಯಲ್ಲಿ ತಮ್ಮ ಸುತ್ತ ಕೋಟೆ ಕಟ್ಟಿಕೊಂಡಿದ್ದರು.

ಆದರೆ ಆ ಕೋಟೆಯೀಗ ಒಡೆದಿದೆ. ಅವರು ಮಂಡಿಸಿದ ಇತಿಹಾಸದ ಸತ್ಯಾಸತ್ಯತೆಯನ್ನು ಈಗ ಪರೀಕ್ಷೆಗೆ ಒಡ್ಡಲಾಗುತ್ತಿದೆ. ತಮ್ಮ ಇತ್ತೀಚಿನ ಪುಸ್ತಕವೊಂದರಲ್ಲಿ ಥಾಪರ್ ಅವರು ''ಇತಿಹಾಸಕಾರರಲ್ಲದವರು ಈಗ ಜನಾಭಿಪ್ರಾಯ ರೂಪಿಸುತ್ತಿದ್ದಾರೆ. ವೃತ್ತಿಪರ ಇತಿಹಾಸಕಾರರ ಅಭಿಪ್ರಾಯಕ್ಕೆ ವಿರುದ್ಧವಾದ ಚಿತ್ರಣವನ್ನು ಅವರು ಮಂಡಿಸುತ್ತಿದ್ದು ಅದನ್ನು ಬೆಂಬಲಿಸಲಾಗುತ್ತಿದೆ'' ಎಂದು ಕೊರಗಿದ್ದಾರೆ. ''ಹಿಂದೆಲ್ಲಾ ಇತಿಹಾಸದ ಸ್ಕಾಲರ್‌ಶಿಪ್ ಅನರ್ಹರಾದವರಿಗೆ ಸಿಗುತ್ತಿರಲಿಲ್ಲ, ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಇತಿಹಾಸ ಪಂಡಿತರು ಸಂಶೋಧಿಸಿದ ವಿಷಯವನ್ನು ಇತ್ತೀಚಿನ ಕೆಲವು ಹೊಸ ಇತಿಹಾಸಕಾರರು ವಿರೋಧಿಸುತ್ತಿದ್ದಾರೆ'' ಎಂದು ತಮ್ಮ ಹತಾಶೆ ಮತ್ತು ಅಸಹನೆಯನ್ನು ಕಕ್ಕಿದ್ದಾರೆ. ಅಂತೂ ಮಾರ್ಕ್ಸಿಸ್ಟ್ ಇತಿಹಾಸಕಾರರ ಬೌದ್ಧಿಕ ಪ್ರಭುತ್ವಕ್ಕೆ ಸವಾಲು ಒದಗಿದೆಯೆಂಬುದನ್ನು ಅವರೇ ಒಪ್ಪಿಕೊಂಡಂತಾಗಿದೆ. ಇತಿಹಾಸದ ಮೇಲೆ ಅವರ ಏಕಸ್ವಾಮ್ಯ ಕಳಚಿಕೊಳ್ಳುತ್ತಿದೆ. ಇದುವೇ ಈ ಎಡಪಂಥೀಯ ಇತಿಹಾಸಕಾರರಿಗೆ ಅಸಹನೆ ಹಾಗೂ ಆತಂಕ ಸೃಷ್ಟಿಸಿರುವುದು.

ಈ ಖ್ಯಾತ ಇತಿಹಾಸಕಾರರು ಈವರೆಗೆ ಉತ್ತರದಾಯಿತ್ವದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಅವರನ್ನು ಪ್ರಶ್ನಿಸುವವರಾರೂ ಇರಲಿಲ್ಲ. ರಾಮಜನ್ಮಭೂಮಿ ಪ್ರಕರಣವು ಅಲಹಾಬಾದ್ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಇಂತಹ ಕೆಲವು ಖ್ಯಾತ ಇತಿಹಾಸಕಾರರ ಬಣ್ಣ ಬಯಲಾಯಿತು. 'ತಜ್ಞ ಸಾಕ್ಷಿಗಳು' ಎಂಬ ನೆಲೆಯಲ್ಲಿ ಕಟಕಟೆಯಲ್ಲಿ ನಿಂತ ಈ ಇತಿಹಾಸಕಾರರ ಪೊಳ್ಳುತನ ಜಗಜ್ಜಾಹೀರಾಯಿತು. ಕ್ಲಾಸ್‌ರೂಂಗಳಲ್ಲಿ, ಸೆಮಿನಾರ್‌ಗಳಲ್ಲಿ ನಿರರ್ಗಳವಾಗಿ ಇತಿಹಾಸದ ಬಗ್ಗೆ ಮಾತನಾಡುವ ಇವರು ಅಯೋಧ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ಕಟಕಟೆಯಲ್ಲಿ ಪಾಟೀಸವಾಲಿಗೆ ಈಡಾದಾಗ ಅವರ ಬೌದ್ಧಿಕ ದಿವಾಳಿತನ ಬಹಿರಂಗವಾಯಿತು.

ಪ್ರೊ. ಸುರೇಶ್ಚಂದ್ರ ಮಿಶ್ರಾ ಎಂಬವರು ಲಿಪಿಕಾರರಾಗಿ ಒಬ್ಬ ಪರಿಣತರಂತೆ ನ್ಯಾಯಾಲಯಕ್ಕೆ ಆಗಮಿಸಿದ್ದರು. ಅಯೋಧ್ಯೆಯ ವಿವಾದಾಸ್ಪದ ಕಟ್ಟಡದಲ್ಲಿ ಕಂಡುಬಂದ ಲಿಪಿಗಳು ಅರೇಬಿಕ್ ಎಂದು ವಿಚಾರಣೆ ವೇಳೆ ನುಡಿದರು. ಪಾಟೀಸವಾಲಿಗೆ ಒಳಪಡಿಸಿದಾಗ ಅವರು ಅದು ಪರ್ಷಿಯನ್ ಲಿಪಿಗಳು ಎಂದು ಮಾತು ಬದಲಿಸಿದರು. ಬಳಿಕವಂತೂ ತನಗೆ ಪರ್ಷಿಯನ್ ಭಾಷೆಯಾಗಲೀ ಅರೇಬಿಕ್ ಭಾಷೆಯಾಗಲೀ ತಿಳಿದೇ ಇಲ್ಲ ಎಂದು ಒಪ್ಪಿಕೊಂಡರು. ನಂತರವಂತೂ ಪ್ರೊ. ಮಿಶ್ರಾ ಇನ್ನಷ್ಟು ನಗೆಪಾಟಲಿಗೀಡಾಗುವ ಪ್ರತಿಪಾದನೆ ಸಲ್ಲಿಸಿದರು. ಅಯೋಧ್ಯೆಯ ಈ ಲಿಪಿಗಳು ಬಾಬರ್‌ನಾಮಾ ಪುಸ್ತಕದಲ್ಲಿ ಕಂಡುಬಂದುದಕ್ಕೆ ಹೋಲಿಕೆಯಾಗುತ್ತದೆ ಹಾಗೂ ತಾನು ಬಾಬರ್‌ನಾಮಾ ಪುಸ್ತಕವನ್ನು ವಿವಾದಿತ ಕಟ್ಟಡದೊಳಕ್ಕೆ ಕೊಂಡೊಯ್ದು ಅದನ್ನು ತುಲನೆ ಮಾಡಿ ನೋಡಿದ್ದಾಗಿ ಹೇಳಿದರು. ವಿವಾದಿತ ಕಟ್ಟಡದೊಳಗೆ ಏನನ್ನೂ ಕೊಂಡೊಯ್ಯಲು ಅವಕಾಶ ಇಲ್ಲವಲ್ಲ ಎಂದು ವಕೀಲರು ನುಡಿದಾಗ ತಮ್ಮ ಹೇಳಿಕೆಯನ್ನು ಮತ್ತೆ ಬದಲಿಸಿದರು. ತಾನು ತನ್ನ ಸ್ಮರಣ ಶಕ್ತಿಯ ಮೂಲಕ ಈ ಲಿಪಿಗಳನ್ನು ತುಲನೆ ಮಾಡಿದ್ದಾಗಿ ಹೇಳಿದರು. ಇದನ್ನು ಕೇಳಿದ ನ್ಯಾಯಾಧೀಶರೇ, ಮೊದಲೊಮ್ಮೆ ತನಗೆ ಪರ್ಷಿಯನ್ ಅಥವಾ ಅರೇಬಿಕ್ ಭಾಷೆ ತಿಳಿದೇ ಇಲ್ಲ ಎಂದು ಹೇಳಿದ ಮಿಶ್ರಾ, ಈಗ ತಮಗೆ ಅದ್ಭುತ ಸ್ಮರಣ ಶಕ್ತಿಯಿದೆ ಎಂಬಂತೆ ಮಾತನಾಡುತ್ತಿರುವುದು ಆಶ್ಚರ್ಯಕರ ಎಂದು ಉದ್ಗಾರ ಎತ್ತಿದರು.

ಬಳಿಕ ಬಂದವರು ಪುರಾತತ್ವಜ್ಞ ಸೂರಜ್ ಭಾನ್. ಸಾರ್ವಜನಿಕ ಸಂವಾದಗಳಲ್ಲಿ, ಚರ್ಚೆಗಳಲ್ಲಿ ಪ್ರಖರವಾಗಿ ವಾದ ಮಂಡಿಸುವ ಇವರು ಶಿಕ್ಷಣ ವಲಯದಲ್ಲಿ ಖ್ಯಾತನಾಮರು. ಆದರೆ ನ್ಯಾಯಾಲಯದಲ್ಲಿ ಅವರ ಹುಳುಕು ಬಯಲಾಯಿತು. ಸಂಸ್ಕೃತದಲ್ಲಿ ಪದವಿ ಪಡೆದಿರುವ ಹೊರತಾಗಿಯೂ ತಾನು ಸಂಸ್ಕೃತವನ್ನು ಓದಲು ಅಥವಾ ಬರೆಯಲು ಅಸಮರ್ಥ ಎಂಬುದನ್ನು ಒಪ್ಪಿಕೊಂಡರು. ''ಸೂರಜ್ ಭಾನ್ ತಾವು ಬರೆದ ಹಲವಾರು ಪುಸ್ತಕಗಳಲ್ಲಿ ಅಯೋಧ್ಯೆ ಕಟ್ಟಡದ ಮೇಲಿರುವ ಬರಹಗಳನ್ನು ಓದಿರುವುದಾಗಿ ಹಾಗೂ ಅದನ್ನು ತುಲನೆ ಮಾಡಿರುವುದಾಗಿ ಬರೆದಿದ್ದಾರೆ. ಆದರೆ ಅವರು ಇದಾವುದನ್ನೂ ಓದಿಲ್ಲವೆಂಬುದು ಸ್ಪಷ್ಟವಾಗುತ್ತದೆ'' ಎಂದು ನ್ಯಾಯಮೂರ್ತಿ ಅಭಿಪ್ರಾಯಿಸಿದರು. ಮತ್ತೋರ್ವ ಸಾಕ್ಷಿಯಾಗಿ ಕೋರ್ಟಿಗೆ ಬಂದಿದ್ದ ಪ್ರೊ. ಸುವಿರಾ ಜೈಸ್ವಾಲ್ ತಾನು ಅಯೋಧ್ಯೆ ವಿವಾದಕ್ಕೆ ಪ್ರಮುಖ ಮೂಲವಾಗಿರುವ ಬಾಬರ್‌ನಾಮಾವನ್ನು ಓದಿಯೇ ಇಲ್ಲವೆಂಬುದನ್ನು ಒಪ್ಪಿಕೊಂಡರು. ಮತ್ತೋರ್ವ 'ತಜ್ಞ ಸಾಕ್ಷಿ' ಪ್ರೊ. ಶಿರಿನ್ ಮುಸಾವಿ ತಾನು ವಿವಾದಿತ ಪ್ರದೇಶವನ್ನು ಪರಿಶೀಲಿಸಲು ಅಯೋಧ್ಯೆಗೆ ಈವರೆಗೆ ಭೇಟಿ ನೀಡಿಯೇ ಇಲ್ಲವೆಂಬ ಸತ್ಯವನ್ನು ಒಪ್ಪಿಕೊಂಡರು. ಇತಿಹಾಸಕಾರರು ಸ್ಥಳಾಧ್ಯಯನ ಮಾಡುವ ಅಗತ್ಯವೇ ಇಲ್ಲವೆಂಬುದು ಆಕೆಯ ವಿಚಿತ್ರ ನಿಲುವು.

ಇಂತಹ ಇತಿಹಾಸಕಾರರನ್ನು ನಮ್ಮ ದೇಶದ ಖ್ಯಾತನಾಮ ಇತಿಹಾಸಕಾರರಾದ ರೋಮಿಲಾ ಥಾಪರ್, ಆರ್.ಎಸ್. ಶರ್ಮಾ, ಡಿ.ಎನ್.ಝಾ. ಮತ್ತು ಇರ್ಫಾನ್ ಹಬೀಬ್ ಮುಂತಾದವರು ಬೆಂಬಲಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಕುತೂಹಲಕಾರಿ ವಿಷಯವೆಂದರೆ ಈ ಎರಡನೇ ದರ್ಜೆ ಇತಿಹಾಸಕಾರರು ಅಯೋಧ್ಯೆ ವಿವಾದದಲ್ಲಿ ಬಾಬರಿ ಮಸೀದಿ ಪರವಾಗಿ ಕೋರ್ಟಿಗೆ ಹಾಜರಾದರೆ, ಮೇಲಿನ ಖ್ಯಾತನಾಮ ಇತಿಹಾಸಕಾರರು ಅಂತಹ ಹೊಣೆಗಾರಿಕೆಯಿಂದ ಮೆಲ್ಲಗೆ ಜಾರಿಕೊಂಡರು. ಬಹುಶಃ ಅವರಿಗೇ ತಮ್ಮ ಇತಿಹಾಸದ ಪೊಳ್ಳುತನದ ಅರಿವಿತ್ತು. ನ್ಯಾಯಾಲಯದಲ್ಲಿ ಪಾಟೀಸವಾಲಿನ ಮುಂದೆ ತಮ್ಮ ವಾದ ನಿಲ್ಲದೆಂಬ ಅರಿವಿತ್ತು. ಅವರಿಗೆ ತಮ್ಮ ಸುಳ್ಳುಗಳನ್ನು ಹೇಳುತ್ತಾ ಹೋಗುವುದೇ ಗೊತ್ತು ಹೊರತು, ಸಾರ್ವಜನಿಕವಾಗಿ ಇತರರಿಂದ ಪ್ರಶ್ನೆಗಳನ್ನು ಎದುರಿಸಿ ಅನುಭವವಿಲ್ಲವಲ್ಲ.

ಈ ಖ್ಯಾತ ಇತಿಹಾಸಕಾರರ ವೈರುಧ್ಯವೂ ಇಲ್ಲಿ ಸ್ಪಷ್ಟವಾಗಿದೆ. ಇತರ ಇತಿಹಾಸಕಾರರು ಸಾಕ್ಷ್ಯಾಧಾರವಿಲ್ಲದೆ ಮಾತನಾಡುತ್ತಾರೆ ಎಂದು ಆರೋಪಿಸುವ ಇವರೇ ನಿಜವಾಗಿ ಸಾಕ್ಷ್ಯಾಧಾರವಿಲ್ಲದೆ ಇತಿಹಾಸ ಬರೆದವರು. ಕೆಲವಾರು ದಶಕಗಳಿಂದ ಈ ಇತಿಹಾಸಕಾರರನ್ನು ಯಾರೂ ಪ್ರಶ್ನಿಸುವವರಿರಲಿಲ್ಲ, ಅವರು ಬರೆದುದೇ ಅಂತಿಮ ಸತ್ಯ ಎಂಬಂತಾಗಿತ್ತು. ಅವರು ಪ್ರತಿಪಾದಿಸಿದ ಇತಿಹಾಸವನ್ನು ಪರಾಮರ್ಶಿಸುವುದು ಬಹಳ ದೊಡ್ಡ ಅಪಚಾರ ಎಂಬಂತೆ ಪರಿಗಣಿಸಲಾಗುತ್ತಿತ್ತು. ಆದರೀಗ ಕಾಲ ಬದಲಾಗಿದೆ. ಅವರು ಬರೆದ ಇತಿಹಾಸದ ಲೋಪಗಳು, ತಾರತಮ್ಯಗಳು ಬೆಳಕಿಗೆ ಬರತೊಡಗಿವೆ. ಭಾರತದ ನೈಜ ಇತಿಹಾಸದ ಅನಾವರಣವು ಈಗ ಆಗತೊಡಗಿದೆ. ಜನರಿಗೆ ಸತ್ಯದ ಅರಿವಾಗತೊಡಗಿದೆ.

ಬಾಲ್ಯವನ್ನು ಪರದೆಗಳ ಕೈಗೆ ಒಪ್ಪಿಸುವ ಮುನ್ನ...

ದೇವಿತಾ ಸಿ ಸುಬ್ಬಯ್ಯ



ಇಂದಿನ ಸಮಾಜದಲ್ಲಿ ಮಕ್ಕಳ ಬಾಲ್ಯ ಮೌನವಾಗಿ ಒಂದು ಅಪಾಯಕಾರಿ ಬದಲಾವಣೆಯೊಳಗೆ ಜಾರುತ್ತಿದೆ. ಕೆಲ ವರ್ಷಗಳ ಹಿಂದೆ ಬಾಲ್ಯವೆಂದರೆ ಬೀದಿಯ ಆಟ, ಪುಸ್ತಕಗಳ ಓದು, ಶಾಲೆಯ ಸ್ನೇಹ, ಮನೆಯ ಮಾತುಕತೆ ಮತ್ತು ಕುಟುಂಬದ ಮಮತೆ. ಆದರೆ ಇಂದು ಆ ಜಾಗವನ್ನು ಸ್ಮಾರ್ಟ್‌ಫೋನ್, ರೀಲ್ಸ್ ಮತ್ತು ಸೋಷಿಯಲ್ ಮೀಡಿಯಾ ಆಕ್ರಮಿಸಿಕೊಂಡಿವೆ. ಈಗ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುತ್ತಿರುವುದು ಕೇವಲ ಮನೆ ಮತ್ತು ಶಾಲೆಯಲ್ಲ, ಅಲ್ಗೋರಿದಮ್‌ಗಳು, ಪರದೆ ಮತ್ತು ಡಿಜಿಟಲ್ ಜಗತ್ತೂ ಆಗಿದೆ. ಇದು ಕೇವಲ ತಂತ್ರಜ್ಞಾನದ ಬೆಳವಣಿಗೆಯಲ್ಲ; ಸಮಾಜದ ಮೌಲ್ಯ ವ್ಯವಸ್ಥೆಯಲ್ಲೇ ನಡೆಯುತ್ತಿರುವ ಗಂಭೀರ ಬದಲಾವಣೆ.

ಇಂದು ಎರಡು ವರ್ಷದ ಮಗು ಮೊಬೈಲ್‌ನಲ್ಲಿ ವಿಡಿಯೊ ಸ್ಕ್ರೋಲ್ ಮಾಡುತ್ತಿದೆ. ಐದನೇ ತರಗತಿಯ ಮಕ್ಕಳು ರೀಲ್ಸ್ ತಯಾರಿಸುತ್ತಿದ್ದಾರೆ. ಹದಿಹರೆಯದ ವಿದ್ಯಾರ್ಥಿಗಳು ತಮ್ಮ ಆತ್ಮವಿಶ್ವಾಸವನ್ನು 'ಲೈಕ್ಸ್' ಮತ್ತು 'ಫಾಲೋವರ್ಸ್' ಸಂಖ್ಯೆಯಲ್ಲಿ ಅಳೆಯುತ್ತಿದ್ದಾರೆ. ಮಾಹಿತಿಯ ಪ್ರವಾಹ ಹೆಚ್ಚಿದರೂ, ಭಾವನಾತ್ಮಕ ಪ್ರೌಢಿಮೆ ಅದೇ ವೇಗದಲ್ಲಿ ಬೆಳೆಯುತ್ತಿಲ್ಲ. ಪರಿಣಾಮವಾಗಿ ಸಹನೆ ಕುಸಿಯುತ್ತಿದೆ, ತಕ್ಷಣ ಪ್ರತಿಕ್ರಿಯಿಸುವ ಸ್ವಭಾವ ಹೆಚ್ಚುತ್ತಿದೆ, ''ನನ್ನ ಮಾತೇ ಸರಿ'' ಎನ್ನುವ ಅಹಂ ಮನೋಭಾವ ಗಾಢವಾಗುತ್ತಿದೆ.

ಶಾಲೆಗಳಲ್ಲಿ ಶಿಕ್ಷಕರು ಈಗ ಸ್ಪಷ್ಟವಾಗಿ ಗಮನಿಸುತ್ತಿರುವ ದೊಡ್ಡ ಸಮಸ್ಯೆ ಮಕ್ಕಳ ಗಮನ ಕೇಂದ್ರೀಕರಣ ಸಾಮರ್ಥ್ಯದ ಕುಸಿತ. ಕೇವಲ 30 ಸೆಕೆಂಡ್‌ಗಳ ರೀಲ್ಸ್‌ಗೆ ಒಗ್ಗಿಕೊಂಡ ಮನಸ್ಸಿಗೆ ಒಂದು ಗಂಟೆಯ ಪಾಠ ಕಠಿಣವಾಗುತ್ತಿದೆ. ತಡರಾತ್ರಿವರೆಗೆ ಮೊಬೈಲ್ ಬಳಸಿ, ನಿದ್ರಾಹೀನತೆಯೊಂದಿಗೆ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಇದು ಕೇವಲ ಅಭ್ಯಾಸದ ಸಮಸ್ಯೆಯಲ್ಲ; ಮಾನಸಿಕ ಆರೋಗ್ಯದ ಎಚ್ಚರಿಕೆಯ ಗಂಟೆ. ಇದಕ್ಕಿಂತ ಆತಂಕಕಾರಿ ಸಂಗತಿ ಎಂದರೆ, ಸೋಷಿಯಲ್ ಮೀಡಿಯಾ ಮಕ್ಕಳಲ್ಲಿ ಅಕಾಲಿಕ ಪ್ರೌಢತೆಯನ್ನು ಹುಟ್ಟುಹಾಕುತ್ತಿದೆ. ಫ್ಯಾಷನ್, ದುಬಾರಿ ಜೀವನಶೈಲಿ, ಸಂಬಂಧಗಳು ಮತ್ತು ಅತಿಯಾದ ಸ್ವಾತಂತ್ರ್ಯವನ್ನು ಮಕ್ಕಳು ವಯಸ್ಸಿಗಿಂತ ಬೇಗ ಅನುಕರಿಸಲು ಆರಂಭಿಸಿದ್ದಾರೆ. ಒಂದು ಫೋಟೋಗೆ ಕಡಿಮೆ ಲೈಕ್ಸ್ ಬಂದರೂ ಮನಸ್ಸಿಗೆ ಹೊಡೆತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂದರ್ಭಗಳಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಲು ಹೇಳಿದ ಪೋಷಕರ ಮೇಲೆಯೇ ಮಕ್ಕಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದು ಕೇವಲ ಶಿಸ್ತಿನ ಸಮಸ್ಯೆಯಲ್ಲ, ಪರದೆ ಮೇಲಿನ ಮಾನಸಿಕ ಅವಲಂಬನೆಯ ಸಂಕೇತ. ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳ ದೈಹಿಕ ಆರೋಗ್ಯದ ಮೇಲೂ ಪರಿಣಾಮಗಳು ಕಾಣಿಸುತ್ತಿವೆ. ಹೊರಾಂಗಣ ಆಟಗಳು ಕಡಿಮೆಯಾಗುತ್ತಿರುವುದರಿಂದ ದೈಹಿಕ ಚಟುವಟಿಕೆ ಕುಸಿಯುತ್ತಿದೆ. ಕಣ್ಣಿನ ಸಮಸ್ಯೆ, ಬೆನ್ನುನೋವು, ತೂಕ ಹೆಚ್ಚಳ ಮತ್ತು ನಿದ್ರಾ ವ್ಯತ್ಯಯಗಳು ಈಗ ಚಿಕ್ಕ ವಯಸ್ಸಿನಲ್ಲೇ ಕಾಣಿಸುತ್ತಿವೆ. ವೈದ್ಯರು ಮತ್ತು ಮನೋವೈದ್ಯರು ಮಕ್ಕಳಲ್ಲಿ ಆತಂಕ, ಏಕಾಂತ ಭಾವನೆ ಮತ್ತು ಕೋಪದ ಪ್ರಮಾಣ ಹೆಚ್ಚುತ್ತಿರುವುದನ್ನು ಸೂಚಿಸುತ್ತಿದ್ದಾರೆ. ಸಾವಿರಾರು ಆನ್‌ಲೈನ್ ಸ್ನೇಹಿತರಿದ್ದರೂ, ಮನದ ಮಾತು ಹೇಳಿಕೊಳ್ಳುವ ನಿಜವಾದ ಸ್ನೇಹಿತರ ಕೊರತೆ ಮಕ್ಕಳನ್ನು ಒಳಗೊಳಗೆ ಖಾಲಿಯಾಗಿಸುತ್ತಿದೆ.

ನಾಳಿನ ಸಮಾಜವನ್ನು ರೂಪಿಸುವ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ.



ಇನ್ನೊಂದು ಗಂಭೀರ ಅಂಶ ಎಂದರೆ, ಡಿಜಿಟಲ್ ಜಗತ್ತು ಮಕ್ಕಳನ್ನು ಅತಿವೇಗದ ಹೋಲಿಕೆಯ ಬದುಕಿಗೆ ತಳ್ಳುತ್ತಿದೆ. ಯಾರು ಹೆಚ್ಚು ಸುಂದರ? ಯಾರಿಗೆ ಹೆಚ್ಚು ಫಾಲೋವರ್ಸ್? ಯಾರು ಹೆಚ್ಚು ಸ್ಟೈಲಿಶ್? ಎಂಬ ಸ್ಪರ್ಧೆಯಲ್ಲಿ ಮಕ್ಕಳು ತಮ್ಮ ಸ್ವಾಭಾವಿಕ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಕಾಣುವ ಕೃತಕ 'ಪರಿಪೂರ್ಣ ಜೀವನ' ಮಕ್ಕಳ ಮನಸ್ಸಿನಲ್ಲಿ ಅಸಮಾಧಾನ ಮತ್ತು ಹೀನಭಾವನೆ ಹುಟ್ಟುಹಾಕುತ್ತಿದೆ. ಇದು ಭವಿಷ್ಯದಲ್ಲಿ ಮಾನಸಿಕ ಆರೋಗ್ಯದ ದೊಡ್ಡ ಸಂಕಷ್ಟಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಹಿಂದೆ ಮಕ್ಕಳಿಗೆ ತಾಯಿ-ತಂದೆಯರೇ ಆದರ್ಶರಾಗಿದ್ದರು. ಆದರೆ ಇಂದು ಆ ಜಾಗವನ್ನು ಇನ್‌ಫ್ಲುಯೆನ್ಸರ್‌ಗಳು ಆಕ್ರಮಿಸಿದ್ದಾರೆ. ಮಕ್ಕಳು ಮನೆಯವರ ಮಾತಿಗಿಂತ ಯೂಟ್ಯೂಬರ್‌ಗಳ ಮಾತಿಗೆ ಹೆಚ್ಚು ಪ್ರಭಾವಿತರಾಗುತ್ತಿದ್ದಾರೆ. ಇದು ಕುಟುಂಬದೊಳಗಿನ ಸಂವಹನ ಕುಸಿಯುತ್ತಿರುವ ಅತ್ಯಂತ ಗಂಭೀರ ಸೂಚನೆ. ಆದರೆ ಇದರ ಸಂಪೂರ್ಣ ಹೊಣೆ ಮಕ್ಕಳ ಮೇಲಾಗಲಿ ಅಥವಾ ತಂತ್ರಜ್ಞಾನದ ಮೇಲಾಗಲಿ ಹಾಕುವುದು ಸರಿಯಲ್ಲ, ಇಂದಿನ ಪೋಷಕರ ಜೀವನಶೈಲಿಯೂ ಇದಕ್ಕೆ ಸಮಾನವಾಗಿ ಕಾರಣವಾಗಿದೆ. ಉದ್ಯೋಗದ ಒತ್ತಡ, ಸಮಯದ ಕೊರತೆ ಮತ್ತು ನ್ಯೂಕ್ಲಿಯರ್ ಕುಟುಂಬ ವ್ಯವಸ್ಥೆಯ ನಡುವೆ ಮೊಬೈಲ್ ಒಂದು 'ಡಿಜಿಟಲ್ ಬೇಬಿ ಸಿಟ್ಟರ್' ಆಗಿ ಪರಿಣಮಿಸಿದೆ. ಮಗುವನ್ನು ಶಾಂತವಾಗಿರಿಸಲು, ಊಟ ಮಾಡಿಸಲು ಅಥವಾ ಅಳು ನಿಲ್ಲಿಸಲು ಮೊಬೈಲ್ ಕೊಡುವುದು ಈಗ ಸಾಮಾನ್ಯ ದೃಶ್ಯ. ಹೀಗಾಗಿ ಸಮಸ್ಯೆ ಕೇವಲ ಮಕ್ಕಳದಲ್ಲ, ಇಡೀ ಸಮಾಜದ ಜೀವನಶೈಲಿಯಲ್ಲಿದೆ.

ಈ ಸಂದರ್ಭದಲ್ಲಿ ಮಕ್ಕಳ ಮೇಲೆ ಕಠಿಣ ನಿಯಂತ್ರಣ ಹೇರುವುದಕ್ಕಿಂತ, ಅವರನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಅಗತ್ಯ. ಇಂದಿನ ಮಕ್ಕಳಿಗೆ ಆದೇಶಕ್ಕಿಂತ ಸಂವಾದ ಬೇಕಾಗಿದೆ. ''ಮೊಬೈಲ್ ಬೇಡ'' ಎನ್ನುವುದಕ್ಕಿಂತ ''ಏನು ನೋಡುತ್ತಿದ್ದೀಯ?'' ಎಂದು ಕೇಳುವ ಸಂಬಂಧ ಬೆಳೆಯಬೇಕು. ಕುಟುಂಬದಲ್ಲಿ ಪರದೆರಹಿತ ಸಮಯ, ಒಟ್ಟಿಗೆ ಊಟ, ಹೊರಾಂಗಣ ಆಟಗಳು ಮತ್ತು ನೇರ ಮಾತುಕತೆ ಮತ್ತೆ ಮರಳಬೇಕಾಗಿದೆ. ಶಾಲೆಗಳಲ್ಲೂ ಡಿಜಿಟಲ್ ಜಾಗೃತಿಯ ಕುರಿತು ಶಿಕ್ಷಣ ನೀಡುವುದು ಕಾಲದ ಅಗತ್ಯವಾಗಿದೆ. ತಂತ್ರಜ್ಞಾನದಿಂದ ಮಕ್ಕಳನ್ನು ಸಂಪೂರ್ಣ ದೂರ ಇಡುವುದು ಅಸಾಧ್ಯ. ಆದರೆ ಅದರ ಬಳಕೆಗೆ ಮಿತಿ, ಜವಾಬ್ದಾರಿ ಮತ್ತು ಮೌಲ್ಯಗಳನ್ನು ಕಲಿಸುವುದು ಸಾಧ್ಯ. ಯಾಕೆಂದರೆ ಇಂದು ಮಕ್ಕಳ ಕೈಯಲ್ಲಿರುವ ಮೊಬೈಲ್ ಕೇವಲ ಸಾಧನವಲ್ಲ, ಅದು ನಾಳಿನ ಸಮಾಜದ ಸ್ವಭಾವವನ್ನು ರೂಪಿಸುವ ಶಕ್ತಿ. ಆ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ. ಬಾಲ್ಯವನ್ನು ಪರದೆಗಳ ಕೈಗೆ ಸಂಪೂರ್ಣ ಒಪ್ಪಿಸುವ ಮುನ್ನ ಸಮಾಜ ಒಂದು ಕ್ಷಣ ನಿಂತು ಯೋಚಿಸಬೇಕಾದ ಸಮಯ ಈಗಲೇ ಬಂದಿದೆ.

ಕಿರುಸುದ್ದಿ

ದತ್ತಾಂಶ ವಿಶ್ಲೇಷಕರಿಗೆ ಅರ್ಜಿ

• **ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಐಸಿಎಸ್ಎಸ್ಆರ್ ಸಂಯೋಜಿತ ಯೋಜನೆ ದಿ ಇಂಪ್ಯಾಕ್ಟ್ ಆಫ್ ವುಮೆನ್ ಆ್ಯಂಡ್ ಸೆಂಟ್ರಿಕ್ ಗವರ್ನ್‌ಮೆಂಟ್ ಇನಿಶಿಯೇಟೀವ್ ಆನ್ ಎಜುಕೇಷನ್, ಸ್ಕಿಲ್, ಡೆವೆಲಪ್ಮೆಂಟ್ ಆ್ಯಂಡ್ ಇಂಕ್ಲ್ಯೂಸೀವ್ ಸೋಶಿಯೋ-ಎಕನೋಮಿಕ್ ಪ್ರೋಗ್ರೆಸ್ ಟು ಅಚೀವ್ ವಿಕಸಿತ ಭಾರತ 2047 : ಎ ಸ್ಟಡಿ ಇನ್ ಕರ್ನಾಟಕ ಸ್ಟೇಟ್ ಯೋಜನೆಯ ಅಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ದತ್ತಾಂಶ ವಿಶ್ಲೇಷಕರಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಸ್ವವಿವರದ ಸಂಪೂರ್ಣ ಮಾಹಿತಿಯೊಳಗೊಂಡ ಅರ್ಜಿಯನ್ನು icssrmrpbu.2026@gmail.coಗೆ ಇ-ಮೇಲ್ ವಿಳಾಸಕ್ಕೆ ದಿನಾಂಕ ಜೂ.5ರ ಒಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿದ್ಯುನ್ಮಾನ ಮಾಧ್ಯಮ ವಿಭಾಗ, ಪ್ರಾಧ್ಯಾಪಕರು ಡಾ. ವಾಹಿನಿ ಅವರನ್ನು ಸಂಪರ್ಕಿಸಬಹುದು.

ಪಾಲಿಕೆ ಚುನಾವಣೆ ಶೀಘ್ರ ನಡೆಸಲು ಆಗ್ರಹ



• **ಬೆಂಗಳೂರು:** ನನೆಗುದಿಗೆ ಬಿದ್ದಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಆದಷ್ಟು ಬೇಗ ನಡೆಸುವಂತೆ ಐದನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಹಾಗೂ ಮಾಜಿ ಸಂಸದ ಡಾ. ಸಿ. ನಾರಾಯಣಸ್ವಾಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಭಾರತೀಯ ಸಾರ್ವಜನಿಕ ಆಡಳಿತ ಸಂಸ್ಥೆಯ ಕರ್ನಾಟಕ ಶಾಖೆಯು ಬುಧವಾರ ನಗರದ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಂಟಿ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗ ಕಟ್ಟಡದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಬಲವರ್ಧನೆ ಹಾಗೂ ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನವನ್ನು ಪಡೆದುಕೊಳ್ಳುವ ದೃಷ್ಟಿಯಿಂದ ರಾಜ್ಯದ ನೂತನ ಮುಖ್ಯಮಂತ್ರಿಯಾಗಿರುವ ಡಿ.ಕೆ. ಶಿವಕುಮಾರ್ ಅವರು ಈ ಬಗ್ಗೆ ಗಂಭೀರ ಗಮನ ಹರಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಅಲ್ಲದೇ, 1993ರಲ್ಲಿ ಜಾರಿಗೊಂಡ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ದಿಸೆಯಿಂದಾಗಿ ಸ್ಥಳೀಯ ಸಂಸ್ಥೆಗಳ ಸಬಲೀಕರಣ ಮತ್ತು ಅಧಿಕಾರ ವಿಕೇಂದ್ರೀಕರಣದ ಹೊಸ ಮನ್ವಂತರಕೆ ನಾಂದಿಯಾಯಿತು ಎಂದು ಡಾ.ಸಿ.ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು. ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಮಾತನಾಡಿ, ಕರ್ನಾಟಕ ಸರ್ಕಾರ ಸಾಮಾಜಿಕ ನ್ಯಾಯದ ಗ್ಯಾರಂಟಿ ಯೋಜನೆಗಳು ಹಾಗೂ ವಿವಿಧ ಸಬ್ಸಿಡಿ ಮತ್ತು ಪಿಂಚಣಿ ಬಾಬ್ತುಗಳಿಗೆ ವಾರ್ಷಿಕ ಸುಮಾರು ಒಂದು ಲಕ್ಷ ಕೋಟಿ ರೂ.ಗಳನ್ನು ವ್ಯಯಿಸುತ್ತಿದೆ ಎಂದು ವಿವರಿಸಿದರು. ಇದರ ಪರಿಣಾಮವಾಗಿ ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯ ದೇಶದಲ್ಲೇ ಮೊದಲ ಸ್ಥಾನಕ್ಕೇರಿದೆ ಎಂದು ತಿಳಿಸಿದ ಅವರು, ಆಸ್ತಿ ತೆರಿಗೆ ಸಂಗ್ರಹವಾದ ಮೂಲಕ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಆದಾಯ ಸಂಪನ್ಮೂಲ ಕ್ರೋಢೀಕರಿಸಬಹುದು ಎಂದು ಅಭಿಪ್ರಾಯಪಟ್ಟರು.ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ ಐಐಪಿಎ ಕರ್ನಾಟಕ ಶಾಖೆಯ ಅಧ್ಯಕ್ಷ ತ.ಮ.ವಿಜಯಭಾಸ್ಕರ್, ರಾಜ್ಯ ಹಣಕಾಸು ಆಯೋಗದ ಸದಸ್ಯ ಎಂ. ಸನಾವುಲ್ಲಾ, ಹಿರಿಯ ಪ್ರಾಧ್ಯಾಪಕ ಡಾ. ಕೆ.ಗಾಯತ್ರಿ, ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ ಆಯೋಗದ ಅಧ್ಯಕ್ಷ ಡಿ.ಆರ್.ಪಾಟೀಲ್, ಕುಲಸಚಿವ ಎ. ನವೀನ್ ಜೋಸೆಫ್ ಸೇರಿದಂತೆ ಇತರರಿದ್ದರು.

ಜೂ.15ರಿಂದ ಮುಂಗಾರು ರೈಲ್ವೆ ವೇಳಾಪಟ್ಟಿ

• **ಬೆಂಗಳೂರು:** ಕೊಂಕಣ ರೈಲ್ವೆ ಮಾರ್ಗದಲ್ಲಿ ಮುಂಗಾರು ಮಳೆಯ ಅವಧಿಯಲ್ಲಿ ರೈಲುಗಳ ಸುರಕ್ಷಿತ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು, ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್ ಜೂ.15ರಿಂದ 20ರವರೆಗೆ ಜಾರಿಗೆ ಬರುವಂತೆ ಮುಂಗಾರು ವೇಳಾಪಟ್ಟಿಯನ್ನು ಪ್ರಕಟಿಸಿದೆ. ಈ ಪರಿಷ್ಕೃತ ಮುಂಗಾರು ವೇಳಾ ಪಟ್ಟಿಯು ಜೂ.15ರಂದು ಅಥವಾ ಆ ನಂತರ ತಮ್ಮ ಮೂಲ ನಿಲ್ದಾಣಗಳಿಂದ ಹೊರಡುವ ರೈಲುಗಳಿಗೆ ಅನ್ವಯವಾಗಲಿದೆ. ಮುಂಗಾರು ಅವಧಿಯಲ್ಲಿ ಕೊಂಕಣ ರೈಲ್ವೆ ವಿಭಾಗದಲ್ಲಿ ವಿಧಿಸಲಾಗುವ ವೇಗದ ನಿರ್ಬಂಧಗಳಿಗೆ ಅನುಗುಣವಾಗಿ, ಸುರಕ್ಷಿತ ಪ್ರಯಾಣಕ್ಕಾಗಿ ವಿವಿಧ ನಿಲ್ದಾಣಗಳಲ್ಲಿ ರೈಲುಗಳ ಸಮಯವನ್ನು ಬದಲಾಯಿಸಲಾಗುವುದು. ರೈಲು ಸಂಖ್ಯೆ 16595/16596 ಕೆಎಸ್ಆರ್ ಬೆಂಗಳೂರು-ಕಾರವಾರ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 16585/16586 ಎಸ್ಎಂವಿಟಿ ಬೆಂಗಳೂರು-ಮುರ್ಡೇಶ್ವರ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 16515/16516 ಯಶವಂತಪುರ-ಕಾರವಾರ ಎಕ್ಸ್‌ಪ್ರೆಸ್, ರೈಲು ಸಂಖ್ಯೆ 12741/12742 ವಾಸ್ಕೋಡ ಗಾಮಾ-ಪಾಟ್ನಾ ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಹಾಗೂ ರೈಲು ಸಂಖ್ಯೆ 11097/11098 ಪುಣೆ-ಎರ್ನಾಕುಲಂ ಎಕ್ಸ್‌ಪ್ರೆಸ್ ಇ.ರೈಲುಗಳಿಗೆ ಮುಂಗಾರು ವೇಳಾಪಟ್ಟಿ ಅನ್ವಯವಾಗುತ್ತದೆ.

ಕಾಮಗಾರಿ: ಕೆಲ ರೈಲುಗಳ ಸಂಚಾರ ರದ್ದು

• **ಬೆಂಗಳೂರು:** ಕೃಷ್ಣರಾಜಪುರ ಮತ್ತು ವೈಟ್‌ಫೀಲ್ಡ್ ಪ್ಯಾನಲ್ ಕ್ಯಾಬಿನ್ ನಿಲ್ದಾಣಗಳ ನಡುವೆ ಇಂಜಿನಿಯರಿಂಗ್ ಕಾಮಗಾರಿಯ ನಿಮಿತ್ತ, ಕೆಲ ರೈಲುಗಳನ್ನು ರದ್ದುಗೊಳಿಸಲಾಗುವುದು. ಭಾಗಶಃ ರದ್ದುಗೊಳಿಸಲಾಗುತ್ತದೆ. ಜೂ.8ರಂದು ರೈಲು ಸಂಖ್ಯೆ 20623 ಅಶೋಕಪುರ - ಕೆಎಸ್ಆರ್ ಬೆಂಗಳೂರು ಎಕ್ಸ್‌ಪ್ರೆಸ್, ರೈಲು ಸಂಖ್ಯೆ 20624 ಕೆಎಸ್ಆರ್ ಬೆಂಗಳೂರು - ಅಶೋಕಪುರ ಎಕ್ಸ್ ಪ್ರೆಸ್ ಸೇವೆ ರದ್ದುಗೊಳಿಸಲಾಗುವುದು. ಜೂ.7ರಂದು ರೈಲು ಸಂಖ್ಯೆ 66533 ಮಾರಿಕುಪ್ಪಂ - ಕೃಷ್ಣರಾಜಪುರ ಮೆಮು ಸೇವೆಯನ್ನು ವೈಟ್ ಫೀಲ್ಡ್ ಮತ್ತು ಕೃಷ್ಣರಾಜಪುರ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳಿಸಲಾಗುವುದು.



ಇದರೊಂದಿಗೆ ರೈಲು ಸಂಖ್ಯೆ 66534 ಕೃಷ್ಣರಾಜಪುರ - ಕುಪ್ಪಂ ಮೆಮು ಕೃಷ್ಣರಾಜಪುರ ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳ ನಡುವೆ ಭಾಗಶಃ ರದ್ದಾಗಲಿದ್ದು, ಈ ರೈಲು ಅಂದು ಕೃಷ್ಣರಾಜಪುರ ನಿಲ್ದಾಣದ ಬದಲಾಗಿ ವೈಟ್‌ಫೀಲ್ಡ್ ನಿಲ್ದಾಣದಿಂದ ತನ್ನ ನಿಗದಿತ ಸಮಯಕ್ಕೆ ಹೊರಡಲಿದೆ. ಜೂ.7ರಂದು ರೈಲು ಸಂಖ್ಯೆ 66560 ಅನಂತಪುರ - ಕೆಎಸ್ಆರ್ ಬೆಂಗಳೂರು ಮೆಮು ಚನ್ನಸಂದ್ರ ಮತ್ತು ಕೆಎಸ್ಆರ್ ಬೆಂಗಳೂರು ನಿಲ್ದಾಣ, ರೈಲು ಸಂಖ್ಯೆ 66520 ಕೆಎಸ್ಆರ್ ಬೆಂಗಳೂರು - ಮಾರಿಕುಪ್ಪಂ ಮೆಮು ಕೆಎಸ್ಆರ್ ಬೆಂಗಳೂರು ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳ ನಡುವೆ ಭಾಗಶಃ ರದ್ದಾಗಲಿದ್ದು, ಈ ರೈಲು ಅಂದು ಕೆಎಸ್ಆರ್ ಬೆಂಗಳೂರು ನಿಲ್ದಾಣದ ಬದಲಾಗಿ ವೈಟ್‌ಫೀಲ್ಡ್ ನಿಲ್ದಾಣದಿಂದ ತನ್ನ ನಿಗದಿತ ಸಮಯಕ್ಕೆ ಹೊರಡಲಿದೆ.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ | ಎಪಿಎಂಸಿ ಕಾರ್ಯದರ್ಶಿಗೆ ಶಾಸಕ ಮಂಜು ಸೂಚನೆ

ಪ್ರಭಾವಿಗಳಿಂದ ಸರ್ಕಾರಿ ಜಾಗ ಉಳಿಸಿ

• **ಕೃಷ್ಣರಾಜಪೇಟೆ:** ಈ ಹಿಂದೆ ಪಟ್ಟಣದ ಎಪಿಎಂಸಿಯ ಹತ್ತಾರು ಎಕರೆ ಭೂಮಿಯನ್ನು ದಾನವಾಗಿ ರೈತರು ನೀಡಿದ್ದರು. ಆದರೆ, ಪ್ರಭಾವಿಗಳು ಕಾಂಪೌಂಡ್ ಒಡೆದು ಎಪಿಎಂಸಿ ಜಾಗವನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆ. ಕೂಡಲೇ ಎಪಿಎಂಸಿ ಅಧಿಕಾರಿಗಳು ಸರ್ಕಾರಿ ಜಾಗವನ್ನು ಉಳಿಸಲು ಮುಂದಾಗಬೇಕು ಎಂದು ಶಾಸಕ ಎಚ್. ಟಿ.ಮಂಜು ಅವರು ಎಪಿಎಂಸಿ ಕಾರ್ಯದರ್ಶಿಗೆ ಸೂಚನೆ ನೀಡಿದರು.

ಪಟ್ಟಣದ ಹೊರವಲಯದ ಚಿಕ್ಕೋನಹಳ್ಳಿ ರೇಷ್ಮೆ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಶಾಸಕ ಎಚ್.ಟಿ.ಮಂಜು ಅವರ ಅಧ್ಯಕ್ಷತೆಯಲ್ಲಿ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪಂಚಾಯತ್ ಸಿಇಒ ನಂದಿನಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ಸಾರ್ವಜನಿಕರ ಕುಂದುಕೊರತೆ ಸಭೆಯಲ್ಲಿ ಮಾತನಾಡಿ, ಹಿರಿಕಳಲೆ ಗ್ರಾಮದ ಸರ್ವೆ ನಂಬರ್ ಜಾಗದಲ್ಲಿ 50,100 ಅಳತೆಯ ಜಾಗವನ್ನು ಅಕ್ರಮವಾಗಿ ಗ್ರಾಮ ಪಂಚಾಯತ್ ಪಿಡಿಒ ಮತ್ತು ಕಾರ್ಯದರ್ಶಿಗಳು ಅಕ್ರಮವಾಗಿ ಇ-ಸ್ವತ್ತು ಮಾಡಿರುತ್ತಾರೆಂದರು. ಈ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ನೌಕರರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ತಹಸೀಲ್ದಾರ್ ಡಾ.ಎಸ್.ಯು. ಅಶೋಕ್ ಸಲಹೆ ನೀಡಿದರು.

ಸಿಂಧುಘಟ್ಟ ಗ್ರಾಮದಲ್ಲಿ ಸುಮಾರು 10ಸಾವಿರ ಜನಸಂಖ್ಯೆ ಇದ್ದು ತಾಲ್ಲೂಕಿನಲ್ಲಿಯೇ ಅತ್ಯಂತ ದೊಡ್ಡ ಗ್ರಾಮವಾಗಿದೆ. ಹಾಗಾಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಸತಿ ಯೋಜನೆಯಲ್ಲಿ ನಿವೇಶನ ಹಂಚಿಕೆ ಮಾಡಲು ಪಿಡಿಒ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಅತಿ ಶೀಘ್ರವೇ ಸರ್ಕಾರಿ ಜಾಗವನ್ನು ಗುರುತಿಸಿಕೊಡಬೇಕು ಎಂದು ಶಾಸಕರು ಸೂಚನೆ ನೀಡಿದರು. ಹಳೆ ಮುದ್ದಾಪುರ ಗ್ರಾಮದಲ್ಲಿ ಬೀಳು ಭೂಮಿಯಲ್ಲಿ ರಸ್ತೆ ನಿರ್ಮಿಸುವ ಸಂಬಂಧ ಒಂದೆರಡು



ವ್ಯಕ್ತಿಗಳು ಪ್ರತಿಷ್ಠೆಗಾಗಿ ಜಗಳ ನಡೆಯುತ್ತಿದೆ. ಹಾಗಾಗಿ ಸದರಿ ಭೂಮಿಯ ದಾಖಲೆಗಳನ್ನು ಪರಿಶೀಲನೆ ಮಾಡಿ ಬೀಳು ಭೂಮಿ ಎಂದು ಆರ್.ಟಿ.ಸಿ.ಯಲ್ಲಿ ದಾಖಲಿಸಿ ರಸ್ತೆ ನಿರ್ಮಿಸಲು ಅವಕಾಶ ನೀಡಬೇಕು ಎಂದು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಶೀಳನೆರೆ ಹೋಬಳಿಯ ಮಾದಿಗರಹೊಸಹಳ್ಳಿ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಹತ್ತಾರು ಎಕರೆ ವಿಸ್ತೀರ್ಣ ಹೊಂದಿರುವ ಕೆರೆ ಇದೆ ಆದರೆ ಪಹಣಿಯಲ್ಲಿ ದಾಖಲೆ ಇರುವುದಿಲ್ಲ ಇದನ್ನು ಬಲಾಢ್ಯರು ಕಬಳಿಸುವ ಹುನ್ನಾರ ನಡೆಸುತ್ತಿದ್ದಾರೆ ಹಾಗಾಗಿ ತಕ್ಷಣವೇ ಪಹಣಿ ಕಾಲಂ 17ರಲ್ಲಿ ಕೆರೆ ಎಂದು ನಮೂದಿಸಿ ಕೆರೆಯನ್ನು ಸರ್ವೆ ಮಾಡಿ ಹದ್ದು-ಬಸ್ತು ಮಾಡಿ ಜನಜಾನುವಾರುಗಳಿಗೆ ಕುಡಿಯುವ ನೀರಿಗೆ ಕೆರೆಯನ್ನು ಉಳಿಸಬೇಕು ಎಂದು ಶಾಸಕರು ಜಿಲ್ಲಾಡಳಿತಕ್ಕೆ ಸಲಹೆ ನೀಡಿದರು. ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಶಾಸಕರಾದ ಎಚ್.ಟಿ.ಮಂಜು ಅವರು ಈ ಹಿಂದೆ ನಡೆಸಿದ ಜನಸಂಪರ್ಕ ಸಭೆಯಲ್ಲಿ ಸ್ವೀಕೃತವಾದ ಅರ್ಜಿಗಳ ವಿಲೇವಾರಿ ಸಮಯಾಗಿ ಆಗಿರುವುದಿಲ್ಲ. ಕೂಡಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಜನಸಂಪರ್ಕ ಸಭೆಯ ಅರ್ಜಿಗಳಿಗೆ ಸೂಕ್ತ ಸ್ಪಂದನೆ ಒದಗಿಸಬೇಕು. ನಿರ್ಲಕ್ಷ್ಯ ಮಾಡುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕಾಗುತ್ತದೆ ಎಂದು ತಿಳಿಸಿದರು. ಪ್ರಸಿದ್ಧ ಪುಣ್ಯಕ್ಷೇತ್ರ ಸಾಸಲು ಗ್ರಾಮದ ಶ್ರೀಶಂಭುಲಿಂಗೇಶ್ವರ ಹಾಗೂ ಶ್ರೀ ಸೋಮೇಶ್ವರ ದೇವಾಲಯ ಜಾಗದ ಹಾಗೂ ದೇವರ ಜಮೀನಿನ ಸಂಬಂಧ ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಾಗೂ ತಹಸೀಲ್ದಾರ್ ಅವರು ದೇವಾಲಯಕ್ಕೆ ಸೇರಿದ ಜಮೀನನ್ನು ಸಂರಕ್ಷಣೆ ಮಾಡಲು ತುರ್ತು ಕ್ರಮ ವಹಿಸಬೇಕು ಎಂದು ಸಭೆಯಲ್ಲಿ ಸೂಚನೆ ನೀಡಲಾಯಿತು.

ಜಿಲ್ಲಾ ಧಾರ್ಮಿಕ ಪರಿಷತ್ತನ್ನು ಸ್ಥಾಪಿಸಲು ಸರ್ಕಾರದ ಅಧಿಸೂಚನೆ ಹೊರಡಿಸಿದಾಗ ಸಾಸಲು ಕ್ಷೇತ್ರಕ್ಕೂ ಸಮಿತಿ ರಚಿಸಲು ಅವಕಾಶ ಇದೆ. ಅದೇ ರೀತಿ ದೇವಾಲಯಕ್ಕೆ ಪ್ರತ್ಯೇಕ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಆದೇಶ ಬಂದ ಕೂಡಲೇ ದೇವಾಲಯ ಸಮಿತಿಗೆ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ತಾಲೂಕಿನಲ್ಲಿ ತತ್ಕಾಲ್ ಪೋಡಿ, ಆಕಾರ ಕಾರ್ಯ ಎಲ್ಲವೂ ನಿಧಾನವಾಗಿ ನಡೆಯುತ್ತಿದೆ. ಈ ಬಗ್ಗೆ ಎಡಿಎಲ್ಆರ್ ಹಾಗೂ ಸರ್ವೆ ಅಧಿಕಾರಿಗಳು ತುರ್ತು ಕ್ರಮ ವಹಿಸಿ ಸರ್ವೆ ಕಾರ್ಯದ ವೇಗ ಹೆಚ್ಚಿಸಬೇಕು ಎಂದು ಶಾಸಕರು ಸೂಚನೆ ನೀಡಿದರು. ಸಭೆಯಲ್ಲಿ ಪಾಂಡವಪುರ ಉಪವಿಭಾಗಾಧಿಕಾರಿ ಕೆ.ಆರ್. ಶ್ರೀನಿವಾಸ್, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾಪಂ ಇಒ ಕೆ.ಸುಷ್ಮಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

ರೈತರಿಗೆ ತೊಂದರೆ ಕೊಡಬೇಡಿ

ಪೊಲೀಸ್ ಅಧಿಕಾರಿಗಳು ಪಟ್ಟಣದಲ್ಲಿ ದಾಖಲೆ ಪರಿಶೀಲನೆ ನಡೆಸಿದರೆ ನಮ್ಮ ಅಭ್ಯಂತರವಿಲ್ಲ. ಆದರೆ, ಹಳ್ಳಿಗಳಲ್ಲಿ ರಾತ್ರಿ ವೇಳೆ ಜಮೀನಿನ ಕಡೆ ಹೋಗುವ ರೈತರ ಬೈಕುಗಳನ್ನು ತಡೆದು ದಾಖಲೆ ಕೇಳುವುದು ಸರಿ ಯಲ್ಲ, ರೈತರು ಜಮೀನು ಕಡೆ ಕೃಷಿ ಪಂಪ್ ಸೆಟ್ ಚಾಲನೆ ಮಾಡಲು ಹೋಗುತ್ತಾರೆ. ಜಾನುವಾರುಗಳಿಗೆ ಮೇವು ತರಲು ಹೋಗುತ್ತಾರೆ . ಅಲ್ಲಿಗೂ ಬೈಕಿನ ದಾಖಲೆ ತೆಗೆದುಕೊಂಡು ಹೋಗಬೇಕೆ ಎಂದು ಪೊಲೀಸ್ ಅಧಿಕಾರಿಗಳನ್ನು ಪ್ರಶ್ನಿಸಿದ ಶಾಸಕರು, ಜಮೀನು ಕಡೆಗೆ ಹೋಗುವ ರೈತರಿಗೆ ತೊಂದರೆ ಕೊಡಬೇಡಿ ಎಂದು ಪೊಲೀಸರುಗೆ ಸಲಹೆ ನೀಡಿದರು.

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



• **ಆನೇಕಲ್:** ಪಟ್ಟಣದಲ್ಲಿ ನಡೆದ ಸರಣಿ ಅಪಘಾತದ ಹಿನ್ನೆಲೆಯಲ್ಲಿ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ರಸ್ತೆ ಗುಂಡಿಯನ್ನು ಮುಚ್ಚುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು.

ಪಟ್ಟಣದ ಪ್ರಮುಖ ರಸ್ತೆಯಲ್ಲಿ ಬಿದ್ದಿರುವ ಬೃಹತ್ ರಸ್ತೆ ಗುಂಡಿಯಿಂದಾಗಿ ಇತ್ತೀಚೆಗೆ ಸರಣಿ ಅಪಘಾತಗಳು ಸಂಭವಿಸುತ್ತಿವೆ. ರಸ್ತೆಗಳ ದುರಸ್ತಿಗೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಸ್ಥಳೀಯ ನಿವಾಸಿಗಳು ತೀವ್ರ ಅಸಮಾಧಾನ ಹೊರಹಾಕಿದರು. ರಸ್ತೆ ಗುಂಡಿಯನ್ನು ತಕ್ಷಣವೇ ಮುಚ್ಚಬೇಕು. ಹದಗೆಟ್ಟಿರುವ ರಸ್ತೆಯನ್ನು ಸಂಪೂರ್ಣವಾಗಿ ದುರಸ್ತಿ ಮಾಡಬೇಕೆಂದು ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಆಗ್ರಹಿಸಿದರು. ಸ್ಥಳೀಯ ಆಡಳಿತ ಮತ್ತು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿದ ಪ್ರತಿಭಟನಾಕಾರರು, ಕಳಪೆ ರಸ್ತೆ ನಿರ್ವಹಣೆಯೇ ಈ ಅಪಘಾತಗಳಿಗೆ ನೇರ ಕಾರಣ ಎಂದು ದೂರಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹುಲ್ಲಹಳ್ಳಿ ಶ್ರೀನಿವಾಸ್ ಮಾತನಾಡಿ, ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಬಹುತೇಕ ರಸ್ತೆಗಳು ಗುಂಡಿಗಳು ಬಿದ್ದು ರಸ್ತೆಗಳು ಹಾಳಾಗಿವೆ. ಇನ್ನು ಆನೇಕಲ್ ಪಟ್ಟಣದ ರಸ್ತೆಯಲ್ಲಿನ ಗುಂಡಿಯನ್ನು ತಕ್ಷಣವೇ ಮುಚ್ಚಿ, ವಾಹನ ಸವಾರರ ಪ್ರಾಣ ರಕ್ಷಣೆಗೆ ಮುಂದಾಗಬೇಕು. ಇಲ್ಲದಿದ್ದರೆ ಮುಂದಿನ ದಿನದಲ್ಲಿ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಸ್ಥಳೀಯ ಶಾಸಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಎಚ್ಚೆತ್ತುಕೊಂಡು ರಸ್ತೆ ಗುಂಡಿ ಮುಚ್ಚುವ ಮೂಲಕ ಶಾಶ್ವತ ಪರಿಹಾರ ಕಲ್ಪಿಸಬೇಕಿದೆ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ನರಸಿಂಹರೆಡ್ಡಿ, ಬಿ.ನಾಗರಾಜು, ಎಚ್.ನಾಗೇಶ್, ಪುಣ್ಯಕೋಟಿ ಶ್ರೀನಿವಾಸ್, ತಿಮ್ಮರಾಜು, ಭರತ್, ಅರವಿಂದ್ ರೆಡ್ಡಿ , ಶ್ರೀನಿವಾಸ್ ಮುಂತಾದವರಿದ್ದರು.

ಸಿಎಂ ಡಿಕೆಶಿ ಭಾವಚಿತ್ರಕ್ಕೆ ಹಾಲಿನ ಅಭಿಷೇಕ | ಜಯಘೋಷ

ನೆಲಮಂಗಲದಲ್ಲಿ ಲಾಡು ಹಂಚಿ ಸಂಭ್ರಮ

• **ನೆಲಮಂಗಲ:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಗಳಾಗುತ್ತಿದ್ದಂತೆ ನೆಲಮಂಗಲ ದಲ್ಲಿ ಕಾರ್ಯಕರ್ತರು, ಅಭಿಮಾನಿಗಳು ಪಟಾಕಿ ಸಿಡಿಸಿ, ಲಾಡುಹಂಚಿ ಸಂಭ್ರಮಿಸಿದರು. ಅವರ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ಮಾಡುವ ಮೂಲಕ ಸಡಗರ ಪಟ್ಟರು. ತಾಲೂಕಿನ ರಾಷ್ಟ್ರೀಯ ಹೆದ್ದಾರಿ 48ರ ವೀರರಾಘವನ ಪಾಳ್ಯದ ಬಡಾವಣೆಯಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ನಾಗರಾಜು ನೇತೃತ್ವದಲ್ಲಿ ಅದ್ದೂರಿಯಾಗಿ ಸಂಭ್ರಮಾಚರಣೆ ಆಯೋಜಿಸಲಾಗಿತ್ತು.

ಎರಡು ಕಡೆ ಸಂಭ್ರಮ: ಕಸಬಾ ಹೋಬಳಿಯ ಬೂದಿಹಾಳ್, ಶ್ರೀನಿವಾಸಪುರ, ಕಣ್ಣೇಗೌಡನಪಾಳ್ಯ, ಗೊಲ್ಲಹಳ್ಳಿ, ಸೋಲದೇವನ ಹಳ್ಳಿ, ಯಂಟಗಾನಹಳ್ಳಿ ಗ್ರಾಮ ಪಂಚಾ ಯಿತಿಗಳ ಸಾವಿರಾರು ಮುಖಂಡರು, ಕಾರ್ಯಕರ್ತರು ಸೇರಿ ವೀರರಾಘವನ ಪಾಳ್ಯದ ಬಡಾವಣೆ ಯಲ್ಲಿ ದೊಡ್ಡ ಮಟ್ಟದ ಎಲ್ಇಡಿ ಪರದೆಯ ಮೂಲಕ ಪದಗ್ರಹಣ ಸಮಾರಂಭ ನೇರವಾಗಿ ವೀಕ್ಷಣೆ ಮಾಡುವ ಜತೆ ಅದ್ದೂರಿಯಾಗಿ ಆಚರಣೆ ಮಾಡಿದರು. ನಗರಸಭೆ ವ್ಯಾಪ್ತಿಯ



ಮುಖಂಡರು ನಗರದ ತಾಲೂಕು ಕಚೇರಿ ಮುಂದೆ ಎಲ್ಇಡಿ ಪರದೆ ಅಳವಡಿಸಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು. ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನಸ್ವೀಕರಿಸಿದ ಕೆಲವೇ ಕ್ಷಣದಲ್ಲಿ ವರುಣನ ಆಗಮನವಾಗಿದೆ. ನೆಲ ಮಂಗಲ ಎನ್‌ಪಿಎ ಅಧ್ಯಕ್ಷ ಎಮ.ಕೆ.ನಾಗರಾಜು ಮಾತನಾಡಿ, ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಿರುವುದಕ್ಕೆ ಕ್ಷೇತ್ರದಲ್ಲಿ ಪ್ರತಿ ಮನೆಗೆ 10ಲಕ್ಷ ಲಾಡು ವಿತರಣೆ ಮಾಡ ಲಾಯಿತ. ನಮ್ಮ ಕ್ಷೇತ್ರಕ್ಕೂ ಬಹಳಷ್ಟು ಅನುದಾನ ಬರುವ ನಂಬಿಕೆ ಇದೆ. ಇಂದು ಸಾವಿರಾರು ಅಭಿಮಾನಿಗಳು, ಮುಖಂಡರು ಹಾಲಿನ ಅಭಿಷೇಕ ಮಾಡಿ, ಪಟಾಕಿಸಿಡಿಸಿ ಸಂಭ್ರಮಾಚರಣೆಮಾಡಿದ್ದ ಮರೆಯಲಾಗದ ಕ್ಷಣವಾಗಿದೆಂದರು. ಟಿಎಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ವಿಎಸ್ಎಸ್ಎನ್ ಅಧ್ಯಕ್ಷ ವೀರಮಾರೇಗೌಡ, ಮಧುಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಮಾರೇಗೌಡ, ಉಮಾನಾರಾಯಣಸ್ವಾಮಿ, ಲಕ್ಷ್ಮೀದೇವಮ್ಮ ಕೃಷ್ಣಪ್ಪ, ಹರೀಶ್ ಬಾಬು, ನಟರಾಜು, ಸವಿತಾವೆಂಕಟೇಶ್, ಗೋವಿಂದರಾಜು, ಕುಮುದ್ವತಿ ಸಂಸ್ಥೆ ಮಾಲೀಕ ಚಿಕ್ಕಹನುಮೇಗೌಡರಿದ್ದರು.

ಜೂ.7ಕ್ಕೆ ಯೋಗ ವಾರ್ಷಿಕೋತ್ಸವ

• **ಮೈಸೂರು:** ಮೈಸೂರು ಯೋಗ ಒಕ್ಕೂಟದ 25ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಜೂನ್ 7ರಂದು ನಡೆಯಲಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಕ್ಕೂಟದ ರಜತಮಹೋತ್ಸವ ಅಂಗವಾಗಿ ಆರೋಗ್ಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿ ಸಲಾಗಿದೆ. ಶರೀರ ಶಾಸ್ತ್ರ ಚಿಕಿತ್ಸಾ ಯೋಗ, ಸ್ವರ ಯೋಗ ಗೋಷ್ಠಿಗಳು ಮತ್ತು ಒಕ್ಕೂಟದ ಸದಸ್ಯರಿಗೆ ಗೌರವ ಸಮರ್ಪಣೆ ನಡೆಯಲಿದೆ ಎಂದು ಹೇಳಿದರು. ಮೈಸೂರಿನ ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಕೇಂದ್ರ ಶಾರದಾ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಬೆಳಗ್ಗೆ 9.30ಗಂಟೆಗೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ ದೇವರಾಜು ಹಾಗೂ ಗೌರವಾಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್ ವಹಿಸುವರು ಅತಿಥಿಗಳಾಗಿ ಜಿಎಸ್ಎಸ್ ಯೋಗ ಫೌಂಡೇಶನ್ ಅಧ್ಯಕ್ಷ ಶ್ರೀ ಹರಿ ದ್ವಾರಕನಾಥ್, ಶ್ರೀ ರಾಮಕೃಷ್ಣ ವಿದ್ಯಾ ಕೇಂದ್ರ ಮತ್ತು ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎನ್ ಪಾಪೇಗೌಡ, ಹಿರಿಯ ಸಮಾಜಸೇವಕ ಡಾ. ಕೆ .ರಘುರಾಮ್, ಎಪಿಎಂ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟ್ನರ್ ಎಂಪಿ ನಾಗೇಶ್ ಆಗಮಿಸುವರು. ಪ್ರಾಥಮಿಕ ನುಡಿಯನ್ನು ಒಕ್ಕೂಟದ ಗೌರವಾಧ್ಯಕ್ಷ ಟೀ ಜಲೇಂದ್ರ ಕುಮಾರ್ ನುಡಿಯುವರು. ಬೆಳಗ್ಗೆ 10.30 ರಿಂದ 11.30 ತನಕ ಯೋಗ ಗೋಷ್ಠಿ ನಡೆಯಲಿದೆ. ಶರೀರ ಶಾಸ್ತ್ರ ವಿಷಯವಾಗಿ ಮೈಸೂರು ವೈದ್ಯಕೀಯ ಕಾಲೇಜಿನ ಅನಾಟಮಿ ವಿಭಾಗದ ಮುಖ್ಯಸ್ಥರಾದ ಪ್ರಾಧ್ಯಾಪಕ ಡಾ. ರಾಜಪುರ ಪರಶುರಾಮ್ ಮಾತನಾಡುವರು. ಅಧ್ಯಕ್ಷತೆಯನ್ನು ಮೈಸೂರು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ ವಹಿಸುವರು. ಮುಖ್ಯ ಅತಿಥಿಗಳಾಗಿ ಪಿವೈಎಸ್ಎಸ್ ಅಧ್ಯಕ್ಷ ನಂಜುಂಡಸ್ವಾಮಿ, ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷ ಎಂ.ಎಸ್.ರಮೇಶ್ ಕುಮಾರ್ ಇದ್ದರು.

ಅನ್ನದಾಸೋಹ ಮೂಲಕ ಬಡವರ ಸೇವೆ

• **ದೊಡ್ಡಬಳ್ಳಾಪುರ:** ಸಾವಿರಾರು ದಿನಗಳಿಂದ ನಿರ್ಗತಿಕ ಕಡುಬಡವರಿಗೆ ವಯೋವೃದ್ಧರಿಗೆ ಹಸಿದವರಿಗೆ ಆಹಾರ ವಿತರಣೆ ಮಾಡುವ ಮೂಲಕ ನಿರಂತರ ಅನ್ನದಾಸೋಹ ನಡೆಸುತ್ತಿರುವ ಮಲ್ಲೇಶ್ ಅವರ ಹುಟ್ಟು ಹಬ್ಬದ ಅಂಗವಾಗಿ ಅನ್ನದಾಸೋಹ ಮಾಡಲಾಗುತ್ತಿದೆಂದು ಖ್ಯಾತ ವಕೀಲ ಹಾಗೂ ಚಿರಯುಗ ಕನ್ನಡ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷ ರವಿಮಾವಿನಕುಂಟೆ ತಿಳಿಸಿದರು.

ನಗರದ ದರ್ಗಾ ಜೋಗಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2259 ದಿನದಿಂದ ಪ್ರತಿನಿತ್ಯ ನಡೆಯುತ್ತಿರುವ ನಿರಂತರ ಅನ್ನದಾಸೋಹ ಸಮಿತಿಯ ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಅನ್ನದಾಸೋಹ ಮಾಡುವುದು ಅಷ್ಟು ಸುಲಭದ ಕಾರ್ಯವಲ್ಲ ಎಂದರು.

ಅದರಲ್ಲೂ ದಾನಿಗಳಿಂದ ನಡೆಯುವ ಇಂತಹ ದಾಸೋಹ ಕಾರ್ಯಕ್ರಮಗಳಿಗಂತೂ ಅಡ್ಡಿ ಆತಂಕಗಳೇ ಹೆಚ್ಚು ಅಂತಹದರಲ್ಲಿ ಮಲ್ಲೇಶ್ ರವರು ನಿರಂತರ 2,259 ದಿನಗಳಿಂದ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಎಂದೂ ನಿಲ್ಲಿಸದೆ ನಿರಂತರವಾಗಿ ಹಸಿದವರಿಗೆ ಆಹಾರ ವಿತರಣೆ ಮಾಡುತ್ತಾ ಬರುತ್ತಿದ್ದಾರೆಂದರು. ಈ ಕಾರ್ಯಕ್ರಮ ಕೇವಲ ಆಹಾರ ವಿತರಣೆಗೆ ಸೀಮಿತವಾಗದೆ ತರಕಾರಿ ಶಾಲಾ ಮಕ್ಕಳಿಗೆ ಕಲಿಕಾ



ಪರಿಕರಗಳನ್ನು ವಿತರಿಸುವ ವಯೋವೃದ್ಧರಿಗೆ ಹೊದಿಕೆ ಬಟ್ಟೆಗಳು ವಿತರಿಸುವ, ಕಲಾ ಸೇವೆ ಮಾಡುವ ಕಲಾವಿದರಿಗೆ ತಮ್ಮ ಕಲೆ ಪ್ರದರ್ಶನ ಮಾಡಲು, ನೀಡಲು ಇಚ್ಛೆ ಉಳ್ಳ ದಾನಿಗಳಿಗೆ ತಮ್ಮ ವಿಶೇಷ ದಿನವನ್ನು ಆಚರಿಸಿಕೊಳ್ಳುವ ಉತ್ತಮ ವೇದಿಕೆಯಾಗಿದೆಂದು ತಿಳಿಸಿದರು.

ಇಷ್ಟೆಲ್ಲ ಉತ್ತಮ ಕಾರ್ಯಗಳಿಗೆ ಒಬ್ಬರೇ ಸಾರಥಿ ಅದು ಮಲ್ಲೇಶ್ ರವರು ಇಂದು ಅವರ ಹುಟ್ಟು ಹಬ್ಬದ ಅಂಗವಾಗಿ ಅವರ ಹಿತೈಷಿಗಳು ಅಭಿಮಾನಿಗಳು ಹಾಗೂ ಸಂಗಡಿಗರಿಂದ ಅವರ ಹುಟ್ಟು ಹಬ್ಬದ ಆಚರಣೆ ಮಾಡಲಾಗುತ್ತಿದೆ ಎಂದರು. ಮಲ್ಲೇಶ್ ಒಬ್ಬ ಕಲಾವಿದರಾಗಿದ್ದು ಗಾಯನ ಮಾಡುವ ಮೂಲಕ ಜೀವನ ಸಾಗಿಸುತ್ತಾರೆ. ಕೊರೋನಾ ಸಂದರ್ಭದಲ್ಲಿ, ಸ್ಥಳೀಯರ ಕೆಲ ನಿರ್ಗತಿಕ ಕಡುಬಡವರು ಹಾಗೂ ವಯೋವೃದ್ಧರ ಹಸಿವು ನೋಡಲಾಗದೆ ಪ್ರಾರಂಭವಾದ ಈ ಅನ್ನದಾಸೋಹ ಕಾರ್ಯಕ್ರಮವು ಎಲ್ಲೂ ನಿಲ್ಲದೆ ಪ್ರತಿನಿತ್ಯ ದಾನಿಗಳ ನೆರವಿನಿಂದ ಇಲ್ಲವೇ ಸ್ವತಹ ಮಲ್ಲೇಶ್ ರವರು ತಮ್ಮ ದುಡಿಮೆಯಿಂದ ಈ ಅನ್ನದಾಸೋಹ ಕಾರ್ಯಕ್ರಮ ನಡೆಸುತ್ತಿದ್ದಾರೆ. ಈ ಕಾರ್ಯಕ್ರಮವು ನೂರಾರು ಹಸಿದ ಹೊಟ್ಟೆಗಳಿಗೆ ಆಹಾರ ನೀಡುತ್ತದೆ ಕಲಿಯಲು ಬಯಸುವ ಮಕ್ಕಳಿಗೆ ಕಲಿಕಾ ಪರಿಕರಗಳನ್ನು ನೀಡುತ್ತದೆ ಒಟ್ಟಾರೆ ಬಯಸಿ ಬಂದವರಿಗೆ ಆಸರೆಯಾಗುತ್ತದೆ ಎಂದರು. ಅನ್ನದಾಸೋಹಿ ಮಲ್ಲೇಶ್ ಅವರು ಯಾವುದೇ ಸ್ವಾರ್ಥ ಇಟ್ಟುಕೊಳ್ಳದೆ ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ. ಅವರಿಗೆ ಸಮಾಜದಲ್ಲಿ ಉತ್ತಮ ಗೌರವ ಲಭಿಸುವಂತಾಗಲಿ. ಮುಂದಿನ ದಿನದಲ್ಲಿ ಅವರು ಮತ್ತಷ್ಟು ಉನ್ನತ ಮಟ್ಟಕ್ಕೆ ಏರುವ ಮೂಲಕ ಸಮಾಜಕ್ಕೆ ಮತ್ತಷ್ಟು ಉತ್ತಮ ಸೇವೆ ಸಲ್ಲಿಸುವಂತಾಗಲಿ ಎಂದು ಶುಭ ಹಾರೈಸಿದರು.

ಶೌಚಾಲಯದ ನಿರ್ವಹಣೆಯ ಕೊರತೆ | ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ

ಕೊಣನೂರು ಬಸ್ ನಿಲ್ದಾಣದಲ್ಲಿಲ್ಲ ಸೌಲಭ್ಯ

▸ ಕೆ.ಶಿವಣ್ಣ ಕೆರೆಕೋಡಿ

• **ಕೊಣನೂರು:** ಕೊಣನೂರಿನಲ್ಲಿ ಸುಸಜ್ಜಿತವಾದ ಸಾರಿಗೆ ಬಸ್ ನಿಲ್ದಾಣದ ಕಟ್ಟಡಗಳಿದ್ದರೂ ಕೂಡ ಅಗತ್ಯ ಮೂಲ ಸೌಕರ್ಯದಿಂದ ವಂಚಿತಗೊಂಡಿದೆ.

ಪಟ್ಟಣದ ಸಮೀಪದಲ್ಲಿಯೇ ಕಾವೇರಿ ನದಿ ಹರಿಯುತ್ತಿದೆ. ಜಿಲ್ಲೆಯಲ್ಲಿಯೇ ಮೊದಲ ಬಾರಿಗೆ ಕಾವೇರಿ ನದಿಗೆ ಅಡ್ಡಲಾಗಿ ತೂಗು ಸೇತುವೆಯನ್ನು ನಿರ್ಮಿಸಲಾಗಿದೆ. ಇದು ಬಸ್ ನಿಲ್ದಾಣದಿಂದ ಅತೀ ಸಮೀಪದಲ್ಲಿ ಇದೆ.

ಇಲ್ಲಿನ ನಿಲ್ದಾಣದ ನೆಲ ಹಾಸಿಗೆಗೆ ಸಂಪೂರ್ಣವಾಗಿ ಕಾಂಕ್ರೀಟ್ ಹಾಕಲಾಗಿದೆ. ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ, ಕುಶಾಲನಗರ, ಮಲ್ಲಿಪಟ್ಟಣ, ಕೊಡ್ಲಿಪೇಟೆ ಹಾಗೂ ಇತರೆ ಗ್ರಾಮಗಳಿಗೆ ನಿತ್ಯವೂ 200ಕ್ಕೂ ಹೆಚ್ಚು ಬಸ್‌ಗಳು ಸಂಚರಿಸುತ್ತಿವೆ. ಏಕ ಕಾಲದಲ್ಲಿ 15ಕ್ಕೂ ಅಧಿಕ ಬಸ್‌ಗಳು ನಿಲ್ದಾಣದಲ್ಲಿ ನಿಲ್ಲಬಹುದಾಗಿದೆ. ನಿಲ್ದಾಣ ಸುತ್ತಾ ಕಾಂಪೌಂಡ್ ನಿರ್ಮಿಸಿಲ್ಲ, ಇಲ್ಲಿಯೂ ಕೂಡ ಯಾವುದೇ ಭದ್ರತೆ ಇರುವುದಿಲ್ಲ, ಪಟ್ಟಣದ ಬಸ್ ನಿಲ್ದಾಣ ಮುಂಭಾಗದಲ್ಲಿ ವಿಶಾಲವಾದ ಜಾಗವಿದೆ. ಇಂಟರ್ ಲಾಕ್ ಅಳವಡಿಸಲಾಗಿದೆ. ಕಾಂಪೌಂಡ್ ವ್ಯವಸ್ಥೆ ಇಲ್ಲದ ಪರಿಣಾಮ ನೇರವಾಗಿ ಖಾಸಗಿ ವಾಹನ ನಿಲ್ದಾಣ ಪ್ರವೇಶಿಸಿ ಪಾರ್ಕಿಂಗ್



ಮಾಡಿಕೊಳ್ಳುತ್ತಿರುವುದು ಕಂಡುಬಂದಿದೆ.

ಇದನ್ನು ಸಂಚಾರ ನಿಯಂತ್ರಕರು ಪ್ರಶ್ನಿಸಿದರೇ ವಾಹನ ಸವಾರರು ಉಡಾಫೆಯಿಂದ ನಡೆದುಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಕೊಣನೂರಿನಲ್ಲಿ ಮೊದಲ ಬಾರಿಗೆ ಬಸ್ ನಿಲ್ದಾಣ ನಿರ್ಮಿಸಿದ ಸಂದರ್ಭದಲ್ಲಿ ನಿರ್ಮಿಸಿರುವ ಹಳೆಯ ಶೌಚಾಲಯ ಕಟ್ಟಡವಿದೆ. ಇದು ಅವಸಾನದ ಅಂಚಿನಲ್ಲಿದೆ. ಹಳೆಯ ನಿಲ್ದಾಣವನ್ನು ಹೈಟೆಕ್ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ ವೇಳೆ ನೂತನವಾಗಿ ಶೌಚಾಲಯ ಕಟ್ಟಡ ನಿರ್ಮಿಸಿಲ್ಲ, ಸರಿಯಾಗಿ ನಿರ್ವಹಣೆ ಮಾಡದ ಪರಿಣಾಮ ಪ್ರಯಾಣಿಕರು ದುರ್ನಾತಬೀರುತ್ತಿದ್ದರೂ ಕೂಡ ಸಂಕಷ್ಟದಲ್ಲಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನೂತನವಾಗಿ ಬಸ್ ನಿಲ್ದಾಣದ ಕಾಮಗಾರಿ ಅಭಿವೃದ್ಧಿಗೊಂಡ ಸಂದರ್ಭದಲ್ಲಿ ವಾಟರ್‌ಲೈಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಹಯೋಗದಲ್ಲಿ ನೀರಿನ ಶುದ್ಧೀಕರಣ ಘಟಕವನ್ನು ನಿರ್ಮಿಸಿ ಚಾಲನೆ ನೀಡಲಾಗಿತ್ತು. ಆದರೆ ಹಲವು ವರ್ಷದಿಂದ ಈ ಘಟಕ ಕಾರ್ಯನಿರ್ವಹಿಸುತ್ತಿಲ್ಲ, ಇದರಿಂದ ಪ್ರಯಾಣಿಕರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸೌಲಭ್ಯವಿಲ್ಲ, ಇದರಿಂದ ಖಾಸಗಿ ಅಂಗಡಿಗಳಿಗೆ ತೆರಳಿ ಹಣತೆತ್ತು ಬಾಟಲ್ ನೀರನ್ನು ಕುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾಮನಾಥಪುರದಲ್ಲಿ ಬಸ್ ಘಟಕ ಇದೆ. ಜಾಗದ ಕೊರತೆಯಿಂದ ಇರುವ ಜಾಗವನ್ನು ಅಭಿವೃದ್ಧಿ ಗೊಳಿಸಲಾಗಿದ್ದರೂ ಕೂಡ ಪ್ರಯಾಣಿಕರಿಗೆ ಶುದ್ಧ ಕುಡಿಯುವ ನೀರಿನ ಘಟಕ, ರಕ್ಷಣಾ ವ್ಯವಸ್ಥೆ, ಸೂಕ್ತ ಚರಂಡಿ ವ್ಯವಸ್ಥೆ ಇರುವುದಿಲ್ಲ, ರಾಮನಾಥಪುರ ಹೋಬಳಿ ಕೇಂದ್ರ ಕೂಡ ಹೌದು. ಬಸ್ ನಿಲ್ದಾಣದಿಂದ 100 ಮೀಟರ್ ಅಂತರದಲ್ಲಿ, ಗ್ರಾಪಂ ಕಚೇರಿ, ನಾಡ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಲಕಿಯರ ಪದವಿಪೂರ್ವ ಕಾಲೇಜು, ಇತರೆ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿ ಬಸ್‌ಗಳು ಕೂಡ ರಾಮನಾಥಪುರಕ್ಕೆ ಬಂದೇ ಹೋಗಬೇಕಿರುವ ಹಿನ್ನೆಲೆ ಪ್ರಯಾಣಿಕರ ಸಂಖ್ಯೆ ಅಧಿಕ, ಆದರೂ ಕೂಡ ಸ್ವಚ್ಛತೆಗೆ ಆದ್ಯತೆ ನೀಡಿಲ್ಲ, ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲ, ಏಕ ಕಾಲದಲ್ಲಿ 5ರಿಂದ 7 ಬಸ್‌ಗಳು ನಿಲುಗಡೆ ಮಾಡಬಹುದಾಗಿದೆ. ಹಾಸನ, ಮೈಸೂರು, ಪಿರಿಯಾಪಟ್ಟಣ, ಸಾಲಿಗ್ರಾಮ, ಬೆಂಗಳೂರು, ಮಡಿಕೇರಿ, ಕೇರಳ ಕಣ್ಣಾನೂರು, ಸೋಮವಾರಪೇಟೆ, ಹುಣಸೂರು ಸೇರಿದಂತೆ ಇತರೆ ಪಟ್ಟಣಗಳು, ಗ್ರಾಮಗಳಿಗೆ ಬಸ್ ಸಂಚರಿಸುತ್ತಿವೆ.

> ರಾಮನಾಥಪುರ ಬಸ್ ಘಟಕದಿಂದ ಸುಮಾರು 76ಕ್ಕೂ ಹೆಚ್ಚು ಮಾರ್ಗದಲ್ಲಿ ಬಸ್‌ಗಳು ಸಂಚರಿಸುತ್ತಿವೆ. ಗ್ರಾಮೀಣ ಭಾಗದ ಜನರಿಗೆ ಯಾವುದೇ ರೀತಿಯಲ್ಲಿ ತೊಂದರೆ ಎದುರಾಗದಂತೆ ಗ್ರಾಮೀಣ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಕೊಣನೂರು ಬಸ್ ನಿಲ್ದಾಣದ ಕಾಂಪೌಂಡ್ ಕಾಮಗಾರಿ ಬಾಕಿ ಇದ್ದು ಶೀಘ್ರದಲ್ಲಿಯೇ ಆಗಲಿದೆ.
> ■ ನೂತನ್, ಡಿಪೋ ವ್ಯವಸ್ಥಾಪಕ, ರಾಮನಾಥಪುರ ಘಟಕ

> ಕೊಣನೂರಿಗೆ ಸರಿಯಾದ ಸಮಯಕ್ಕೆ ದೂರದ ಊರಿಗೆ ತೆರಳಲು ಬಸ್‌ಗಳು ಬರುವುದಿಲ್ಲ, ಕೆಲವು ಬಸ್‌ಗಳು ರಾಮನಾಥಪುರದಿಂದ ಹಾಗೆಯೇ ಹೊರಡುತ್ತವೆ. ಇದನ್ನು ಪ್ರಶ್ನಿಸಿದರೆ ಅಧಿಕಾರಿಗಳು ಉಡಾಫೆ ಉತ್ತರ ಕೊಡುತ್ತಾರೆ. ಮೇಲಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕಿದೆ.
> ■ ಸಂತೋಷ್, ವಡವನ ಹೊಸಹಳ್ಳಿ ಪ್ರಯಾಣಿಕರು.

ಕಿರುಸುದ್ದಿ

ತಂತ್ರಜ್ಞಾನದಲ್ಲಡಗಿದೆ ವಿದ್ಯಾರ್ಥಿಗಳ ಭವಿಷ್ಯ

• **ಕೆಂಗೇರಿ:** ಜಾಗತಿಕ ಮಟ್ಟದಲ್ಲಿ ಡಿಜಿಟಲ್ ಮೂಲಸೌಕರ್ಯ ತಂತ್ರಜ್ಞಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಸವಾಲನ್ನು ಮೂಲಸೌಕರ್ಯ ನಾವೀನ್ಯತೆಯ ಸಹಕಾರದಿಂದ ಎದುರಿಸಲು ಸಾಧ್ಯ ಎಂದು ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ ಹೇಳಿದರು. ಮೈಸೂರು -ಬೆಂಗಳೂರು ಮುಖ್ಯರಸ್ತೆಯಲ್ಲಿರುವ ಆರ್.ವಿ.ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಬೆಂಟ್ಲಿ ಸಿಸ್ಟಂ ಇಂಡಿಯಾ ಸಹಯೋಗದ ಮೂಲಸೌಕರ್ಯ ನಾವೀನ್ಯತಾ ಕೇಂದ್ರ ಉದ್ಘಾಟಿಸಿ ಮಾತನಾಡಿ, ಭವಿಷ್ಯದ ಮೂಲ ಸೌಕರ್ಯ ಕ್ಷೇತ್ರದಲ್ಲಿನ ಸವಾಲನ್ನು ಎದುರಿಸಲು ಕೌಶಲಾಭಿವೃದ್ಧಿ ಕೈಗಾರಿಕಾ ಸಹಯೋಗ ಹಾಗೂ ಅನುಭವ ಆಧಾರಿತ ಕಲಿಕೆಯ ಅಗತ್ಯತೆಯನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಬೆಂಟ್ಲಿ ಸಿಸ್ಟಂ ಏಷ್ಯಾ ವಿಭಾಗದ ಶಿಕ್ಷಣ ಮತ್ತು ಸುಸ್ಥಿರತೆ ನಿರ್ದೇಶಕ ಹರ್ಷ ನಾಗಪಾಲ್ ಮಾತನಾಡಿ, ಬೆಂಟ್ಲಿ ಶಿಕ್ಷಣದ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಲಭ್ಯವಿರುವ 65ಕ್ಕೂ ಹೆಚ್ಚು ಸಾಫ್ಟ್‌ವೇರ್ ಅನ್ವಯಿಕೆಗಳು, ಕಲಿಕಾ ಸಂಪನ್ಮೂಲ ಮತ್ತು ವೃತ್ತಿಪರ ಅವಕಾಶವನ್ನು ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು. ಬೆಂಟ್ಲಿ ಸಿಸ್ಟಂ ದಕ್ಷಿಣ ಏಷ್ಯಾ ಪ್ರಾದೇಶಿಕ ಕಾರ್ಯ ನಿರ್ವಾಹಕ ಕಮಲ ಕಣ್ಣನ್ ಮಾತನಾಡಿ, ತಂತ್ರಜ್ಞಾನ ಯುಗದಲ್ಲಿ ಡಿಜಿಟಲ್ ಮೂಲಸೌಕರ್ಯ ಬೆಂಟ್ಲಿ ಸಿಸ್ಟಂ ಜಾಗತಿಕ ಕೊಡುಗೆಗಳನ್ನು ನೀಡುವ ಮೂಲಕ ಸಿವಿಲ್ ಇಂಜಿನಿಯರ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿದೆ ಎಂದರು. ಇಂಜಿನೀಯರಿಂಗ್ ಪರಿಹಾರ ನಿರ್ದೇಶಕ ಎಂ.ಎಸ್.ವಿ.ರಾವ್, ಉಪಪ್ರಾಂಶುಪಾಲೆ ಡಾ.ಕೆ.ಎಸ್. ಗೀತಾ, ಸಿವಿಲ್ ಇಂಜಿನಿಯರ್ ವಿಭಾಗದ ಮುಖ್ಯಸ್ಥ ಡಾ.ಅಂಜನೇಯಪ್ಪ ಸೇರಿದಂತೆ ಇತರರಿದ್ದರು.

ಶಾಸಕರ ಬಗ್ಗೆ ಹಗುರ ಮಾತು ಸಲ್ಲ: ಕಾಂಗ್ರೆಸ್

• **ಮಂಡ್ಯ:** ಜಿಲ್ಲೆಯಲ್ಲಿ ಸರಿಯಾದ ನಾಯಕತ್ವವಿಲ್ಲದೆ ರಾಜ್ಯಾದ್ಯಂತ ದಿವಾಳಿ ಎದುರಿಸುತ್ತಿರುವ ಜೆಡಿಎಸ್ ಜಿಲ್ಲಾಧ್ಯಕ್ಷರು ನಮ್ಮ ನಾಯಕರಾದ ಚಲುವರಾಯ ಸ್ವಾಮಿ ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದನ್ನು ಖಂಡಿಸುತ್ತೇವೆ ಎಂದು ಕಾಂಗ್ರೆಸ್ ಜಿಲ್ಲಾ ವಕ್ತಾರ ಯೋಗೇಶ್ ವರಲಿಂಗನದೊಡ್ಡಿ ತಿಳಿಸಿದರು. ಸುದ್ದಿಗೋಷ್ಠಿಯನ್ನು ದ್ದೇಶಿಸಿ ಮಾತನಾಡಿ, ಚಲುವರಾಯಸ್ವಾಮಿ ಅವರು ಹಂತ ಹಂತವಾಗಿ ಬೆಳೆದು ಬಂದವರು. ಜತೆಗೆ ಜೆಡಿಎಸ್ ಸಂಘಟಿಸಿ ಆ ಪಕ್ಷಕ್ಕೂ ನ್ಯಾಯ ಒದಗಿಸಿದರು. ಅದರ ವರಿಷ್ಠರು ಅವರನ್ನು ನಡೆಸಿಕೊಂಡ ರೀತಿಯಿಂದ ಬೇಸತ್ತು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳಬೇಕಾಯಿತು ಎಂಬು ದನ್ನು ಜೆಡಿಎಸ್‌ನವರು ಅರಿತುಕೊಳ್ಳಬೇಕು ಎಂದು ತಿರುಗೇಟು ನೀಡಿದರು. ಬಾಯಿ ಮಾತಿನಲ್ಲಿ ಹೇಳಿದ್ದನ್ನೇ ಅಸ್ತ್ರವಾಗಿಟ್ಟುಕೊಂಡಿರುವ ಜೆಡಿಎಸ್‌ನವರು ನಾಲಿಗೆ ಕತ್ತರಿ ಸಿಹಾಕುತ್ತೇವೆ. ಎಂಬಂತಹ ಮಾತುಗಳನ್ನು ಆಡುತ್ತಿದ್ದಾರೆ. ಈ ಬಗ್ಗೆ ಅವರಿಗೆ ಆತ್ಮಸಾಕ್ಷಿ ಇಲ್ಲವೇ ಎಂದು ಪ್ರಶ್ನಿಸಿದರು. ಮಂಡ್ಯ ಜಿಲ್ಲೆಗೆ ಕುಮಾರಸ್ವಾಮಿ ಹಾಗೂ ದೇವೇಗೌಡರ ಕೊಡುಗೆಯಾದರೂ ಏನು ಎಂದು ಪ್ರಶ್ನಿಸಿದ ಅವರು, ಒಕ್ಕಲಿಗ ನಾಯಕರನ್ನು ರಾಜಕೀಯವಾಗಿ ತುಳಿದು ಮತ್ತು ಒಕ್ಕಲಿಗ ಜನಾಂಗಕ್ಕೆ ಏನನ್ನೂ ಕೊಡುಗೆ ನೀಡದೆ ಜೆಡಿಎಸ್ ಪಕ್ಷದ ನಾಯಕರನ್ನು ಜಿಲ್ಲೆಯಲ್ಲಿ ತಮ್ಮ ಸ್ವಹಿತ ಶಕ್ತಿಗೆ ಬಳ ಸಿಕೊಳ್ಳುತ್ತಿರುವ ಇವತ್ತಿನ ಜೆಡಿಎಸ್ ಜಿಲ್ಲಾಧ್ಯಕ್ಷರು ಮತ್ತು ಪಕ್ಷದ ನಾಯಕರಿಂದ ಚಲುವರಾಯಸ್ವಾಮಿ ಏನನ್ನೂ ಕಲಿಯಬೇಕಿಲ್ಲ ಎಂದು ದೂರಿದರು. ಗೋಷ್ಠಿಯಲ್ಲಿ ಮುಖಂಡರಾದ ಅಭಿಷೇಕ್, ಸುನಿಲ್‌ಕುಮಾರ್, ಮನುಕುಮಾರ್, ಆನಂದ್ ಇದ್ದರು.

ಇಂದು ಪ್ರತಿಭಾ ಪುರಸ್ಕಾರ

• **ಮಂಡ್ಯ:** ಸ್ನೇಹಬಳಗ ಅಲಯನ್ಸ್ ಕ್ಲಬ್, ಪರಿಸರ ಅಲಯನ್ಸ್ ಕ್ಲಬ್, ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ವಿಭಾಗ, ದುದ್ದ ಇವರ ವತಿಯಿಂದ ಜೂ. 4ರಂದು ಬೆಳಗ್ಗೆ 11 ಗಂಟೆಗೆ ಕಾಲೇಜು ಆವರಣದಲ್ಲಿ ಸಹ್ಯೋತ್ಸವ, ಪರಿಸರ ಗೀತಗಾಯನ, ಕ್ಯಾನ್ಸರ್ ಜಾಗೃತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ. ಕಾಲೇಜಿನ ಪ್ರಾಂಶುಪಾಲೆ ವೀಣಾ ಟಿ. ಅವರು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮವನ್ನು ಸೌತ್ ಮಲ್ಟಿಪಲ್ ಉಪಾಧ್ಯಕ್ಷ ಕೆ.ಟಿ. ಹನುಮಂತು ಉದ್ಘಾಟಿಸುವರು. ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಶ್ವೇತಾ ಎಂ ಅವರು ಕ್ಯಾನ್ಸರ್ ಜಾಗೃತಿ ಉಪನ್ಯಾಸ ನೀಡುವರು. ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಯೋಗನರಸಿಂಹೇಗೌಡ, ಉಪಾಧ್ಯಕ್ಷ ಪ್ರಶೀಲ್‌ಕುಮಾರ್ ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು. ಲಯನ್ಸ್ ಕ್ಲಬ್‌ನ ಕೆ.ಎಸ್. ಚಂದ್ರಶೇಖರ್, ಕಾಲೇಜಿನ ಉಪ ಪ್ರಾಂಶುಪಾಲೆ ರೇಣುಕಮ್ಮ ಎಂ., ಸ್ನೇಹಬಳಗ ಅಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಜೋಗಿಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಇದೇ ವೇಳೆ ಬಸವರಾಜು, ಎಸ್. ಶೇಖರ್, ವೈರಮುಡಿ ಹಾಗೂ ಸಂಗಡಿಗರಿಂದ ಗೀತಗಾಯನ ಕಾರ್ಯಕ್ರಮ ನಡೆಯಲಿದೆ.

ಚೆನ್ನೈ–ಮೈಸೂರು ನಡುವೆ ಹೈಸ್ಪೀಡ್ ರೈಲಿಗೆ ಸಂಸದ ಯದುವೀರ್ ಮನವಿ

ರೈಲು ನಿಲ್ದಾಣ ಮೇಲ್ದರ್ಜೆಗೇರಿಸಿ

• **ಮೈಸೂರು:** ಇಲ್ಲಿನ ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು ಮತ್ತು ತೃತೀಯ ಪ್ರವೇಶ ದ್ವಾರ ಕಾಮಗಾರಿಗಳಿಗೆ ಅನುಮೋದನೆ, ಚೆನ್ನೈ–ಮೈಸೂರು ಹೈಸ್ಪೀಡ್ ರೈಲು ಸಂಪರ್ಕ ವಿಸ್ತರಣೆಗೆ ಮಾಡುವಂತೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರೈಲ್ವೆ ಸಚಿವರಿಗೆ ಮನವಿ ಮಾಡಿದ್ದಾರೆ.

ಈ ಕುರಿತು ರೈಲ್ವೆ ಸಚಿವ ಶ್ರೀ ಅಶ್ವಿನಿ ವೈಷ್ಣವ್ ಅವರಿಗೆ ಬರೆದಿರುವ ಪತ್ರದಲ್ಲಿ ಮೈಸೂರು ರೈಲು ನಿಲ್ದಾಣದ ಬಹುಕಾಲದ ನಿರೀಕ್ಷೆಯ ತೃತೀಯ ಪ್ರವೇಶ ದ್ವಾರ ಹಾಗೂ ಮೇಲ್ದರ್ಜೆಗೇರಿಕೆ ಕಾಮಗಾರಿಗೆ ತಕ್ಷಣದ ಆಡಳಿತಾತ್ಮಕ ಮತ್ತು ಆರ್ಥಿಕ ಅನುಮೋದನೆ ನೀಡುವಂತೆ ಮನವಿ ಮಾಡಿದ್ದಾರೆ. 422 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವ ಈ ಯೋಜನೆ ಪ್ರಯಾಣಿಕರ ಅನುಕೂಲತೆಯನ್ನು ಗಣನೀಯವಾಗಿ ಹೆಚ್ಚಿಸುವುದು. ಇದರ ಜತೆಗೆ, ಪ್ರಸ್ತುತ ಇರುವ ಪ್ರವೇಶ ಮಾರ್ಗಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲಿದೆ. ಅಲ್ಲದೆ, ವಿವಿಧ ಸಾರಿಗೆ ವ್ಯವಸ್ಥೆಗಳ ನಡುವಿನ ಸಂಪರ್ಕವನ್ನು ಸುಧಾರಿಸಿ, ದಕ್ಷಿಣ ಭಾರತದ ಪ್ರಮುಖ ರೈಲು ಕೇಂದ್ರವಾಗಿ ಮೈಸೂರಿನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸಲಿದೆ ಎಂದು ತಿಳಿಸಿದ್ದಾರೆ.

ಜತೆಗೆ, ಚೆನ್ನೈ–ಮೈಸೂರು ಹೈಸ್ಪೀಡ್ ರೈಲು (ಬುಲೆಟ್ ಟ್ರೈನ್) ಸಂಪರ್ಕವನ್ನು ವಿಸ್ತರಿಸುವ ಸಾಧ್ಯತೆಯನ್ನು ಪರಿಗಣಿಸುವಂತೆ ಕೋರಿದ್ದಾರೆ. ಮೈಸೂರು ನಗರ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ, ಶೈಕ್ಷಣಿಕ, ಪ್ರವಾಸೋದ್ಯಮ ಹಾಗೂ ಆರ್ಥಿಕ ಕೇಂದ್ರವಾಗಿ ಬೆಳೆಯುತ್ತಿರುವುದನ್ನು ಉಲ್ಲೇಖಿಸಿದ ಅವರು, ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ರೈಲ್ವೆ ಮೂಲ ಸೌಕರ್ಯವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದಿದ್ದಾರೆ. ಮೈಸೂರು ರೈಲು ನಿಲ್ದಾಣದ ತೃತೀಯ



ಪ್ರವೇಶ ದ್ವಾರ ಹಾಗೂ ಮೇಲ್ದರ್ಜೆಗೇರಿಕೆ ಯೋಜನೆ ಕುರಿತು, ಸಚಿವರ ಹಿಂದಿನ ನಿರ್ದೇಶನದಂತೆ, ತಾವು ವಾಸ್ತುಶಿಲ್ಪಿಗಳು ಹಾಗೂ ರೈಲ್ವೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿದ್ದಾರೆ. ಯೋಜನೆಯ ವಿನ್ಯಾಸ ಮತ್ತು ಯೋಜನಾ ಪ್ರಕ್ರಿಯೆಗಳು ಈಗಾಗಲೇ ಪೂರ್ಣಗೊಂಡಿವೆ. ಈ ಹಿನ್ನೆಲೆಯಲ್ಲಿ ಯೋಜನೆಗೆ ಶೀಘ್ರದಲ್ಲೇ ಆಡಳಿತಾತ್ಮಕ ಹಾಗೂ ಆರ್ಥಿಕ ಅನುಮೋದನೆ ನೀಡಿ, ಕಾಮಗಾರಿಯನ್ನು ತ್ವರಿತವಾಗಿ ಆರಂಭಿಸುವಂತೆ ಮನವಿ ಮಾಡಿದ್ದಾರೆ.

ಚೆನ್ನೈ–ಮೈಸೂರು ಹೈಸ್ಪೀಡ್ ರೈಲು ಮಾರ್ಗ ವಿಸ್ತರಣೆಯ ಸಾಧ್ಯತೆಯನ್ನು ಭವಿಷ್ಯದ ಯೋಜನೆ ಹಾಗೂ ಕಾರ್ಯಸಾಧ್ಯತಾ ಅಧ್ಯಯನದಲ್ಲಿ ಪರಿಗಣಿಸುವಂತೆ ರೈಲ್ವೆ ಸಚಿವಾಲಯವನ್ನು ಕೋರಿದ್ದಾರೆ. ಈ ಯೋಜನೆ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ಆರ್ಥಿಕ ಏಕೀಕರಣವನ್ನು ಬಲಪಡಿಸುವುದರ ಜತೆಗೆ, ಪ್ರವಾಸೋದ್ಯಮ, ವ್ಯಾಪಾರ ಹಾಗೂ ಹೂಡಿಕೆ ಅವಕಾಶಗಳಿಗೆ ಉತ್ತೇಜನ ನೀಡಲಿದೆ. ವೇಗವಾದ ಹಾಗೂ ಪರಿಸರ ಸ್ನೇಹಿ ನಗರಾಂತರ ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದರೊಂದಿಗೆ ಉದ್ಯೋಗ ಸೃಷ್ಟಿಗೆ ಸಹಕಾರಿಯಾಗಲಿದೆ. ಮೈಸೂರಿನ ಬೆಳೆಯುತ್ತಿರುವ ಕೈಗಾರಿಕಾ ಮತ್ತು ಶೈಕ್ಷಣಿಕ ಪರಿಸರ ವ್ಯವಸ್ಥೆಗೆ ಪೂರಕವಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಾರ್ಯತಂತ್ರದ ಮಹತ್ವ ಮತ್ತು ಹೆಚ್ಚುತ್ತಿರುವ ಸಂಪರ್ಕ ಅಗತ್ಯತೆಯನ್ನು ಒತ್ತಿಹೇಳಿದ ಅವರು, ಭವಿಷ್ಯದ ಹೈಸ್ಪೀಡ್ ರೈಲು ಕಾರ್ಯ ಸಾಧ್ಯತಾ ಅಧ್ಯಯನ ಹಾಗೂ ದೀರ್ಘಾವಧಿಯ ರೈಲ್ವೆ ಮೂಲ ಸೌಕರ್ಯ ಯೋಜನೆಯಲ್ಲಿ ಮೈಸೂರು ನಗರ ಒಳಗೊಳ್ಳುವಂತೆ ಮನವಿ ಮಾಡಿದ್ದಾರೆ. ಈ ಎರಡೂ ಮಹತ್ವದ ಯೋಜನೆ ಮೈಸೂರು ಪ್ರದೇಶದ ಆರ್ಥಿಕ ಅಭಿವೃದ್ಧಿಗೆ ಹೊಸ ಉತ್ತೇಜನ ನೀಡಲಿದೆ. ಪ್ರಯಾಣಿಕರ ಅನುಭವವನ್ನು ಉತ್ತಮಗೊಳಿಸು ವುದರ ಜತೆಗೆ ದಕ್ಷಿಣ ಭಾರತದಲ್ಲಿ ವಿಶ್ವಮಟ್ಟದ ಸಾರಿಗೆ ಮೂಲ ಸೌಕರ್ಯ ನಿರ್ಮಾಣದ ಗುರಿಗೆ ಮಹತ್ವದ ಕೊಡುಗೆ ನೀಡಲಿವೆ.

ಮಹಿಳೆ ಹೊಟ್ಟೆಯಲ್ಲಿದ್ದ ಒಂದು ಕೆಜಿ ಗಡ್ಡೆ ಹೊರಕ್ಕೆ

• **ಮಂಡ್ಯ:** ನಗರದ ಮಿಮ್ಸ್ ಆಸ್ಪತ್ರೆಯಲ್ಲಿ ಮೊದಲ ಬಾರಿಗೆ ಮಹಿಳೆಯೊಬ್ಬರ ಹೊಟ್ಟೆಯಲ್ಲಿದ್ದ 1 ಕೆಜಿ ತೂಕದ ಗೆಡ್ಡೆಯನ್ನು ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆ ನಡೆಸಿ ಹೊರತೆಗೆಯುವಲ್ಲಿ ವೈದ್ಯರು ಯಶಸ್ವಿಯಾಗಿದ್ದಾರೆ.

ಗರ್ಭಿಣಿ ಮತ್ತು ಸ್ತ್ರೀರೋಗ ವಿಭಾಗದಲ್ಲಿ ಕಳೆದೆರಡು ವರ್ಷಗಳಿಂದ ಲ್ಯಾಪರೋಸ್ಕೋಪಿಕ್ ಗರ್ಭಕೋಶ ಚಿಕಿತ್ಸೆಗಳು ನಡೆಯುತ್ತಿದ್ದು ಪ್ರಥಮ ಬಾರಿಗೆ ಸುಮಾರು ಒಂದು ಕೆಜಿ ತೂಕವಿರುವ ಫೈಬ್ರಾಯಿಡ್ ಗಡ್ಡೆಯನ್ನು



ಹೊಟ್ಟೆಯನ್ನು ಕೊಯ್ಯದೆ ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದು ಸಾಧನೆ ಮಾಡಲಾಗಿದೆ. ರಾಮನಗರ ಜಿಲ್ಲೆ ಮಾಗಡಿ ತಾಲೂಕಿನ ಗೀತಾ ಎಂಬುವರ ಹೊಟ್ಟೆಯಲ್ಲಿ ಗಡ್ಡೆ ಬೆಳೆದುಕೊಂಡಿತ್ತು. ಹೊಟ್ಟೆ ಊದಿಕೊಂಡು ನೋವು ಬರುತ್ತಿತ್ತು. ವೈದ್ಯರ ಬಳಿಗೆ ಬಂದು ತಪಾಸಣೆಗೊಳಗಾದಾಗ ಸ್ಕ್ಯಾನಿಂಗ್ ಮಾಡಿಸುವಂತೆ ಸೂಚಿಸಿದರು. ಅದರಂತೆ ಸ್ಕ್ಯಾನಿಂಗ್ ಮಾಡಿಸಿ ನೋಡಿದಾಗ ಗಡ್ಡೆ ಬೆಳೆದುಕೊಂಡಿರುವುದು ಗೊತ್ತಾಯಿತು.

ಗಡ್ಡೆ ಒಡೆಯುವ ಹಂತ ತಲುಪಿತ್ತು. ಗಂಭೀರ ಸ್ಥಿತಿಯಲ್ಲಿದ್ದ ಮಹಿಳೆಯನ್ನು ಶಸ್ತ್ರಚಿಕಿತ್ಸೆಗೆ ದಾಖಲಿಸಿಕೊಳ್ಳಲಾಯಿತು. ಗರ್ಭಿಣಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ.ಸವಿತಾ ಮಾರ್ಗದರ್ಶನದಲ್ಲಿ, ಡಾ.ಸಂಜಯ್ ಮತ್ತು ಡಾ.ಯಾತಿಕ ಅನಿಲ್ ಅವರು ಸುಮಾರು ನಾಲ್ಕು ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿದರು.

> **ಬಿಪಿಎಲ್ ಕಾರ್ಡ್ ಇದ್ದವರಿಗೆ ಶಸ್ತ್ರಚಿಕಿತ್ಸೆ ಉಚಿತ. ಇಲ್ಲದಿದ್ದವರಿಗೆ ಅತಿ ಕಡಿಮೆ ದರದಲ್ಲಿ ಶಸ್ತ್ರಚಿಕಿತ್ಸೆ ಮಾಡಿಕೊಡಲಾಗುವುದು. ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ ಮಿಮ್ಸ್‌ನ ಗರ್ಭಿಣಿ ಮತ್ತು ಸ್ತ್ರೀರೋಗ ವಿಭಾಗದ ವೈದ್ಯಕೀಯ ತಂಡಕ್ಕೆ ಅಭಿನಂದನೆಗಳು.**
> ■ **ಡಾ.ಪಿ.ನರಸಿಂಹಮೂರ್ತಿ, ನಿರ್ದೇಶಕರು, ಮಿಮ್ಸ್**

ಮಕ್ಕಳ ಜ್ಞಾನಾರ್ಜನೆಗೆ ಶಿಕ್ಷಕರು ಪ್ರೇರಕರು



• **ತಾವರೆಕೆರೆ:** ಶಿಕ್ಷಕ ವೃತ್ತಿ ಮಾಡುವುದು ಭಾಗ್ಯವಂತರ ಕೆಲಸವಾಗಿದೆ. ಶ್ರೇಷ್ಠ ಸೇವೆ, ಶಿಕ್ಷಕ ಸಮುದಾಯದವರು ಎಲ್ಲ ಕ್ಷೇತ್ರವನ್ನು ಬೆಳೆಸುವ ಗಾರುಡಿಗರು ಎಂದು ಹೊಸಕೋಟೆ ತಾಲೂಕು ನೌಕರ ಸಂಘದ ಅಧ್ಯಕ್ಷ ಮುನಿಗಂಗಪ್ಪ ಹೇಳಿದರು.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಿಕ್ಷಕ ಟಿ.ಎಚ್.ವೆಂಕಟರಾಮಪ್ಪ ಹಾಗೂ ಸಹ ಶಿಕ್ಷಕರಾದ ಡಿ.ಮಂಜುನಾಥ್ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಶಾಲೆಯು ಸಿಬ್ಬಂದಿ ಅಭಿನಂದಿಸಿ ಬೀಳ್ಕೊಡುಗೆ ನೀಡಿದ ಬಳಿಕ ಮಾತನಾಡಿ, ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದಾಗಿದೆ. ಜೀವನದ ಉದ್ದಕ್ಕೂ ನಿಷ್ಠೆಯಿಂದ ಬೋಧನೆ ಮಾಡಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮಾಡುವವರು ಶಿಕ್ಷಕರು. ಮಕ್ಕಳ ಬಾಳಿಗೆ ಬೆಳಕಾಗುವರು. ಸೇವಾ ನಿವೃತ್ತಿ ಬದುಕು ಅತ್ಯಂತ ನೆಮ್ಮದಿಯಾಗಿ ಜೀವನ ಸಾಗಿಸಲಿ ಎಂದು ಹಾರೈಸಿದರು.

> » **ಶಿಕ್ಷಕರಾದ ಟಿ.ಎಚ್. ವೆಂಕಟರಮಣಪ್ಪ, ಮಂಜುನಾಥ್ ಬೀಳ್ಕೊಡುಗೆ**

ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಆರ್.ರವಿಕುಮಾರ್ ಮಾತನಾಡಿ, ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕನ ಪಾತ್ರ ಅತ್ಯಂತ ಮಹತ್ವವಾಗಿದೆ. ಒಬ್ಬ ಶಿಕ್ಷಕ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಿ ಮಕ್ಕಳಿಗೆ ಭವಿಷ್ಯ ರೂಪಿಸಿದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆಂದರು. ಅದೇ ಒಬ್ಬ ಶಿಕ್ಷಕ ತಮ್ಮ ಜವಾಬ್ದಾರಿಯನ್ನು ಮರೆತು ತಪ್ಪು ಮಾಡಿದರೆ ಮಕ್ಕಳು ತಪ್ಪುದಾರಿ ತುಳಿಯುತ್ತಾರೆ ಆದರೆ, ನಮ್ಮ ಶಾಲೆಯ ಶಿಕ್ಷಕರು ಶಾಲೆಯ ಮಕ್ಕಳಲ್ಲಿಯೆ ತಮ್ಮ ಭವಿಷ್ಯವನ್ನು ಕಂಡವರು. ಹೆಚ್ಚು ಸಮಯವನ್ನು ಶಾಲೆಗಾಗಿಯೆ ಮೀಸಲಿಟ್ಟಿದ್ದಾರೆ. ಇಂತಹ ಶಿಕ್ಷಕರು ಸಿಗುವುದು ತುಂಬಾ ಅಪರೂಪ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಪಂ ಮಾಜಿ ಅಧ್ಯಕ್ಷೆ ಪ್ರಿಯಾಂಕಾರಮೇಶ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಂಜುನಾಥ್, ತಾವರೆಕೆರೆ ಗ್ರಾಮ ಪಂಚಾಯಿತಿ ಎಸ್‌ಡಿಎ ಮೀನಾಕ್ಷಿ, ಕಂಪ್ಯೂಟರ್ ಆಪರೇಟರ್, ಮಂಜುಳಾ, ಕರವಸೂಲಿಗಾರ ಬಚ್ಚೇಗೌಡ ಮತ್ತು ಶಾಲೆಯ ಶಿಕ್ಷಕರು ಮತ್ತು ಮಕ್ಕಳು ಹಾಜರಿದ್ದರು.

ದಸರಾ ಕುಮಾರ ಪ್ರಶಸ್ತಿ ವಿಜೇತ ಪೈಲ್ವಾನ್ ವಿಜೇಂದ್ರ ನಿಧನ

• **ಶ್ರೀರಂಗಪಟ್ಟಣ:** ತಾಲೂಕಿನ ಪಾಲಹಳ್ಳಿ ಗ್ರಾಮದ ಹೋರಿ ತಿಮ್ಮೇಗೌಡರ ಕುಟುಂಬದ ಪೈಲ್ವಾನ್ ವಿಜೇಂದ್ರ ಅವರು (65) ಮಂಗಳವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಸರ್ಕಾರಿ ನೌಕರರಾಗಿ ಜತೆಗೆ ಕುಸ್ತಿ ಪಟುವಾಗಿ ನೂರಾರು ಕುಸ್ತಿ ಅಕಾಡದಲ್ಲಿ ಭಾಗವಹಿಸಿ ಜಯಶೀಲರಾಗಿದ್ದರು. ಮೈಸೂರು ನಾಡಹಬ್ಬ ದಸರಾದಲ್ಲೂ ಸ್ಪರ್ಧೆಯಲ್ಲಿ ವಿಜೇತರಾಗಿ ದಸರಾ ಕುಮಾರ ಎಂಬ ಪ್ರಶಸ್ತಿ ಪುರಸ್ಕೃತರಾಗಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳ ಜತೆಗೆ ಅಪಾರ ಅಭಿಮಾನಿಗಳು ಹಾಗೂ ಬಂಧುಮಿತ್ರರನ್ನು ಅಗಲಿದ್ದಾರೆ. ರಾಜ್ಯಾದ್ಯಂತ ಆಗಮಿಸಿದ್ದ ಕುಸ್ತಿ ಪಟುಗಳು, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಎಸ್.ಲಿಂಗಣ್ಣ ಮತ್ತು ಪೈ.ಮುಕುಂದ ಹಾಗೂ ನಿವೃತ್ತ ಪೊಲೀಸ್ ಅಧೀಕ್ಷಕರಾದ ಮುನಿಕೃಷ್ಣ ಸಹ ಅಂತಿಮದರ್ಶನ ಪಡೆದರು. ಬುಧವಾರ ಮಧ್ಯಾಹ್ನ ಸ್ವಗ್ರಾಮದ ಅಂತಿಮ ಸಂಸ್ಕಾರ ನೆರವೇರಿಸಿರುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ.



ಬಾಲಕಾರ್ಮಿಕ ವಿರೋಧಿ ದಿನಾಚರಣೆಗೆ ಸಿದ್ಧತೆ

• **ದೇವನಹಳ್ಳಿ:** ಪ್ರತಿ ವರ್ಷ ಜೂನ್ 12ರಂದು ವಿಶ್ವ ಬಾಲಕಾರ್ಮಿಕಪದ್ಧತಿ ವಿರೋಧಿ ದಿನ ಆಚರಿಸಲಾಗುತ್ತಿದೆ. ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ಎನ್ ಅನುರಾಧಾ ಸೂಚಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು 2002ರಲ್ಲಿ ಜೂನ್ 12ದಿನವನ್ನು ವಿಶ್ವ ಬಾಲಕಾರ್ಮಿಕ ವಿರೋಧಿ ದಿನ ಎಂದು ಘೋಷಣೆ ಮಾಡಿದೆ ಅಂದಿನಿಂದ ಪ್ರತಿ ವರ್ಷ ಜೂನ್ 12ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. ಬಾಲಕಾರ್ಮಿಕತೆಗೆ ರೆಡ್ ಕಾರ್ಡ್: ಮಕ್ಕಳಿಗೆ ನ್ಯಾಯಯುತ ಬಾಲ್ಯ, ವಯಸ್ಕರಿಗೆ ಘನತೆಯ ಕೆಲಸ ಎಂಬುದು ಈ ವರ್ಷದ ಘೋಷವಾಕ್ಯ ಎಂದು ಹೇಳಿದರು.

ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯನ್ನು ಜಿಲ್ಲಾಮಟ್ಟದಲ್ಲಿ ಜೂನ್ 12 ರಂದು ದೊಡ್ಡಬಳ್ಳಾಪುರದ



ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ. ಅಲ್ಲಿಸಾಕಷ್ಟು ಕೈಗಾರಿಕೆಗಳು, ಕಾರ್ಮಿಕರು ಇರುವುದರಿಂದ ಅಂದು ಜಾಗೃತಿ ಜಾಥಾ ನಡೆಯಲಿದ್ದು ಕಾರ್ಮಿಕರಿಗೆ, ಸಾರ್ವಜನಿಕರಿಗೆ ಅರಿವು ಮೂಡಿಸಲಾಗುವುದು ಎಂದರು. ಜಾಥಾ ಕಾರ್ಯಕ್ರಮದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದು ಅವರಿಗೆ ಟಿ-ಶರ್ಟ್ ಮತ್ತು ಟೋಪಿ ವಿತರಿಸಲು, ಕಾರ್ಯಕ್ರಮಕ್ಕೆ ಲಘು ಉಪಹಾರದ ವ್ಯವಸ್ಥೆ ಸೇರಿದಂತೆ ಅಗತ್ಯ ಸಿದ್ಧತೆ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಡಿಸಿ ಸೂಚಿಸಿದರು.

28 ಬಾಲ ಕಾರ್ಮಿಕರ ರಕ್ಷಣೆ: ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಾದ್ಯಂತ ಕೈಗಾರಿಕೆ, ಕಾರ್ಖಾನೆ, ವಿವಿಧ ವಾಣಿಜ್ಯ ಸಂಸ್ಥೆಗಳ ಮೇಲೆ ಅಧಿಕಾರಿಗಳ ಜಂಟಿ ದಾಳಿ ನಡೆಸಿ 28 ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ. ರಕ್ಷಿಸಲ್ಪಟ್ಟ ಬಾಲ ಹಾಗೂ ಕಿಶೋರ ಕಾರ್ಮಿಕರಿಗೆ ಪುನರ್ವಸತಿ ಒದಗಿಸಲಾಗಿ ಮಕ್ಕಳ ಶಿಕ್ಷಣ, ಕುಟುಂಬ ನಿರ್ವಹಣೆ, ಜತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅವರ ಜೀವನ ಸುಧಾರಿಸಲು ಕ್ರಮ ಕೈಗೊಳ್ಳಲಾಗುವುದೆಂದರು.

ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದ್ದು 18 ವರ್ಷದೊಳಗಿನ ಮಕ್ಕಳನ್ನು ಯಾವುದೇ ಕ್ಷೇತ್ರದಲ್ಲಿ ಕೆಲಸಕ್ಕೆ ನೇಮಿಸಿ ಕೊಂಡಿರುವುದು ಕಂಡುಬಂದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ 1098 ಮತ್ತು ಪೊಲೀಸ್ ಇಲಾಖೆಯ ಸಹಾಯವಾಣಿ ಸಂಖ್ಯೆ 112 ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಶೈಲ ಭೀಮಸೇನ ಬಾಗಡಿ, ನ್ಯಾ. ನಿತೀಶ್, ಕಾರ್ಮಿಕ ಅಧಿಕಾರಿ ಮುಕುಂದ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ದೇಗುಲ ಅಭಿವೃದ್ಧಿಗೆ ನೆರವು



• **ದೇವನಹಳ್ಳಿ:** ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ ಚೌಡಪ್ಪನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಶ್ರೀ ಗಂಗಾದೇವಿ ದೇವಾಲಯದ ಆವರಣಕ್ಕೆ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಭೇಟಿ ನೀಡಿ, ಪ್ರಗತಿಯಲ್ಲಿರುವ ಅಭಿವೃದ್ಧಿ ಕಾರ್ಯವನ್ನು ವೀಕ್ಷಿಸಿದರು.

ಗ್ರಾಮದ ಶ್ರೀ ಗಂಗಾದೇವಿ ದೇವಾಲಯ ಸೇವಾ ಟ್ರಸ್ಟ್, ಗ್ರಾಮಸ್ಥರ ಸಹಯೋಗದೊಂದಿಗೆ ನೂತನವಾಗಿ ನಿರ್ಮಿಸುತ್ತಿರುವ ಶ್ರೀ ಗಂಗಾದೇವಿ, ಶ್ರೀ ಕೈವಾರ ಯೋಗಿನಾರೇಯಣರ ಶಿಲಾ ವಿಗ್ರಹ, ರಾಜಗೋಪುರ ಹಾಗೂ ಧ್ವಜಸ್ತಂಭ ಪ್ರತಿಷ್ಠಾಪನಾ ಕಾರ್ಯಕ್ರಮ ಜುಲೈ1ರಿಂದ ಜುಲೈ 3ರವರೆಗೆ ನಡೆಯಲಿವೆ. ಈ ಹಿನ್ನೆಲೆಯಲ್ಲಿ ದೇವಾಲಯದ ಸಿದ್ಧತೆಯನ್ನು ಪರಿಶೀಲಿಸಿದರು. ಬಳಿಕ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಮಾತನಾಡಿ, ದೇವಾಲಯದ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿ ಕಾರ್ಯಗಳು ಯಶಸ್ವಿಯಾಗಿ ನೆರವೇರಲಿ ಎಂದು ಆಶಿಸಿದರು.

> » **ಗಂಗಮ್ಮ ದೇವಿ ದೇಗುಲ ಸಮಿತಿಗೆ ಚೆಕ್ ವಿತರಿಸಿದ ಮಾಜಿ ಶಾಸಕ**

ಗ್ರಾಮಸ್ಥರು ಧಾರ್ಮಿಕ ಶ್ರದ್ಧೆ, ಭಕ್ತಿ ಮತ್ತು ಒಗ್ಗಟ್ಟಿನಿಂದ ಕೈಗೊಂಡಿರುವ ಈ ಕಾರ್ಯ ನಿಜಕ್ಕೂ ಶ್ಲಾಘನೀಯ. ಆ ದೇವರ ಆಶೀರ್ವಾದ ಸದಾ ಎಲ್ಲರ ಮೇಲಿರಲಿ ಎಂದು ತಿಳಿಸಿದರು ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ.ಮಂಜುನಾಥ್, ದೇವನಹಳ್ಳಿ ತಾಲೂಕು ಅಧ್ಯಕ್ಷ ಎಸ್. ಮಹೇಶ್, ಗೌರವಾಧ್ಯಕ್ಷ ಚೌಡಪ್ಪನಹಳ್ಳಿ ಸಂಪಂಗಪ್ಪ, ಕಾರ್ಯಾಧ್ಯಕ್ಷ ಜಿ.ಎ. ರವೀಂದ್ರ, ಪ್ರಧಾನ ಕಾರ್ಯದರ್ಶಿ ಮನೋಹರ್, ಕಾರ್ಯದರ್ಶಿ ರಾಮಾಂಜನೇಯ ದಾಸ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ರಾಜಣ್ಣ, ಪ್ರಮುಖ ಮುಖಂಡರಾದ ರಾಜಣ್ಣ, ಅಶ್ವತ್, ಶಂಕರ್, ಮುನಿರಾಜು, ವೆಂಕಟರಾಮಪ್ಪ, ಮುನಿವೆಂಕಟ ಸ್ವಾಮಿ, ಗ್ರಾಮಸ್ಥರು, ಸ್ಥಳೀಯ ಮುಖಂಡರಿದ್ದರು.

ಶಾಲೆ ಉಳಿವಿಗೆ ಸಹಕರಿಸಿ

• **ಪಾಂಡವಪುರ:** ಸರ್ಕಾರಿ ಶಾಲೆಗಳ ಉಳಿವಿಗೆ ಪೋಷಕರು ಹಾಗೂ ಸಮುದಾಯದ ಸಹಭಾಗಿತ್ವ ಮುಖ್ಯ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದ ಸ್ವಾಮೀಜಿ ಹೇಳಿದರು.

ತಾಲೂಕಿನ ಚಲುವರಸನಕೊಪ್ಪಲು ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಆಯೋಜಿಸಿದ್ದ 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಪೋಷಕರು ಖಾಸಗಿ ಶಾಲೆಯ ವ್ಯಾಮೋಹದಿಂದಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಿಲ್ಲ, ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ, ಉಚಿತ ಊಟ, ಸಮವಸ್ತ್ರ ಸೇರಿದಂತೆ ಮಕ್ಕಳ ಕಲಿಕೆಗೆ ಪೂರಕವಾದ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತಿದೆಂದರು. ಉಪ ವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್ ಮಾತನಾಡಿ, ಚಲುವರಸನಕೊಪ್ಪಲು ಸರ್ಕಾರಿ ಶಾಲೆಯು ರಾಜ್ಯಕ್ಕೆ ಮಾದರಿಯಾಗಿದೆ. ಕೇವಲ 13 ಮಂದಿ ಮಕ್ಕಳಿದ್ದ ಈ ಶಾಲೆಯಲ್ಲಿ ಈಗ 120 ಮಕ್ಕಳಿದ್ದಾರೆ ಎಂದರೆ, ನಿಜಕ್ಕೂ ಎಲ್ಲರೂ ಮೆಚ್ಚುವಂತಹದ್ದು. ಇದೇ ರೀತಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಬೇಕಿದೆಂದರು. ಸಭೆಯ ಸಾನಿಧ್ಯವಹಿಸಿರುವ ನಿಶ್ಚಲಾನಂದಸ್ವಾಮೀಜಿಗಳು ಈ ಹಿಂದೆ ದಕ್ಷ ಮತ್ತು ಪ್ರಾಮಾಣಿಕ ಹಿರಿಯ ಕೆಎಎಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದವರು. ಇವರು ಮತ್ತು ನಾನು ಸರ್ಕಾರಿ ಶಾಲೆಯಲ್ಲಿಯೇ ಓದಿದವರು. ಇದನ್ನು ಅರಿತು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದರು. ಇದೇ ವೇಳೆ ಶಾಲಾ ಮಕ್ಕಳಿಗೆ ಹೂ ನೀಡಿ ಸ್ವಾಗತಿಸಿಕೊಳ್ಳಲಾಯಿತು. ಜಾನಪದ ವಿದ್ವಾಂಸ ಡಾ.ಕ್ಯಾತನಹಳ್ಳಿ ರಾಮಣ್ಣ, ಅಧ್ಯಾಪನ ಟ್ರಸ್ಟ್‌ನ ದಿವ್ಯಾ, ಮುಖ್ಯ ಶಿಕ್ಷಕ ಕುಮಾರ, ಎಸ್‌ಡಿಎಂಸಿ ಅಧ್ಯಕ್ಷ ರಂಗನಾಥ್, ಮಕ್ಕಳ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷ ಎಚ್.ಆರ್.ಧನ್ಯಕುಮಾರ್ ಹಾಗೂ ಶಾಲೆ ಶಿಕ್ಷಕರು ಇದ್ದರು. ಇದೇ ರೀತಿ ಹಾರೋಹಳ್ಳಿ ಶಾಲೆ ಸೇರಿದಂತೆ ತಾಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 20026?27 ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಕ್ಕಳಿಗೆ ಹೂ ನೀಡಿ, ಸಿಹಿ ಹಂಚಿ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು.

ಶಾಲಾ ವಿದ್ಯಾರ್ಥಿಗಳಿಗೆ ಸಂಸದ ಯದುವೀರ್ ಸಲಹೆ

ಶಿಕ್ಷಣದ ಜತೆ ಮಾನವೀಯತೆ ಬೆಳೆಸಿಕೊಳ್ಳಿ

• **ಮಳವಳ್ಳಿ:** ಆಧುನಿಕ ಯುಗದ ಪ್ರಸ್ತುತ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕೆಂದು ಎಂದು ಸಂಸದ ಯದುವೀರ್ ಚಾಮರಾಜ ಕೃಷ್ಣದತ್ತ ಒಡೆಯರ್ ತಿಳಿಸಿದರು.

ಪಟ್ಟಣದ ಭಗವಾನ್ ಬುದ್ಧ ಮಹಾವಿದ್ಯಾಲಯದ ಆವರಣದಲ್ಲಿ ಕಾಲೇಜು ಸಂಸ್ಥಾಪಕ ಅಧ್ಯಕ್ಷ ಯಮದೂರು ಸಿದ್ದರಾಜು ಅವರ ಹುಟ್ಟುಹಬ್ಬದ ಅಂಗವಾಗಿ ಸಾಮಾಜಿಕ ಸೇವಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಪ್ರಧಾನಿ ನರೇಂದ್ರಮೋದಿ ಅವರು ಹಲವಾರು ಸಾಮಾಜಿಕ ಕಾರ್ಯಕ್ರಮಗಳು ದೇಶದ ಅಭಿವೃದ್ಧಿಗೆ ಪೂರಕವಾಗಿದ್ದು, ಶಿಕ್ಷಣ, ಆರೋಗ್ಯ, ಆರ್ಥಿಕತೆ ಸದೃಢರಾಗಲು ವಿಕಸಿತ ಭಾರತಕ್ಕೆ ಕೈಜೋಡಿಸಬೇಕೆಂದು ಹೇಳಿದರು.

ವಿಧಾನಪರಿಷತ್ ಸದಸ್ಯ ವಿವೇಕಾನಂದ ಮಾತನಾಡಿ, ಸರ್ಕಾರದ ನೀತಿಯಿಂದಾಗಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಲ್ಲಿ ಗುಣಾತ್ಮಕ ಶಿಕ್ಷಣದ ಜೊತೆಗೆ



ಮೂಲಭೂತ ಸೌಲಭ್ಯಗಳ ಕೊರತೆಯಿಂದ ಮಕ್ಕಳ ಸಂಖ್ಯೆ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಖಾಸಗಿ ಶಾಲೆಗಳಿಗೆ ನವೀಕರಣಗೊಳಿಸಲು ಹಲವಾರು ಮಾನದಂಡಗಳನ್ನು ಅನುಸರಿಸುತ್ತಿರುವುದು ವಿಷಾದನೀಯ ಎಂದರು.

ಭಗವಾನ್ ಬುದ್ಧ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಯಮದೂರು ಸಿದ್ದರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಮಾಜಿಕ ಸೇವೆ ಮಾಡಬೇಕೆಂಬ ಹಂಬಲದೊಂದಿಗೆ ನನ್ನ ಹುಟ್ಟುಹಬ್ಬದ ಹೆಸರಿನಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ನಾಡಿಗೆ ಅಪಾರವಾದ ಕೊಡುಗೆ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ವಂಶಸ್ಥರು ಕಾರ್ಯಕ್ರಮಕ್ಕೆ ಬಂದಿರುವುದು ನಮ್ಮೆಲ್ಲರ ಪುಣ್ಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮನೋರಂಜಿತ ಭಂಜೇಜಿ, ಇಂದ್ರೇಶ್, ಅಶೋಕ್ ಜಯರಾಂ, ಚೇತನ್ ಕುಮಾರ್, ರಘು, ಸೇರಿದಂತೆ ಇತರರು ಇದ್ದರು.

ದೊಡ್ಡಬಳ್ಳಾಪುರದಲ್ಲಿ ಸಸಿ ನೆಡುವ ಅಭಿಯಾನಕ್ಕೆ ಚಾಲನೆ

ವಿದ್ಯಾರ್ಥಿಗಳಿಗೆ ಹಳ್ಳಿಯ ಪರಿಸರ ಪರಿಚಯಿಸಿ

• **ದೊಡ್ಡಬಳ್ಳಾಪುರ:** ತಾಂತ್ರಿಕ ವಿದ್ಯಾರ್ಥಿಗಳಿಗೆ ಗ್ರಾಮೀಣ ಪರಿಸರದ ಪರಿಚಯ ಮಾಡಿಕೊಡುವ ಅಗತ್ಯತೆ ಹೆಚ್ಚಾಗಿದೆಂದು ಬಿಐಟಿ ಪರಿಸರ ಕ್ಲಬ್ ಅಧ್ಯಕ್ಷ ಧೀರಜ್ ಗೌಡ ತಿಳಿಸಿದರು.

ಪರಿಸರ ಸಂರಕ್ಷಣೆ ಮತ್ತು ಗ್ರಾಮೀಣಾಭಿವೃದ್ಧಿಯ ನಿಟ್ಟಿನಲ್ಲಿ ಒಂದು ಮಹತ್ತರ ಹೆಜ್ಜೆಯಾಗಿ ನವೋದಯ ಚಾರಿಟಬಲ್ ಟ್ರಸ್ಟ್ ಹಾಗೂ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಜಂಟಿಯಾಗಿ ಬುಧವಾರ ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಕೇಂದ್ರದ ಡಾ. ಆ್ಯನಿ ಬೆಸೆಂಟ್ ಪಾರ್ಕ್‌ನಲ್ಲಿ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿ, ಕ್ಯಾಂಪಸ್ ಮತ್ತು ಅದರ ಸುತ್ತಮುತ್ತಲಿನ ಪರಿಸರಕ್ಕೆ ದೀರ್ಘಾವಧಿಯ ಪರಿಸರ ಸಮತೋಲನ ಹಾಗೂ ಜೈವಿಕ ಪ್ರಯೋಜನ ನೀಡುವ ಉದ್ದೇಶದಿಂದ, ಈ ಅಭಿಯಾನದಲ್ಲಿ ವಿವಿಧ ತಳಿಯ ಹಣ್ಣು ಬಿಡುವ ಗಿಡವನ್ನು ಪ್ರಮುಖವಾಗಿ ನೆಡಲಾಯಿತು ಎಂದರು. ಗ್ರಾಮೀಣ ಭಾಗದಲ್ಲಿ ಇಂತಹ ಅಭಿಯಾನವನ್ನು ನಡೆಸುವುದು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉತ್ತಮ ಪ್ರಾಯೋಗಿಕ ಅನುಭವವನ್ನು ನೀಡುತ್ತದೆ.



ಇಂದಿನ ವೇಗವಾಗಿ ಮುನ್ನಡೆಯುತ್ತಿರುವ ತಾಂತ್ರಿಕ ಜಗತ್ತಿನಲ್ಲಿ ಇಂತಹ ಹಸಿರು ಉಪಕ್ರಮ ಅತ್ಯಂತ ಅಗತ್ಯವಾಗಿವೆ. ನವೋದಯ ಚಾರಿಟಬಲ್ ಟ್ರಸ್ಟ್‌ನ ಕಾರ್ಯಾಚರಣೆ ಮತ್ತು ಸಮನ್ವಯ ನಿರ್ದೇಶಕ ಜನಾರ್ದನ್ ಮಾತನಾಡಿ, ಈ ಅಭಿಯಾನದಿಂದ ಜೀವವೈವಿಧ್ಯಕ್ಕೆ ಆಗುವ ಪ್ರಯೋಜನಗಳನ್ನು ಹಂಚಿಕೊಂಡರು. ಹಣ್ಣು ಬಿಡುವ ಮರಗಳನ್ನು ನೆಡುವುದರಿಂದ ಸ್ಥಳೀಯ ಪಕ್ಷಿಗಳು, ಅಳಿಲುಗಳು ಮತ್ತು ಚಿಟ್ಟೆಗಳೂ ಸೇರಿದಂತೆ ವನ್ಯಜೀವಿಗಳಿಗೆ ನಿರಂತರ ಆಹಾರದ ಮೂಲ ಸಿಗುತ್ತದೆ ಎಂದರು.

ಬಿಐಟಿ ಸಿವಿಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳು ಉತ್ಸಾಹದಿಂದ ಸಸಿ ನೆಡುವ ಕಾರ್ಯದಲ್ಲಿ ಶ್ರಮದಾನ ಮಾಡಿದರು. ಕಾರ್ಯಕ್ರಮದಲ್ಲಿ ಬಿ.ಐ.ಟಿ ಪರಿಸರ ಕ್ಲಬ್‌ನ ಫ್ಯಾಕಲ್ಟಿ ಕೋ-ಆರ್ಡಿನೇಟರ್ ಆದ ಕವನ, ಪ್ರಮುಖ ಉಪನ್ಯಾಸಕರಾದ ಡಾ. ಪ್ರಸಾದ್‌ಗೌಡ ಸಿ., ಪ್ರೊ. ದೀಪಿಕಾ ಕೆ.ಸಿ., ಪ್ರೊ. ಕೃಷ್ಣೇಗೌಡ, ಪ ಮುಖಂಡರಾದ ಏಕಾಶಿಪುರ ರಾಜಣ್ಣ ಹಾಗೂ ನವೋದಯ ಚಾರಿಟಬಲ್ ಟ್ರಸ್ಟ್‌ನ ಸಲಹೆಗಾರರಾದ ಲೋಹಿತ್ ವೈ.ಟಿ. ಸೇರಿದಂತೆ ಟ್ರಸ್ಟ್‌ನ ಪದಾಧಿಕಾರಿಗಳಿದ್ದರು.

[illegible]

BEFORE THE HON'BLE ASSISTANT COMMISSIONER DODDABALLAPURA SUB-DIVISION AT DODDABALLAPURA

R.A. (NEL) No. 167/2025

BETWEEN : Sri. Shivaramaiah ...Appellant
AND : Thasildhar & others ...Respondents

NOTICE TO RESPONDENT No. 2

1. Sri Srinivasaiah, (Respondent No. 2), S/o. Late R. Shivaramaiah, Residing at Agalakuppe Village, Sompura Hobli, Nelamanagala Taluk, Bangalore Rural District-562111.

Whereas the Appellant has filed above Appeal against Regular Appeal Against the respondents in this Hon'ble court. The averments of the appeal memorandum may be read as part and parcel this affidavit to avoid the repetition of facts.

Whereas the above case is set down for the appearance of the of Respondent No. 2 **on 08.06.2026 at 3.00 PM** and are hereby directed to appear before this court personally or through a pleader. If you fails to appear before this court the above case will be proceed with against you Ex-parte in accordance with law.

Given under my hand seal and signature on this 16th day of March 2026 at Doddaballapura.

By Order of the Court, Before the Assistant Commissioner, Doddaballapura Sub-Division at Nelamanagala

Advocate for Appellant :
Sri Lokesh K.S, Advocate
1st Floor, KRP Building, Paramanna Layout, Nelamanagala.

[illegible]

IN THE COURT OF THE 1st ADDL. CITY CIVIL JUDGE AT B'LORE, CCH No. 2

O.S. No. 505 of 2026

M/s. CANARA BANK
KENGERI SATELLITE TOWN BR., B'LORE-60.
Rep. by its Chief Mgr. V/s. ....PLAINTIFF

Sri. C. JAYA BODHI & ANOTHER ....DEFENDANTS

SUIT SUMMONS TO THE DEFT. Nos. 1 & 2 UNDER ORDER V, RULE 20(1-A) OF CPC

Deft. No. 1: **Sri. C. JAYA BODHI**
Aged about 32 Yrs, S/o. Sri C. Chowdaiah

Deft. No. 2: **Sri. C. CHOWDAIAH**
Aged about 68 Yrs, S/o. Late Chowdaiah

Both are R/@ # B-9-201, Kalash BDA Apartment, Harsha Layout, Kengeri, Bengaluru-560 060.

Whereas the Plaintiff has instituted the above suit against you for recovery of a total sum of **Rs. 8,24,000/-** along with court costs, together with current and future interest @ 12.60 % p.a. compounded monthly from the date of suit till the date of realisation and other reliefs. Therefore, you are hereby summoned to appear before this Hon'ble Court (**CCH No.2) on 3rd day of July 2026 at 11.00 a.m.** either in person or by a duly instructed pleader to answer the claim, failing which the suit will be disposed off exparte against you.

Given under my hand and seal of this court on 6th day of May. 2026 at Bangalore.

Advocate for the Plaintiff
ROHIT R. ACHAR, B.A. LL.B.,
Partner, M/s. LR ADVOCATES
123, 1st Floor, MS Complex, 9th Main Road, Ideal Homes Township, RR Nagar, Bangalore-560 098.

By Order of the Court
Sr. Sheristedar
City Civil Court
Bangalore-9.

IN THE COURT OF THE HON'BLE PRINCIPAL CIVIL JUDGE AT K.G.F.

C.M.C. No. 136/2026

Petitioners: Smt. Kamalamma, And others

Vs.

Respondent: The Tahasildar, K.G.F, Taluk, K.G.F.

PUBLIC NOTICE

It is hereby informed that the Petitioners **(1) Smt. Kamalamma,** W/o Late Ramakrishnappa Aged about 74 years, **(2) Sri. Harish** S/o Late Munirathnappa & Late Smt. Parvathamma G.G/s of Late Thimmaiah & Late Ramakka, Aged about 30 years, **(3) Sri. Suresh,** S/o Late Munirathnappa & Late Smt. Parvathamma, G.G/s of Late Thimmaiah & Late Ramakka. Aged about 28 years, **(4) Smt. Prabhavathi,** Wo Nagaraju D/o Late Ramakrishnappa G/d Late Thimmaiah & Late Ramakka Aged about 56 years Residing at #61, Chaldiganahalli Village, Parandahalli Post, K.G.F. Taluk 563 122, **(5) Smt. Anusuya,** W/o Subramanyam, D/o Late Ramakrishnappa Aged about 42 years Residing at Mavathur Village, Venkagiri Kote, Chitoor District, A.P: -517 424, **(6) Sri. Lakshmipathi.R,** S/o Late Ramakrishnappa G/s Late Thimmaiah & Late Ramakka Aged about 44 years, **(7) Sri. Shiva Kumar,** S/o Late Ramakrishnappa. G/s Late Thimmaiah & Late Ramakka Aged about 41 years Petitioner No.1 to 3, 6 & 7 are Residing at Pitchahalli Village, Robertsonpet Hobli, K.G.F. Taluk 563 121 have filed a Petition for issuance of Death Certificate of Father in law of the Petitioner No.1 and Grate Grand Father of the Petitioner No. 2 & 3. Grandfather of Petitioner No. 4 to 7 **Sri.Thimmaiah S/o Late Muneppa and Husband of Late Smt. Ramakka for having died on 09/11/1981 at Pitchahalli Village, Robertsonpet Hobli, K.G.F. Taluk** for having died on 09/11/1981 at the Petitioners House at Pitchahalli Village, Robertsonpet Hobli, K.G.F. Taluk. In the said case, the Tahasildar, K.G.F. Taluk has also been arrayed as a Respondent.

It is hereby informed that any interested person shall appear before the Hon'ble Prl. Civil Judge & J.M.F.C., K.G.F. on 4th July 2026 at 11'o Clock, failing which, the matter will be proceeded with.

BY ORDER OF THE COURT
CHIEF MINISTERAL OFFICER PRL CIVIL JUDGE AND JMFC COURT KOLAR GOLD FIELDS

Advocate for Petitioners
Sri. Gurudhath. S, B.Com., LL.B, Advocate
Robertsonpet, K.G.F.
Place: K.G.F., Date: 03-06-2026

IN THE COURT OF THE ASSISTANT COMMISSIONER BENGALURU NORTH SUBDIVISION, BENGALURU

KSCST (BN) : 5/2024

Between : RAMESH S., ...Appellant
And : NANDANA AND OTHERS ...Respondents

RAMSEH S., S/o. Siddalingappa, aged about 33 years, residing at No. 173, 11th Cross, Near Madduramma Temple, Peenya Small Industries, Peenya 1st Stage, Bengaluru North-560058. ...Petitioners

-AND-

1. Smt. SHOBHA, W/o. M. Manohara, Aged about 44 years, House No. 19, 17 Cross, Tumakurur Road, Opposite SRS Bus Stop, 4th Block, Peenya 1st Stage, Peenya Small Industries, Bengaluru North-560058. ...Proposed Defendant No. 4

SUIT SUMMONS TO RESPONDENTS UNDER ORDER V RULE 20(1-A) AND SECTION 151 OF CODE OF CIVIL PROCEDURE 1908.

Whereas the above named petitioner has filed the above petition re-grant the property under PTCL ACT in KSCST No. 5/2024 the same on file of this Hon'ble court by allowing the petition. You the respondent is hereby summoned to appear in this court in person **on the day of 29th day of June at 11 O' Clock** in the forenoon to answer the claim and you are directed to produce on that day all the documents upon which you intend to rely in support of you defense.

Take notice that, in default of your appearance on the day before mentioned, the suit will be heard and determined in your absence.

Given under my hand and seal of the Court, this 1st day of June 2026.

By order of the Court, Assistant Commissioner, Bengaluru North Sub Division, Bengaluru.

ADDRESS OF THE ADVOCATE
LEGAL POINT
SHIVAPRASAD NAYAK, Advocate
No. 469/8, CN Murthy Building, 2nd Floor, (NH-4) Tumkur Road, 2nd Block, Peenya 1st Stage, Ward No. 38, Bangalore - 560 058.

IN THE COURT OF IV ADDL CIVIL JUDGE AND J.M.F.C. AT TUMAKURU

C.Mis.No.250/2026

Petitioner: T.K.MADHU S/o. Late C.H. Kumaraswamy, Aged about 37 years, R/at Vokkedi Road, New Extension, Heggere, Kasaba Hobli, Tumakuru Taluk.

-V/s- Respondents: The Commissioner, Registrar of Birth and Death, Tumakuru Mahanagara Palike, Tumakuru

DRAFT PAPER PUBLICATION

The petitioner has filed the above said petition Under Section 13 (3) of the Registration of Birth and Death Act. to obtain the death certificate of the mother by name M.G.HEMALATHA W/o. C.H.Kumaraswamy, who died on 26-04-2006 at petitioner's residence I.e., 7th Cross, Vijayanagara, Tumakuru City. If any body as any objections or right with respect to the above said facts and petition may file objection in the above said case, by personally or through counsel. The case is posted on 22/5/2026 at 11.00 AM. Otherwise the said matter will be disposed accordance with law.

Given under my hand and the seal of the Court on this day 29 day of May 2026.

By order of the Court,
Sd/- **Shirasthedar,** Civil Judge and JMFC Court, Tumakuru

Adv.for Petitioner,
Sd/- **Naganna,** B.A. LL.B., Advocate,
Sri Koteanjaneyaswamy Temple, Amarasandesha Patrike Building, Chickpet, Tumakuru.
Mob. No.9845180799.

IN THE COURT OF THE ADDITIONAL CIVIL JUDGE AND JMFC AT RAMANAGARA

O.S. No.: 100/2025

BETWEEN: Sri. Somashekaraiah S/o Late. Dodda Narayanappa, Aged about 74 Years, R/at: Sheshagirihalli Village, Hejjala Post, Bidadi Hobli, Ramanagara Taluk and District. ....PLAINTIFF

-AND-

C. P. Yogeshwara and Others. ....DEFENDANTS

NOTICE/SUMMONS DEFENDANT No.1

Sri. C.P. Yogeshwara S/o Sri. Puttamadegowda, Aged about 60 years, R/at: No. 464, 1st G Cross, 2nd Phase, BSK 3rd Stage, Bengaluru-560085.

Whereas the plaintiff has instituted the above suit against the defendants for Injunction. The Defendant No.1 is hereby summoned in this court to appear in person or by a Pleader on 30-06-2026 at 11-00 A.M. to answer the claim and on the day fixed for your appearance.

Take notice that, in default of your appearance on the day before mentioned, the suit will be heard and determined in your absence.

SCHEDULE

Item No.1: All that piece and parcel of the agricultural property bearing Sy. No. 15, Block 1, situated at: Sheshagirihalli Village, Bidadi Hobli, Ramanagara Taluk and District, measuring 3 acres and bounded on: East By: Megacity properties, West By: Property of Thimmegowda @ Ganesh, North By: Megacity properties, South By: property of Narasappa sons.

Item No. 2: All that piece and parcel of the agricultural property bearing Sy. No.15 Block 9, situated at: Sheshagirihalli Village, Bidadi Hobli, Ramanagara Taluk and District, measuring 2 acres and bounded on: East By: Rajashekar's property of K.R.Pura Survey number, West By: Megacity properties, North By: property of Byatappa and Raju, South By: property of Revanna and Maraiah.

Item No. 3: All that piece and parcel of the property in survey number 65, (old Sy.No.65/1) measuring 2 Acres 11 guntas (11 guntas kharab) situated at: Sheshagirihalli Village, Hejjala Post, Bidadi Hobli, Ramanagara Taluk and District and bounded on: East By: 2 Property of Revanna, West By: Property of Venkataramanappa, North By: Property of Venkataramanappa, South By: Property of Muthurayaswamy and Government lands in Sy. No.15.

Item No. 4: All that piece and parcel of the property in survey number 6/2, measuring 27 guntas and 6/4 measuring 1 gunta (old Sy.No.6) totally measuring 28 guntas situated at: Sheshagirihalli Village, Hejjala Post, Bidadi Hoti, Ramanagara Taluk and District and bounded on: East By: Property of Naganna, West By: Property of Krishnappa, North By: Gokatte, South By: Property of Ramappa.

Given under my hand and the seal of the Court on this the 03-06-2026 at Ramanagara.

By order of the Court,
Sherasthedar, Prl. Civil Judge, Junior Division, and J.M.F.C. at Ramanagara.

Advocate for Plaintiffs: K.M. Venkatesh Mouni, Advocate,
No.14, 15th Cross, Bannappa Park Road, Cubbonpet, Bangalore-560002.

CHANGE OF NAME

I, **MANJUNATHA T.R.**, S/o Ramachandrappa T, age 49 years, R/at No. 41, Banashankari Krupa, Sai Misty Woods Layout, Gantiganahalli, Singanayakanahalli, Bangalore-560 064 do hereby declare that I have changed my name from **MANJUNATHA T.R.** to **MANJUNATH T.R.**, henceforth I shall be known and called as **MANJUNATH T.R.** for all purposes, vide affidavit dated 3rd June 2026, sworn before Advocate and Notary **Smt. VATSALA** at Bangalore.

BEFORE THE MOTOR ACCIDENT CLAIMS TRIBUNAL AT BANGALORE (SCCH-20)

MVC. No. 9219/2025

Between: Kempamma & another ...Petitioner
And: Usman Gani & others ...Respondents

NOTICE TO RESPONDENT No.1

Usman Gani S/o Shakil Ahmad, R/at No.4, 4th Cross, 3rd Main Road, Kogilu Layout, Near Anwariya Masjid, Yelahanka, Bangalore- 560064. (Owner of the Car bearing Reg. No.KA-51-N-7456)

WHEREAS, the petitioner in MVC. No.9219/2025, has filed the above claim petition against the respondents seeking compensation for a Sum of Rs.30,00,000/- an account of death of **Anjinappa** S/o Kempanna in a road traffic accident involving your vehicle Car bearing Reg No. KA-51-N-7456, which occurred on 01-01-2025 at about 07.45 A.M, near HP Petrol Bunk, Kodagurki Village, Devanahalli-Nandi Hills road, Devanahalli, Bangalore, you are hereby directed to be present the Hon'ble court (Mayo Hall SCCH-20) on **30/07/2026** at **11:00 A.M.** personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on this 03/06/2026

By order of the Court, Sheristedar, Court of Small Causes, Mayo Hall Unit, Bengaluru

Advocate for Petitioner: **M. Subramani**
No.13, 12th Cross, Udayaravi Divine Paradise Building, 3rd floor, Cubbonpet, Bangalore- 560002.

BEFORE THE MOTOR ACCIDENT CLAIMS TRIBUNAL AT BANGALORE

MVC.No.2709/2025

BETWEEN: Rupa Pegu ...PETITIONER
AND: Shobha & another ...RESPONDENTS

NOTICE TO RESPONDENT No. 1

Shobha, W/o Gwotham.K.S, R/at Doddakari Village, Bethamangala Post, Kolar Taluk & District, Kolar-563101, (Owner of the Bolero vehicle bearing Reg No. KA-51-AL-9793)

WHEREAS, the petitioner in MVC. No.2709/2025, has filed the above claim petition against the respondents seeking compensation for a Sum of Rs.25,00,000/- for the injuries sustained by Rupa Pegu in a road traffic accident involving your vehicle Canter bearing Reg No. KL-27-6911, which occurred on 07-04-2025 at about 10.30 A.M, on Chintamani-Hoskote-SH82, Near Doddahulluru Village, Bangalore, you are hereby directed to be present before the Hon'ble court (Mayo Hall SCCH-21) on **30-06-2026** at 11:00 A.M. personally or through a pleader in the above case, duly instructed by you, failing which the matter will be heard in your absence, placing you Ex-parte.

Given under my hand and seal of the court on this 06-05-2026.

By order of the Court, Sheristedar, Court of Small Causes, Mayo Hall Unit, Bengaluru.

Advocate for petitioner: **M. SUBRAMANI**
No.13, 12th Cross, Udayaravi Divine Paradise Building, 3rd floor, Cubbonpet, Bangalore -560002.

BEFORE THE MOTOR ACCIDENT CLAIMS TRIBUNAL AT BENGLAURU (SCCH- 11)

MVC. No. 1230/2026

BETWEEN: THILAK KUMAR .C ... PETITIONER
AND: SHIVAPRAKASH AND ANOTHER ... RESPONDENTS

NOTICE TO RESPONDENT No.1

Shivaprakash, S/o. Kannan, R/at: No. 236, Masjid Road, Parvathi Nagar, Attibele Anekal Taluk, Benglauru, Karnataka-562107

(RC Owner of Bus bearing reg.no.KA-11-B-0360)

WHEREAS, The petitioners has instituted the above case against the Respondent claiming compensation of Rs 30,00,000/-(Thirty Lakhs only) for the injury occurred in a Road Traffic Accident, which took place on Gandhinagara, Bangarpet, KGF, Karnataka. At about 11:00 to 11:15 pm on 30.11.2025. Involved Bus bearing reg.no.KA-11-B-0360. You are hereby summoned to appear before this court in person or by pleader on **29/06/2026** at **11:00 A.M.** failing which the case will be disposed off Exparte.

Given under my hand and seal of the court on this 01/06/2026

By order of the Court, Assistant Registrar, Court of Small Causes, Bangalore

AMARESHA .H.N. Advocate
Office: No.39/2, 5th Floor, ASVNV Commercial Complex, Opp: SBI Head Office, K.G. Road, Bengaluru-560009

[illegible]

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ,
ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ. ಮಂಡ್ಯ ಜಿಲ್ಲೆ.

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂ:02/2026-27 ದಿನಾಂಕ:02.06.2026. – (ದ್ವಿ ಲಕೋಟೆ ಪದ್ಧತಿ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರ ಪರವಾಗಿ ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆ ಇಲ್ಲಿ ನೋಂದಾಯಿಸಿರುವ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ (ದ್ವಿ ಲಕೋಟೆ ಪದ್ಧತಿಯಲ್ಲಿ) 16.37 ಲಕ್ಷ ಮೊತ್ತದ 1 ಕಾಮಗಾರಿಗೆ KC4 ಅನ್ವಯ ಐಟಂವಾರು (KPPP ಪೋರ್ಟಲ್ ಮೂಲಕ ಮಾತ್ರ) ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಅಂದಾಜು ಮೊತ್ತ , ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ http://kppp.karnataka.gov.in ಪೋರ್ಟಲ್‌ನಲ್ಲಿ ದಿ:02.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ನಂ.06, ಹೇ.ಎ.ದ.ನಾಲಾ.ವಿಭಾಗ,
ಕಾ.ನೀ.ನಿ.ನಿ, ಪಾಂಡವಪುರ

ವಾಪಾಸಂ/ಓಸಿ-ಮಂ/ಕೆಎಸ್‌ಎಂಸಿಎ/168/2025-26

[illegible]

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್,
ರೇಷ್ಮೆ ಇಲಾಖೆ, ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ, ವಿಜಯಪುರ. ದೂರವಾಣಿ ಸಂ:08352-200066,
ಇ-ಮೇಲ್:ddsbjp.sericulture@gmail.com

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ಜಿಲ್ಲೆಯ ರೇಷ್ಮೆ ಇಲಾಖೆಯ 03 ತಾಲ್ಲೂಕಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.

1) **ಟೆಂಡರ ವಿವರ:** ರೇಷ್ಮೆ ಇಲಾಖೆಯ 03 ತಾಲ್ಲೂಕುಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಟೆಂಡರ್ ಪ್ರಕಟಣೆ **2) ಟೆಂಡರ್ ಸಂಖ್ಯೆ** SD/2026-27/SE0309 ದಿನಾಂಕ:- 02.06.2026 3) ಇ-ಪೋರ್ಟಲನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ:- 02.06.2026.** 4) **ಕಛೇರಿ ವಿಳಾಸ:-** ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯಪುರ, ರೇಷ್ಮೆ ಇಲಾಖೆ ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ ವಿಜಯಪುರ-586108 5) ಟೆಂಡರ್ ಡೌನ್‌ಲೋಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ & ಸಮಯ 17.06.2026 ಸಂಜೆ 17.00 ಗಂಟೆ** 6) ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯೂಮೆಂಟನಲ್ಲಿ ತಿಳಿಸಿರುವಂತೆ 7) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ & ಸಮಯ:-19.06.2026 ಬೆ:- 11.00 ಗಂಟೆಗೆ** 8) ಆರ್ಥಿಕ ಬಿಡ್ ತೆರೆಯುವ **ದಿನಾಂಕ:- 20.06.2026 ಬೆ: 11.30** ಗಂಟೆಗೆ (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ). ಆಸಕ್ತರು "ಇ-ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ವಾಸಾಸಂಇ/ವಿಜಯಪುರ/126/ಕೆಎಸ್‌ಎಂಸಿಎ/2026-27

ಸಹಿ/- ರೇಷ್ಮೆ ಉಪನಿರ್ದೇಶಕರು,
ಜಿಲ್ಲಾ ಪಂಚಾಯತ, ವಿಜಯಪುರ

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಶ್ರೀ ರಂಗನಾಥ ಕಾಂಪ್ಲೆಕ್ಸ್ ಪಂಚಮುಖಿ ವೃತ್ತ, ಹೊಯ್ಸಳ ನಗರ, ಹಾಸನ-573201
ph:08172-267223, Email: cdpohassan@yahoo.com, hassancdpo@gmail.com
ಸಂಖ್ಯೆ:ಶಿಅಯೋಹಾ:ಕೌ.ದೌಜಾಮೂಸಿ:ಇ-ಟೆಂಡರ್:2026-27/222
ದಿನಾಂಕ:03-06-2026

'ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್‌ಪೋರ್ಟಲ್' ಟೆಂಡರ್ ಪ್ರಕಟಣೆ (Notice inviting Tender through Karnataka Public Procurement Portal)

ವಿಷಯ : ಶಿಶು ಅಭಿವೃದ್ಧಿ ಯೋಜನೆ, ಹಾಸನ ಇಲ್ಲಿ ಕೌಟುಂಬಿಕ ದೌರ್ಜನ್ಯದಡಿ ಒಂದು ಕಂಪ್ಯೂಟರ್ ಆಪರೇಟರ್ ಮತ್ತು ಒಂದು ಮೆಸೆಂಜರ್ ಹುದ್ದೆಗಳನ್ನು ಬಾಹ್ಯ ಮೂಲದಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು 2026-27ನೇ ಸಾಲಿಗೆ ಟೆಂಡರ್ ಆಹ್ವಾನಿಸಿರುವ ಬಗ್ಗೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಾಸನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಕೌಟುಂಬಿಕ ದೌರ್ಜನ್ಯದಡಿ ಒಂದು ಕಂಪ್ಯೂಟರ್ ಆಪರೇಟರ್ ಮತ್ತು ಒಂದು ಮೆಸೆಂಜರ್ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಅರ್ಹ ಬಾಹ್ಯಮೂಲ ಸ್ವಯಂಸೇವಾ ಸಂಸ್ಥೆಗಳು/ಏಜೆನ್ಸಿಗಳಿಂದ 2026-27ನೇ ಸಾಲಿಗೆ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್‌ನ್ನು ಈ ಮುಂದೆ ಹೇಳಲಾಗಿರುವ ನಿಬಂಧನೆಗಳಿಗೊಳಪಟ್ಟು ಆಹ್ವಾನಿಸಲಾಗಿದೆ. ಆಸಕ್ತರು https://kppp.karnataka.gov.in/ನಲ್ಲಿ ಅರ್ಜಿ ಫಾರಂ ಹಾಗೂ ನಿಬಂಧನೆಗಳನ್ನು ಪಡೆದು ಸಂಬಂಧಿಸಿದ ದಾಖಲಾತಿಗಳೊಂದಿಗೆ Upload ಮಾಡಿಸತಕ್ಕದ್ದು. ಕ್ರ.ಸಂ.ಟೆಂಡರ್‌ನ ವಿವರ 1.ಶಿಶು ಅಭಿವೃದ್ಧಿ ಯೋಜನೆ, ಹಾಸನ ಇಲ್ಲಿ ಕೌಟುಂಬಿಕ ದೌರ್ಜನ್ಯದಡಿ ಒಂದು ಕಂಪ್ಯೂಟರ್ ಆಪರೇಟರ್ ಮತ್ತು ಒಂದು ಮೆಸೆಂಜರ್ ಹುದ್ದೆಗಳ ಸೇವೆಯನ್ನು ಬಾಹ್ಯಮೂಲದಿಂದ ಒದಗಿಸಲು ಟೆಂಡರ್ ಆಹ್ವಾನ ಟೆಂಡರ್‌ನ ಅಂದಾಜು ಮೊತ್ತ (ವಾರ್ಷಿಕ)ರೂ.573873/- ಇ.ಎಂ.ಡಿ ಮೊತ್ತ ರೂ.11500/-ಗಳು 2.ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ದಿನಾಂಕ:02-07-2026 ರಂದು ಅಪರಾಹ್ನ 5:30ರ ವರೆಗೆ 3.ತಾಂತ್ರಿಕ ಬಿಡ್‌ತೆರೆಯುವ ದಿನಾಂಕ04-07-2026 ರಂದು ಪೂರ್ವಾಹ್ನ10.00ಗಂಟೆಗೆ 4.ಆರ್ಥಿಕ ಬಿಡ್ ತೆರೆಯುವ ದಿನಾಂಕ:06-07-2026 ರಂದು ಅಪರಾಹ್ನ 4 ಗಂಟೆಗೆ

ಸಹಿ/-ಶಿಶು ಅಭಿವೃದ್ಧಿ
ಯೋಜನಾಧಿಕಾರಿಗಳು, ಹಾಸನ.

ವಾಸಾಸಂಇ/ಓಸಿಸಿ/ಹಾಸನ/187/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ಶಾಶಾ-1&2/ಇ-ಟೆಂಡರ್ ಪ್ರಕಟಣೆ/2026-27/528 ದಿನಾಂಕ:03-06-2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2,3 & 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅಡಿಯಲ್ಲಿ ಯಾದಗಿರಿ ತಾಲೂಕಿನ (1)36181, ಶಹಾಪುರ ತಾಲೂಕಿನ (1) 35311/2ನೇ ಕರೆ ಹಾಗೂ ಸುರಪುರ ತಾಲೂಕಿನ (1)35967, ಒಟ್ಟು 3 (ಮೂರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:**ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ. **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 06.06.2026 (11.30 ಗಂಟೆ ನಂತರ)(ಕೆಡಬ್ಲ್ಯೂ-4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 09.06.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 12.06.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 15.06.2026 (11.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 17.06.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/98/ಕೆ.ಎಸ್.ಎಂ.ಸಿ.ಎ/2026-27 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

(ನೋಂದಾಯಿತ ಮತ್ತು ಪ್ರಧಾನ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)
ಕಂಪನಿ ಗುರುತು ಸಂಖ್ಯೆ : L85110KA1924PLC001128 ಇ-ಮೇಲ್ : investor.grievance@ktk.bank.in
ಕಂಪನಿ ಜಾಲತಾಣ : https://karnatakabank.bank.in ಫೋನ್ ನಂ. : 0824-2228222

ನೋಟೀಸು (ಬ್ಯಾಂಕಿನ ಷೇರುದಾರರ ಗಮನಕ್ಕಾಗಿ)

ಈ ಮೂಲಕ ಬ್ಯಾಂಕಿನ ಷೇರುದಾರರಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯ್ದೆ 2013ರ ಸೆಕ್ಷನ್ 124(6) ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ ನಿಯಮಗಳು, 2016ರ (IEPF Rules) ನಿಬಂಧನೆಗಳಿಗೆ ಅನುಗುಣವಾಗಿ ಸತತ ಏಳು ವರ್ಷದ ಅವಧಿಗೆ ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು, ಸಂಬಂಧಪಟ್ಟ ಷೇರುಗಳೊಂದಿಗೆ, IEPFಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಈ ವಿಷಯದ ಕುರಿತಾಗಿ, ಹಣಕಾಸು ವರ್ಷ 2025-26ರಲ್ಲಿ IEPFಗೆ ವರ್ಗಾಯಿಸಲಾಗುವ ಡಿವಿಡೆಂಡ್ ಮತ್ತು ಷೇರುಗಳ ಬಗೆಗಿನ ಮಾಹಿತಿಯನ್ನು ಸಂಬಂಧಪಟ್ಟ ಷೇರುದಾರರಿಗೆ ದಿನಾಂಕ 30.05.2026 ಪತ್ರದ ಮೂಲಕ ತಿಳಿಸಲಾಗಿದೆ. ಅಲ್ಲದೆ ಅಂತಹ ಸಂಬಂಧಪಟ್ಟ ಷೇರುದಾರರ ಮಾಹಿತಿಯನ್ನು ಬ್ಯಾಂಕಿನ ಜಾಲತಾಣ https://www.karnatakabank.bank.in/dividend-refund-search ನಲ್ಲಿ ಕೂಡ ಪ್ರಕಟಿಸಲಾಗಿದೆ. ಈ ವಿವರಗಳನ್ನು ಷೇರುದಾರರು ಪರಿಶೀಲಿಸಿ, ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು 31.07.2026 ರ ಮುಂಚಿತವಾಗಿ ಪಡೆಯಬೇಕಾಗಿ ಈ ಮೂಲಕ ಕೋರುತ್ತೇವೆ.

ಈ ಮೇಲೆ ಉಲ್ಲೇಖಿಸಿದ ಷೇರುಗಳು ಭೌತಿಕ ರೂಪದಲ್ಲಿದ್ದರೆ, IEPF ನಿಯಮಗಳ ಪ್ರಕಾರ ಅಂತಹ ಷೇರುಗಳಿಗೆ, ಹೊಸ ಷೇರು ಪ್ರಮಾಣಪತ್ರಗಳನ್ನು ನೀಡಿ, ಆ ಷೇರುಗಳನ್ನು ವಿದ್ಯುನ್ಮಾನ ರೂಪದಲ್ಲಿ (Demat) IEPFಗೆ ವರ್ಗಾವಣೆ ಮಾಡಲಾಗುತ್ತದೆ. ಅನಂತರದಲ್ಲಿ, ಅಂತಹ ಷೇರುಗಳ ಮೂಲ ಷೇರು ಪ್ರಮಾಣಪತ್ರಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ. ಅಲ್ಲದೆ, ಷೇರುಗಳನ್ನು IEPFಗೆ ವರ್ಗಾವಣೆ ಮಾಡುವ ಸಲುವಾಗಿ ಷೇರು ಪ್ರಮಾಣ ಪತ್ರಗಳ ನೀಡಿಕೆಗೆ ಸಂಬಂಧಿಸಿದಂತೆ, ಬ್ಯಾಂಕ್ ತನ್ನ ಜಾಲತಾಣದಲ್ಲಿ ಕೊಡಮಾಡಿರುವ ವಿವರಗಳು ಈ ವಿಷಯದ ಕುರಿತಾದ ಪೂರ್ಣಾಪ್ರಮಾಣದ ನೋಟೀಸು ಎಂದು ಪರಿಗಣಿಸಲಾಗುತ್ತದೆ.

ಈ ಸಂಬಂಧ ಡಿವಿಡೆಂಡ್ ಪಾವತಿಯನ್ನು ಕೋರಿ ಷೇರುದಾರರು ಸಲ್ಲಿಸುವ ಯಾವುದೇ ಮನವಿಯು (ಸೂಕ್ತ ದಾಖಲೆಗಳೊಂದಿಗೆ) 31.07.2026 ರ ಒಳಗಾಗಿ ಬ್ಯಾಂಕಿಗೆ/ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್ (RTA) ತಲುಪದೇ ಇದ್ದ ಪಕ್ಷದಲ್ಲಿ, ಈ ಪ್ರಕಟಣೆಯನ್ನೇ ಅಂತಿಮ ನೋಟೀಸು ಎಂಬುದಾಗಿ ಪರಿಗಣಿಸಿ ಅಂತಹ ಡಿವಿಡೆಂಡ್ ಮತ್ತು ಷೇರುಗಳನ್ನು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ IEPFಗೆ ವರ್ಗಾಯಿಸಲಾಗುತ್ತದೆ.

ಈ ರೀತಿ IEPFಗೆ ವರ್ಗಾವಣೆಯಾದ ಡಿವಿಡೆಂಡ್ ಮತ್ತು ಷೇರುಗಳನ್ನು ಹಿಂಪಡೆಯಲು IEPF ನಿಯಮಗಳ ಪ್ರಕಾರ ಷೇರುದಾರರು IEPF-5 ಅರ್ಜಿಯನ್ನು MCA ಪೋರ್ಟಲ್‌ನಲ್ಲಿ https://www.mca.gov.in/ ನಲ್ಲಿ ಸಲ್ಲಿಸಬಹುದು. ವಿವರಗಳಿಗಾಗಿ https://www.iepf.gov.in/ ಜಾಲತಾಣವನ್ನು ಸಂಪರ್ಕಿಸಬಹುದು.

ಡಿವಿಡೆಂಡ್ ಪಾವತಿಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ ಷೇರುದಾರರು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್-ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ - ನಂಬರ್-30, ರಮಣ ರೆಸಿಡೆನ್ಸಿ, ಬಾಲ್ಕನೆ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಇವರನ್ನು ಸಂಪರ್ಕಿಸಬಹುದು. (ದೂ. ಸಂಖ್ಯೆ:080-23460815-18, ಇ-ಮೇಲ್: irg@integratedindia.in.)

ದಿನಾಂಕ: 03.06.2026
ಸ್ಥಳ : ಮಂಗಳೂರು

ಕರ್ನಾಟಕ ಬ್ಯಾಂಕ್ ಲಿಮಿಟೆಡ್ ನ ಪರವಾಗಿ
ಶಾಮ್ ಕೆ.
ಕಂಪನಿ ಕಾರ್ಯದರ್ಶಿ

ಪುರಸಭಾ ಕಾರ್ಯಾಲಯ ಜಿಗಣಿ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560105.
ದೂ: 080-29760400 : E-Mail: itstaff_ulb_jigani@yahoo.com, jiganideo@gmail.com

ಕ್ರ.ಸಂ. ಜಿ.ಪು.ಕಾ/ಕಲ್ಯಾಣ ಶಾಖೆ/03/2025-26 ದಿನಾಂಕ: 30.05.2026

-:ಸಾರ್ವಜನಿಕ ಪ್ರಕಟಣೆ:-

ಈ ಮೂಲಕ ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ **ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ವಿಕಲಚೇತನರಿಗೆ ಸೇರಿದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಜಿಗಣಿ ಪುರಸಭೆಯ 2019-20 ರಿಂದ 2025-26ರವರೆಗೆ ಉಳಿಕೆ ಮೊತ್ತ, ಮತ್ತು 2026-2027ನೇ ಸಾಲಿನ ಸ್ವಂತ ನಿಧಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯ ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿಯಲ್ಲಿ ಶೇ 24.10%, 7.25% ಹಾಗೂ 5% ಯೋಜನೆಯ ಕಲ್ಯಾಣ ಕಾರ್ಯಕ್ರಮಗಳಿಗೆ ಕಾಯ್ದಿರಿಸಲಾಗಿರುವ ಹಾಗೂ ಉಳಿಕೆಯಾಗಿರುವ ಅನುದಾನದಡಿಯಲ್ಲಿ ತಯಾರಿಸಿರುವ ಕ್ರಿಯಾ ಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ 1) :ಜಿನಕೋ:/ಸಿ(2)/ಶಾಶಾ/ಇ-1045621/2026-27, ದಿನಾಂಕ:18.04.2026, 2) :ಜಿನಕೋ:/ಸಿ(2)/ಶಾಶಾ/ಸಿಆರ್/ಇ-1054049/2026-27 ದಿನಾಂಕ:06.05.2026 ಹಾಗೂ 3) :ಜಿನಕೋ:/ಸಿ(2)/ಶಾ.ಶಾ/ಇ-701111/2025-26, ದಿನಾಂಕ:06.05.2026 ರಂದು ಅನುಮೋದನೆಯಾಗಿರುವಂತೆ ಏಕ ಕಂತು ಜೀವವಿಮೆ (Single Endowment Policy) ಸೌಲಭ್ಯ, ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ, ವಿಕಲಚೇತನರಿಗೆ ತ್ರಿಚಕ್ರ ವಾಹನ ಸೌಲಭ್ಯ ಒದಗಿಸಲು (ಸಹಾಯಧನ/ಪ್ರೋತ್ಸಾಹಧನ) ನೀಡಲು ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.** ಆಸಕ್ತರು ಅರ್ಜಿಗಳನ್ನು ಜಿಗಣಿ ಪುರಸಭಾ ಕಛೇರಿಯಲ್ಲಿ ಪಡೆದು ಸಲ್ಲಿಸಬಹುದಾಗಿರುತ್ತದೆ.

ಆಸಕ್ತಿಯುಳ್ಳ ಅರ್ಹರು ಈ ಕಛೇರಿಯ ಕಲ್ಯಾಣ ಶಾಖೆಯಿಂದ ಅರ್ಜಿ ಪಡೆದು **ದಿನಾಂಕ: 30.06.2026 ರ ಸಂಜೆ 5:00ಗಂಟೆಯೊಳಗೆ** ಸಂಬಂಧಿಸಿದ ಮಾಹಿತಿಯನ್ನು ಭರ್ತಿ ಮಾಡಿ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. ಸ್ವೀಕೃತವಾದ ಅರ್ಜಿಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

(ನಿಗಧಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ)

ಜಿಗಣಿ ಪುರಸಭೆಯ 2019-20 ರಿಂದ 2025-26ರವರೆಗೆ ವಿವಿಧ ಯೋಜನೆಯಡಿಯಲ್ಲಿ ಉಳಿಕೆ ಮೊತ್ತ, ಮತ್ತು 2026-2027ನೇ ಸಾಲಿನ ಸ್ವಂತ ನಿಧಿ, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯ ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯಡಿಯಲ್ಲಿ ಶೇ 24.10%, 7.25% ಹಾಗೂ 5% ಯೋಜನೆಯ ಕಲ್ಯಾಣ ಕಾರ್ಯಕ್ರಮಗಳಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ವಿಕಲಚೇತನರಿಗೆ ಸೇರಿದ ಸಾರ್ವಜನಿಕರಿಗೆ ಕಲ್ಯಾಣ ಕಾರ್ಯಕ್ರಮಗಳ ವಿವರ.

ಕ್ರ ಸಂ	ವಿವರ	ಕಾಯ್ದಿರಿಸಿದ ಮೊತ್ತ (ರೂ. ಲಕ್ಷಗಳಲ್ಲಿ)			ಷರಾ
		2019-20 ರಿಂದ 2025-26ರವರೆಗೆ ಉಳಿಕೆ ಮೊತ್ತ	2026-27ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ	2026-27ನೇ ಸಾಲಿನ ಪುರಸಭಾ ನಿಧಿ	
1	ಜಿಗಣಿ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿಗೆ ಸೇರಿದ ಜನರಿಗೆ ಏಕ ಕಂತು ಜೀವವಿಮೆ ಸೌಲಭ್ಯ ಒದಗಿಸಲು (Single Endowment Policy) ಕಾಯ್ದಿರಿಸಿದ ಮೊತ್ತ (ಶೇಕಡ 17.5 ರ ಯೋಜನೆಯಡಿಯಲ್ಲಿ)	6.42	0.64	-	-
2	ಜಿಗಣಿ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರಿಗೆ ಏಕ ಕಂತು ಜೀವವಿಮೆ ಸೌಲಭ್ಯ ಒದಗಿಸಲು (Single Endowment Policy) ಕಾಯ್ದಿರಿಸಿದ ಮೊತ್ತ (ಶೇಕಡ 6.95 ರ ಯೋಜನೆಯಡಿಯಲ್ಲಿ)	2.45	-	4.61	-
3	ಜಿಗಣಿ ಪುರಸಭಾ ವ್ಯಾಪ್ತಿಯ ಹಿಂದುಳಿದ ವರ್ಗಕ್ಕೆ ಸೇರಿದ ಬಡ ಜನರಿಗೆ ಏಕ ಕಂತು ಜೀವವಿಮೆ ಸೌಲಭ್ಯ ಒದಗಿಸಲು (Single Endowment Policy) ಕಾಯ್ದಿರಿಸಿದ ಮೊತ್ತ (ಶೇಕಡ 7.25 ರ ಯೋಜನೆಯಡಿಯಲ್ಲಿ)	-	0.21	6.40	-
4	ಜಿಗಣಿ ಪುರಸಭಾ ವ್ಯಾಪ್ತಿಯ ಅಂಗವಿಕಲ ವಿಕಲಚೇತನರಿಗೆ ಸೇರಿದ ಜನರಿಗೆ ಏಕ ಕಂತು ಜೀವವಿಮೆ ಸೌಲಭ್ಯ ಒದಗಿಸಲು (Single Endowment Policy) ಕಾಯ್ದಿರಿಸಿದ ಮೊತ್ತ (ಶೇಕಡ 5 ರ ಯೋಜನೆಯಡಿಯಲ್ಲಿ)	-	0.30	-	-
5	ಜಿಗಣಿ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರು, ಲೋಡರ್ಸ್, ಹೆಲ್ಪರ್ಸ್, ಚಾಲಕರು ಹಾಗೂ ಅವರ ಅವಲಂಬಿತ ಕುಟುಂಬದವರಿಗೆ ಏಕ ಕಂತು ಜೀವವಿಮೆ ಸೌಲಭ್ಯ ಒದಗಿಸಲು (Single Endowment Policy) ಕಾಯ್ದಿರಿಸಿದ ಮೊತ್ತ (ಶೇಕಡ 20 ರ ಯೋಜನೆಯಡಿಯಲ್ಲಿ)	-	0.32	7.12 +2.88 10.00	-
6	ಜಿಗಣಿ ಪುರಸಭೆ ವ್ಯಾಪ್ತಿಯ ಪರಿಶಿಷ್ಟ ಜಾತಿಗೆ ಸೇರಿದ ಬಿ.ಇ, ಎಂ.ಬಿ.ಬಿ.ಎಸ್ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ ನೀಡಲು ಕಾಯ್ದಿರಿಸಿದ ಮೊತ್ತ.	-	-	11.39	-
7	ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿಕಲಚೇತನರಿಗೆ ತ್ರಿಚಕ್ರ ವಾಹನ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮ.	-	-	12.00	-
	ಒಟ್ಟು	8.87	1.47	44.40	-

-:ಸಾಮಾನ್ಯ ನಿಬಂಧನೆಗಳು:-

1. ನಿಗಧಿತ ಅವಧಿಯ ನಂತರ ತಡವಾಗಿ ಬಂದ ಅರ್ಜಿ, ದೃಢೀಕರಣ ಅಥವಾ ಸಹಿ ಇಲ್ಲದ ಅರ್ಜಿ, ಅಪೂರ್ಣ ದಾಖಲೆಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
2. ಗೆಜೆಟ್ ಅಧಿಕಾರಿಗಳಿಂದ/ನೋಟರಿ/ಸ್ವಯಂ ದೃಢೀಕೃತ ದಾಖಲೆ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
3. ಅವಶ್ಯವಿದ್ದಲ್ಲಿ ಮೂಲ ಪ್ರತಿಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಬೇಕಾಗುತ್ತದೆ.
4. ನಗರಾಭಿವೃದ್ಧಿ ಇಲಾಖೆಯಲ್ಲಿ ಅನುಮೋದನೆ ಹೊಂದಿರುವ ಯೋಜನೆಯಡಿ ಈಗಾಗಲೇ ಯಾವುದೇ ಸೌಲಭ್ಯ ಪಡೆದಿರುವವರ ಅರ್ಜಿ ಸಲ್ಲಿಸತಕ್ಕದ್ದಲ್ಲ/ ಹಾಜರುಪಡಿಸತಕ್ಕದ್ದಲ್ಲ/ ವಜಾಪಡಿಸಲಾಗುವುದು.
5. ಫಲಾನುಭವಿಗಳ ಆಯ್ಕೆಯಲ್ಲಿ ಫಲಾನುಭವಿಗಳ ಸಂಖ್ಯೆ ನಿಗಧಿಗಿಂತ ಹೆಚ್ಚಾದಾಗ ಕೌನ್ಸಿಲ್ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
6. **ಅರ್ಜಿಯೊಡನೆ ಸಲ್ಲಿಸಬೇಕಾದ ಸಾಮಾನ್ಯ ದಾಖಲೆಗಳು :** A) ನಿಗಧಿತ ಅರ್ಜಿ ಫಾರಂನಲ್ಲಿ ಸಹಿ ಮಾಡಿ ಅವಶ್ಯಕ ದೃಢೀಕರಣದೊಂದಿಗೆ ಭರ್ತಿ ಮಾಡತಕ್ಕದ್ದುಇತ್ತೀಚಿನ B) 02 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು. C) ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸುವುದು. D) ಜಿಗಣಿ ಪುರಸಭಾ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಬಗ್ಗೆ ವಾಸ ದೃಢೀಕರಣ ಪತ್ರ ಅಥವಾ ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ, ಆಧಾರ್ ಕಾರ್ಡ್‌ನ್ನು ಸಲ್ಲಿಸುವುದು. E) ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಡ್ಡಾಯವಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ ಸಲ್ಲಿಸುವುದು. F) ನಾಮಿನಿಯನ್ನು ಸೂಚಿಸುವ ವ್ಯಕ್ತಿಯ ಆಧಾರ್, ಪಾನ ಹಾಗೂ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಕೆಲಸದ ವೇಳೆಯಲ್ಲಿ ಕಲ್ಯಾಣ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/-
ಅಧ್ಯಕ್ಷರು, ಪುರಸಭೆ, ಜಿಗಣಿ.

ವಾಸಾಸಂಇ/ಬಆಶ/ಕೆಎ/952/2026-27

ಸಹಿ/-
ಮುಖ್ಯಾಧಿಕಾರಿಗಳು, ಪುರಸಭೆ, ಜಿಗಣಿ.

ಸಾರ್ವಜನಿಕರ 169 ಕೋಟಿ ರೂ. ಉಳಿತಾಯ ಸಾಧ್ಯತೆ

• **ಬೆಂಗಳೂರು:** ಬೆಂಗಳೂರಿನ ಉಪನಗರ ರೈಲು ಮತ್ತು ನಮ್ಮ ಮೆಟ್ರೊ ಯೋಜನೆಗಳ ನಡುವಿನ ಸಮನ್ವಯದಿಂದಾಗಿ ಸುಮಾರು 169 ಕೋಟಿ ರೂ. ಉಳಿತಾಯವಾಗುವ ಸಾಧ್ಯತೆ ಇದೆ. ನಗರದ ಸಂಚಾರ ದಟ್ಟಣೆಗೆ ಇತಿಶ್ರೀ ಹಾಡಲು ಒಂದೇ ಕಾರಿಡಾರ್‌ನಲ್ಲಿ ಸಾಗುವ ನಮ್ಮ ಮೆಟ್ರೊ ಮತ್ತು ಬೆಂಗಳೂರು ಉಪನಗರ ರೈಲು ಯೋಜನೆಗಳ ಜಂಟಿ ವಿನ್ಯಾಸದ ಪರಿಣಾಮವಾಗಿ ಬರೋಬ್ಬರಿ 169ಕೋಟಿ ರೂ. ಸಾರ್ವಜನಿಕ ಹಣ ಉಳಿತಾಯವಾಗಲಿದೆ.

ಕೆ-ರೈಡ್ ಜಾರಿಗೊಳಿಸುತ್ತಿರುವ ಉಪನಗರ ರೈಲು ಯೋಜನೆಯ ಕನಕ ಕಾರಿಡಾರ್ ಮತ್ತು ಬಿಎಂಆರ್ ಸಿಎಲ್ ಹಮ್ಮಿಕೊಂಡಿರುವ ನಮ್ಮ ಮೆಟ್ರೊದ ಹಂತ-3ರ ಯೋಜನೆಯು ಜೆ.ಪಿ. ನಗರದ ಪ್ರಮುಖ ಭಾಗದಲ್ಲಿ ಒಂದೇ ಮಾರ್ಗದಲ್ಲಿ ಸಾಗಲಿದೆ.

ಸಾಮಾನ್ಯವಾಗಿ ಇಂತಹ ಸಂದರ್ಭಗಳಲ್ಲಿ ಎರಡು ಪ್ರತ್ಯೇಕ ಹಳಿ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸುವುದರಿಂದ ನೂರಾರು ಕೋಟಿ ವೆಚ್ಚವಾಗುವುದಲ್ಲದೆ, ಭೂ-ಸ್ವಾಧೀನ ಪ್ರಕ್ರಿಯೆಯೂ ಜಟಿಲವಾಗುತ್ತಿತ್ತು. ಆದರೆ, ಉಭಯ ನಿಗಮಗಳ ಅಧಿಕಾರಿಗಳು ದೂರದೃಷ್ಟಿಯ ನಿರ್ಧಾರ ಕೈಗೊಂಡು ಒಂದೇ ಕಾರಿಡಾರ್‌ನಲ್ಲಿ ಎರಡೂ ವ್ಯವಸ್ಥೆಗಳು ಕಾರ್ಯನಿರ್ವಹಿಸುವಂತೆ ಸಮನ್ವಯ ವಿನ್ಯಾಸ ರೂಪಿಸಿದ್ದಾರೆ.



» ಉಪನಗರ ರೈಲ್ವೆ- ನಮ್ಮ ಮೆಟ್ರೊ ಯೋಜನೆಗಳ ಸಮನ್ವಯ

ತಜ್ಞರ ಶ್ಲಾಘನೆ

ನಗರಾಭಿವೃದ್ಧಿ ಮತ್ತು ಸಾರಿಗೆ ತಜ್ಞರು ಈ ಮಾದರಿಯನ್ನು ಸಾರ್ವಜನಿಕ ಸಾರಿಗೆ ಇತಿಹಾಸದಲ್ಲೇ ಅತ್ಯಂತ ಸ್ಮಾರ್ಟ್ ನಿರ್ಧಾರ ಎಂದು ಶ್ಲಾಘಿಸಿದ್ದಾರೆ. ವಿವಿಧ ಸರ್ಕಾರಿ ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದಾಗಿ ಹಣ ಪೋಲಾಗುವ ಇಂದಿನ ದಿನಗಳಲ್ಲಿ, ಮೆಟ್ರೊ ಮತ್ತು ಕೆ-ರೈಡ್ ಜಂಟಿಯಾಗಿ ಕಾರ್ಯನಿರ್ವಹಿಸಿ ಇಷ್ಟೊಂದು ದೊಡ್ಡ ಮೊತ್ತವನ್ನು ಉಳಿಸಿರುವುದು ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಒಂದೇ ಮಾರ್ಗದಲ್ಲಿ ಎರಡು ರೈಲು ಸಂಚಾರ

ಸಮನ್ವಯದ ಯೋಜನೆಯಿಂದ ಪ್ರತ್ಯೇಕವಾಗಿ ನಿರ್ಮಿಸಬೇಕಿದ್ದ ಪಿಲ್ಲರ್‌ಗಳು, ವಯಡಕ್ಟ್‌ಗಳು ಮತ್ತು ಸಿವಿಲ್ ಕಾಮಗಾರಿಗಳ ವೆಚ್ಚ ಭಾರಿ ಪ್ರಮಾಣದಲ್ಲಿ ಕಡಿತಗೊಳ್ಳಲಿದೆ. ಒಂದೇ ಮಾರ್ಗದಲ್ಲಿ ಎರಡು ರೈಲುಗಳು ಸಂಚರಿಸುವುದರಿಂದ ಹೆಚ್ಚುವರಿ ಭೂ-ಸ್ವಾಧೀನ ಪ್ರಕ್ರಿಯೆ ತಪ್ಪಿದಂತಾಗಿದೆ. ಇದರಿಂದ ನೂರಾರು ಕೋಟಿ ರೂ. ಮೌಲ್ಯದ ಖಾಸಗಿ ಹಾಗೂ ಸರ್ಕಾರಿ ಜಾಗ ಉಳಿಯಲಿದೆ. ಎರಡು ವಿಭಿನ್ನ ಹಂತಗಳಲ್ಲಿ ನಡೆಯಬೇಕಿದ್ದ ರಸ್ತೆ ಅಗೆಯುವಿಕೆ ಮತ್ತು ನಿರ್ಮಾಣ ಕಾರ್ಯಗಳು ಈಗ ಒಂದೇ ಬಾರಿಗೆ ಸುಲಭವಾಗಿ ಮುಕ್ತಾಯಗೊಳ್ಳಲಿವೆ.

ಕುತೂಹಲ



ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಮೊದಲು ಡಿ.ಕೆ.ಶಿವಕುಮಾರ್ , ಮಾಜಿ ಸಿಎಂ ಸಿದ್ದರಾಮಯ್ಯ ಅವರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರನ್ನು ಬರಮಾಡಿಕೊಂಡರು. ಈ ವೇಳೆ ಶಿವಕುಮಾರ್ ಅವರು ಧರಿಸಿದ್ದ ಶಾಲನ್ನು ಕುತೂಹಲದಿಂದ ರಾಹುಲ್ ವೀಕ್ಷಿಸಿದರು.

ಕಿರುಸುದ್ದಿ

ಬ್ರಾಹ್ಮಣರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲಿ

• **ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಅಭಿನಂದನೆ ಸಲ್ಲಿಸಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಚಿವ ಸಂಪುಟದಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವಂತೆ ಆಗ್ರಹಿಸಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್ ಪತ್ರ ಬರೆದು ಶುಭಕೋರಿದ್ದು, ಸುಮಾರು 40 ವರ್ಷಗಳ ಅವಿರತ ರಾಜಕೀಯ ಪರಿಶ್ರಮ ಹಾಗೂ ಸುದೀರ್ಘ ಅನುಭವದ ಬಂಢಾರದ ಹಿನ್ನೆಲೆಯಲ್ಲಿ ದೇವರು ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಕರುಣಿಸಿದ್ದಾನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಪ್ರೀತಿ, ಕರುಣೆ ಹಾಗೂ ಅತ್ಯಂತ ನ್ಯಾಯಯುತವಾಗಿ ಆಡಳಿತ ನಡೆಸಿ ಎಂದು ಹಾರೈಸಿದ್ದಾರೆ. ಮುಂಬರುವ ಸಚಿವ ಸಂಪುಟ ವಿಸ್ತರಣೆಯ ಬ್ರಾಹ್ಮಣ ಸಮುದಾಯಕ್ಕೂ ಸೂಕ್ತ ಪ್ರಾತಿನಿಧ್ಯ ಮತ್ತು ಅವಕಾಶವನ್ನು ನೀಡಬೇಕೆಂದು ಮನವಿ ಮಾಡಿದ್ದಾರೆ.

ರೈತರ ಸಮಸ್ಯೆಗೆ ಸಿಎಂ ಪರಿಹಾರ ನೀಡಲಿ

• **ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ರೈತರ ಸಮಸ್ಯೆಗಳಿಗೆ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ. ಈ ಬಗ್ಗೆ ಪ್ರಕಟಣೆ ಹೊರಡಿಸಿರುವ ಅವರು, ಮೇಕೆದಾಟು ಬೆಂಗಳೂರು ಸುತ್ತಮುತ್ತಲ ಐದು ಜಿಲ್ಲೆಗಳ ಯೋಜನೆ ಕಾರ್ಯಗತವಾಗಬೇಕು. ರೈತರಿಗೆ ನೀಡುತ್ತಿದ್ದ ಪ್ರೋತ್ಸಾಹಧನ ಕಿಸಾನ್ ಸಮ್ಮಾನ್ ಯೋಜನೆ ಜಾರಿಗೊಳಿಸಬೇಕು. 40 ಲಕ್ಷ ಕೃಷಿ ಪಂಪ್ ಸೆಟ್ ರೈತರಿಗೆ ಮಾರಕವಾಗುವ ವಿದ್ಯುತ್ ಖಾಸಗೀಕರಣ ನಿಲ್ಲಬೇಕು. ಚುನಾವಣೆಯಲ್ಲಿ ಭರವಸೆ ನೀಡಿದಂತೆ ಭೂ-ಸುಧಾರಣಾ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದಾಗಬೇಕೆಂದರು.

ತತ್ವಪದ ವಿಮರ್ಶಾ ಲೇಖನ ಸ್ಪರ್ಧೆ ಜೂ.10ಕ್ಕೆ ವಿಸ್ತರಣೆ

• **ಬೆಂಗಳೂರು:** ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಆಯೋಜಿಸಿರುವ ರಾಜ್ಯಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಯ ಅವಧಿಯನ್ನು ಜೂ.10ರವರೆಗೆ ವಿಸ್ತರಿಸಲಾಗಿದೆ. ಈ ಹಿಂದೆ ತಿಳಿಸಿದಂತೆ ಜೂ.5ರವರೆಗೆ ಅವಧಿ ನಿಗದಿಪಡಿಸಲಾಗಿತ್ತು. ಆಸಕ್ತರ ಕೋರಿಕೆ ಮೇರೆಗೆ ಜೂ.10ರವರೆಗೆ ವಿಸ್ತರಿಸಲಾಗಿದೆ. ಸ್ಪರ್ಧೆಯಲ್ಲಿ 18 ರಿಂದ 40 ವರ್ಷ ವಯೋಮಿತಿಯುಳ್ಳವರು ಭಾಗವಹಿಸಬಹುದು. ಸ್ಪರ್ಧೆಗೆ ಅಧ್ಯಯನ ಕೇಂದ್ರ ನೀಡಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಆಯ್ಕೆ ಮಾಡಿ ವಿಮರ್ಶಾ ಲೇಖನವನ್ನು ರಚಿಸಿ ಕಳುಹಿಸಬೇಕು. ಪ್ರಥಮ ಬಹುಮಾನವಾಗಿ 5 ಸಾವಿರ, ದ್ವಿತೀಯ ಬಹುಮಾನವಾಗಿ 4 ಸಾವಿರ ಮತ್ತು ತೃತೀಯ ಬಹುಮಾನ 3 ಸಾವಿರ ರೂ. ನಗದು ಹಾಗೂ 22 ಲೇಖನಗಳಿಗೆ ಸಮಾಧಾನಕರ ಬಹುಮಾನ ನೀಡಲಾಗುವುದು. ಸ್ಪರ್ಧಿಗಳು ಅರ್ಜಿ ಮತ್ತು ವಿಮರ್ಶಾ ಲೇಖನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-56 ವಿಳಾಸಕ್ಕೆ ಕಳುಹಿಸಿಕೊಡಬೇಕು. ಅರ್ಜಿ ಮತ್ತು ಲೇಖನವನ್ನು ಅಂಚೆ/ ಕೊರಿಯರ್/ ಇ-ಮೇಲ್ ಅಥವಾ ಖುದ್ದಾಗಿ ಸಲ್ಲಿಸಬಹುದು. ಅರ್ಜಿ ನಮೂನೆಯನ್ನು ವೆಬ್‌ಸೈಟ್: https://kanakadasaresearchcenter.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಂತರ ಭರ್ತಿ ಮಾಡಿದ ಅರ್ಜಿಗಳನ್ನು ಇಮೇಲ್ : kanakaresearchcentre@gmail.com ಗೆ ಕಳುಹಿಸಬೇಕು.

ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷಿ ಯೋಜನೆ | ನಗರದ ವಿವಿಧ ಯೋಜನೆಗಳಿಗೆ ಚಾಲನೆ

ಬ್ರ್ಯಾಂಡ್ ಬೆಂಗಳೂರಿಗೆ ವೇಗ ಸಾಧ್ಯತೆ

• **ಬೆಂಗಳೂರು:** ಬೆಂಗಳೂರಿನ ಉಸ್ತುವಾರಿ ಸಚಿವರಾಗಿದ್ದ ಡಿ.ಕೆ.ಶಿವಕುಮಾರ್ ಇದೀಗ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಆ ಹಿನ್ನೆಲೆಯಲ್ಲಿ ಅವರದ್ದೆ ಮಹತ್ವಕಾಂಕ್ಷಿ ಯೋಜನೆಯಾದ ಬ್ರ್ಯಾಂಡ್ ಬೆಂಗಳೂರು ಸೇರಿದಂತೆ ಅನೇಕ ಬೃಹತ್ ಯೋಜನೆಗಳಿಗೆ ವೇಗ ದೊರೆಯುವ ಸಾಧ್ಯತೆಯ ಬಗ್ಗೆ ಚರ್ಚೆ ಆರಂಭವಾಗಿದೆ. ಬೆಂಗಳೂರಿಗೆ ಸರ್ವ ರೀತಿಯಲ್ಲೂ ಮೂಲ ಸೌಕರ್ಯ ಒದಗಿಸುವ ಹಾಗೂ ನಗರವನ್ನು ವಿವಿಧ ಹಂತದಲ್ಲಿ ಸ್ಮಾರ್ಟ್ ಆಗಿ ಅಭಿವೃದ್ಧಿ ಪಡಿಸುವ ಬ್ರ್ಯಾಂಡ್ ಬೆಂಗಳೂರು ಡಿ.ಕೆ.ಶಿವಕುಮಾರ್ ಅವರ ಮಹತ್ವದ ಕಲ್ಪನೆಯಾಗಿತ್ತು. ಪ್ರಸ್ತುತ ಬ್ರ್ಯಾಂಡ್ ಬೆಂಗಳೂರಿನಡಿ ಯೋಜನೆಗಳು ಕುಂಟುತ್ತಾ ಸಾಗುತ್ತಿದ್ದವು. ಇದೀಗ ಶಿವಕುಮಾರ್ ಸ್ವತಃ ಮುಖ್ಯಮಂತ್ರಿಯಾಗಿರುವುದರಿಂದ ಬ್ರ್ಯಾಂಡ್ ಬೆಂಗಳೂರು ಸೇರಿದಂತೆ ನಗರದ ಪ್ರಮುಖ ಯೋಜನೆಗಳಿಗೆ ವೇಗ ದೊರೆಯ ಬಹುದೆಂದು ಆಶಾಭಾವ ವ್ಯಕ್ತವಾಗುತ್ತಿದೆ.

ಬೃಹತ್ ಯೋಜನೆಗಳಿಗೆ ವೇಗ ಸಿಗುವ ನಿರೀಕ್ಷೆ: ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮ ಸಂಪರ್ಕಿಸುವ ಸುರಂಗ ರಸ್ತೆಗಳು ಹಾಗೂ 126 ಕಿ.ಮೀ ಉದ್ದದ ಎತ್ತರದ ಕಾರಿಡಾರ್‌ಗಳು, ಹೆಬ್ಬಾಳ ಜಂಕ್ಷನ್ ಸುರಂಗ ಮಾರ್ಗ ಮತ್ತು ನನೆಗುದಿಗೆ ಬಿದ್ದಿರುವ ಪೆರಿಫೆರಲ್ ರಿಂಗ್ ರಸ್ತೆ, ಬಿಡದಿಯ ಸಮಗ್ರ ಟೌನ್ ಶಿಪ್ ಯೋಜನೆ ಮತ್ತು ದಕ್ಷಿಣ ಬೆಂಗಳೂರಿಗೆ ಎರಡನೇ ವಿಮಾನ ನಿಲ್ದಾಣದ ಸ್ಥಾಪನೆಗೆ ವೇಗ ಸಿಗುವ ಸಾಧ್ಯತೆ ಇದೆ.

ಹೊರವರ್ತುಲ ರಸ್ತೆ ಮತ್ತು ಪ್ರಮುಖ ಮೆಟ್ರೋ ಕಾಮಗಾರಿಗೆ ಬೇಕಾಗುವ ಬೆಂಬಲ ನೀಡಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಿಎಂ ಯಾವ ನಿರ್ಧಾರ ಕೂಗೊಳ್ಳಲಿದ್ದಾರೆ ಎಂಬುದು ಪ್ರಮುಖ ವಿಷಯವಾಗಿದೆ.



- » ಪ್ರತಿ ಮಳೆಗೆ ಜಲಾವೃತವಾಗುವ ಏರಿಯಾಗಳಿಗೆ ಮುಕ್ತಿ
- » ರಸ್ತೆ ಗುಂಡಿಗಳ ಮುಚ್ಚುವಿಕೆ ಮತ್ತು ಸಮರ್ಪಕ ಫುಟ್ ಪಾತ್ ನಿರ್ಮಾಣ
- » ರಾಜಕಾಲುವೆ ಹಾಗೂ ಒಳಚರಂಡಿಗಳ ಹೂಳೆತ್ತುವ ಶಾಶ್ವತ ಕಾಮಗಾರಿ
- » ವೈಜ್ಞಾನಿಕ ಕಸ ವಿಲೇವಾರಿ ಮತ್ತು ಕೆರೆಗಳ ಸಂರಕ್ಷಣೆ
- » ಐದು ಪಾಲಿಕೆಗಳಿಗೆ ಚುನಾವಣೆ ನಡೆಸಲು ಕ್ರಮ

ನೆಮ್ಮದಿ ಜೀವನಕ್ಕಾಗಿ ಸೌಲಭ್ಯ ದೊರಕಲಿ

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿರುವುದರಿಂದ ಜೊತೆಗೆ ಬೆಂಗಳೂರು ನಗರಾಭಿವೃದ್ಧಿ ಇಲಾಖೆಯನ್ನು ಅವರೇ ಇಟ್ಟುಕೊಳ್ಳುವ ಸಾಧ್ಯತೆ ಇದ್ದು ಬೆಂಗಳೂರಿನ ಬೃಹತ್ ಯೋಜನೆಗಳಿಗೆ ರಾಜಕೀಯ ಇಚ್ಛಾಶಕ್ತಿ ಹಾಗೂ ಆಡಳಿತಾತ್ಮಕ ವೇಗ ಸಿಗಲಿದೆ. ಬ್ರ್ಯಾಂಡ್ ಬೆಂಗಳೂರು ಕೇವಲ ಕಾಗದದ ಮೇಲಿನ ಕೋಟಿಗಳ ಯೋಜನೆಯಾಗದೆ, ಸಾಮಾನ್ಯ ನಾಗರಿಕನಿಗೆ ನೆಮ್ಮದಿಯ ಪ್ರಯಾಣ ಸೇರಿದಂತೆ ನಗರದ ಸಮಗ್ರ ಭಿವೃದ್ಧಿಯಾಗಿ ಈ ಮೂಲ ಸಮಸ್ಯೆಗಳಿಗೆ ಉತ್ತರ ಸಿಗಲಿದೆಯಾ ಎಂಬ ಚರ್ಚೆ ನಗರದ ಸಾರ್ವಜನಿಕರಲ್ಲಿ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಚರ್ಚೆ ನಡೆಯುತ್ತಿದೆ.

ಬೆಂಗಳೂರಿನ ಸಮಸ್ಯೆಗಳೇ ಸವಾಲು

ಒಂದೆಡೆ ಬೃಹತ್ ಯೋಜನೆಗಳ ಸವಾಲಿದ್ದರೆ, ಮತ್ತೊಂದೆಡೆ ನಗರದ ವಾಸ್ತವ ಸ್ಥಿತಿ ಮಳೆಗಾಲದಲ್ಲಿ ಕಣ್ಣಿಗೆ ಕಟ್ಟುವಂತಿದೆ. ಅಲ್ಲದೆ ಟ್ರಾಫಿಕ್ ಜಾಮ್‌ಗೆ ಶಾಶ್ವತ ಪರಿಹಾರವಿಲ್ಲದೆ ನಗರ ಒತ್ತಡದಲ್ಲಿ ಸಿಲುಕಿದೆ. ಮುಂಗಾರು ಪೂರ್ವ ಮಳೆಗೆ ಬೆಂಗಳೂರು ಸಮಸ್ಯೆ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿದೆ. ಎಲ್ಲಾ ಅಂಡರ್ ಪಾಸ್‌ಗಳಲ್ಲಿ, ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ಸಾರ್ವಜನಿಕರು ಪರದಾಡುವ ಸ್ಥಿತಿ ಎದುರಾಗುತ್ತಿದೆ. ಇನ್ನೂ ಕೆಲವೆ ದಿನದಲ್ಲಿ ಮಳೆಗಾಲ ಎದುರಾಗಲಿದ್ದು, ಪ್ರಮುಖ ಐಟಿ ಸಿಟಿಯಾದ ಬೆಂಗಳೂರಿನ ಸಮಸ್ಯೆಯನ್ನು ಎದುರಿಸುವ ಸವಾಲು ನೂತನ ಸಿಎಂಗೆ ಇದೆ. ಬೆಂಗಳೂರಿಗರ ಮುಂದಿರುವ ಯಕ್ಷಪ್ರಶ್ನೆ ಎಂದರೆ ಸುರಂಗ ರಸ್ತೆಗಳಿಗಿಂತ ಮುಂಚೆ ರಸ್ತೆ ಗುಂಡಿಗಳಿಗೆ ಮುಕ್ತಿ ಸಿಗುವುದೇ.

ಅಬ್ದುಲ್ ಕಲಾಂ ಅವರ ರಾಷ್ಟ್ರೀಯ ಸೇವೆ ಮಾದರಿ



• **ಬೆಂಗಳೂರು:** ಜನರ ರಾಷ್ಟ್ರಪತಿ ಎಂದು ಖ್ಯಾತರಾಗಿದ್ದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಸರಳತೆ, ವೈಜ್ಞಾನಿಕ ಸಾಧನೆ ಹಾಗೂ ರಾಷ್ಟ್ರಸೇವೆಯ ಮೂಲಕ ಇಂದಿಗೂ ಯುವಜನತೆಗೆ ಸ್ಫೂರ್ತಿಯಾಗಿದ್ದಾರೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ತಿಳಿಸಿದರು.

ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಆತ್ಮಚರಿತ್ರೆ ವಿಂಗ್ಸ್ ಆಫ್ ಫೈಯರ್ ಕೃತಿಯನ್ನು, ಕೆ. ಜಯಪ್ರಕಾಶ್ ರಾವ್ ಅವರು ಕನ್ನಡಕ್ಕೆ ಅನುವಾದಿಸಿರುವ ಅಗ್ನಿಯ ರೆಕ್ಕೆಗಳು ಪುಸ್ತಕವನ್ನು ಲೋಕಭವನದಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಅಬ್ದುಲ್ ಕಲಾಂ ಅವರಂತಹ ಮಹಾನ್ ವ್ಯಕ್ತಿಯ ಜೀವನಾಧಾರಿತ ಕೃತಿಯನ್ನು ಕನ್ನಡದಲ್ಲಿ ಪ್ರಕಟಿಸುವುದು, ರಾಜ್ಯದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ನೀಡಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಾಸನ್ ಪಬ್ಲಿಕೇಷನ್ಸ್‌ನ ರಘುನಾಥ್ ಹಾಗೂ ಶ್ರೀನಿವಾಸ್, ಎಚ್‌ಎಎಲ್‌ನ ಮಾಜಿ ಮುಖ್ಯ ವ್ಯವಸ್ಥಾಪಕ ಕೃಷ್ಣರಾವ್, ಕೃತಿಯ ಅನುವಾದಕ ಕೆ. ಜಯಪ್ರಕಾಶ್ ರಾವ್ ಸೇರಿದಂತೆ ಇತರರಿದ್ದರು.

ಭೈರತಿ ಸುರೇಶ್ ಸಂತಸ

» ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ



• **ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರದಲ್ಲಿ ಸಚಿವನಾಗುತ್ತಿರುವುದಕ್ಕೆ ಅತೀವ ಸಂತಸವಾ ಗುತ್ತಿದೆ ಎಂದು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಭೈರತಿ ಸುರೇಶ್ ಹೇಳಿದರು.

ಪ್ರಮಾಣವಚನ ಸ್ವೀಕರಿಸಿದ ನಂತರ ಪ್ರತಿಕ್ರಿಯೆ ನೀಡಿರುವ ಅವರು, ಎಐಸಿಸಿ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್, ಮಾಜಿ ಸಿಎಂ ಸಿದ್ದರಾಮಯ್ಯ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಎಲ್ಲಾ ಇತರ ನಾಯಕರು ನನ್ನ ಮೇಲೆ ನಂಬಿಕೆ, ವಿಶ್ವಾಸವಿಟ್ಟು ಸಚಿವನನ್ನಾಗಿ ಆಯ್ಕೆ ಮಾಡಿರುವುದಕ್ಕೆ ಧನ್ಯವಾದವನ್ನು ತಿಳಿಸುತ್ತಿದ್ದೇನೆಂದರು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಖುದ್ದು ದೂರವಾಣಿ ಕರೆ ಮಾಡಿ ಮಂತ್ರಿಯಾಗಿ ಆಯ್ಕೆ ಮಾಡಲಾಗಿದ್ದು, ಪ್ರಮಾಣ ವಚನ ಸ್ವೀಕರಿಸುವಂತೆ ತಿಳಿಸಿದರು. ಈ ಜವಾಬ್ದಾರಿಯನ್ನು ಸಮರ್ಥ ವಾಗಿ ನಿಭಾಯಿಸುತ್ತೇನೆ. ಈ ಹೊಣೆಗಾರಿಕೆ ಮೂಲಕ ರಾಜ್ಯದ ಜನರ ಸೇವೆಯನ್ನು ಮಾಡುತ್ತೇನೆ. ವಿಶೇಷವಾಗಿ ನನ್ನನ್ನು ಎರಡು ಬಾರಿ ವಿಧಾನಸಭೆಗೆ ಆಯ್ಕೆ ಮಾಡಿರುವ ಹೆಬ್ಬಾಳ ಕ್ಷೇತ್ರದ ಜನತೆಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ ಎಂದು ಹೇಳಿದರು.

ಎನ್‌ಬಿಸಿ ಉಲ್ಲಂಘನೆ: ನೋಟಿಸ್

• **ಬೆಂಗಳೂರು:** ರಾಷ್ಟ್ರೀಯ ಕಟ್ಟಡ ಸಂಹಿತೆ (ಎನ್‌ಬಿಸಿ) ನಿಯಮ ಉಲ್ಲಂಘಿಸಿರುವ ನಿರ್ಮಿಸಿರುವ ಕಾಂಪೌಂಡ್ ತೆರವಿಗೆ ನೋಟಿಸ್ ನೀಡಬೇಕೆಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ವಿಭಾಗದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ರಾಷ್ಟ್ರೀಯ ಕಟ್ಟಡ ಸಂಹಿತೆ ನಿಯಮಗಳ ಪ್ರಕಾರ ಅನುಮತಿಸಲಾದ ಎತ್ತರಕ್ಕಿಂತ ಹೆಚ್ಚಿನ ಎತ್ತರದಲ್ಲಿ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಿರುವ ವಸತಿ ಹಾಗೂ ವಾಣಿಜ್ಯ ಕಟ್ಟಡಗಳನ್ನು ಗುರುತಿಸಿ ನೋಟಿಸ್ ಜಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕರ ಜೀವ ಮತ್ತು ಆಸ್ತಿಗೆ ಅಪಾಯ ಉಂಟುಮಾಡುವ ಶಿಥಿಲಾವಸ್ಥೆಯ ಹಾಗೂ ಅಪಾಯಕಾರಿ ಕಟ್ಟಡಗಳನ್ನು ಗುರುತಿಸಿ ಅಗತ್ಯಕ್ರಮವನ್ನು ಕೈಗೊಂಡು ಅವುಗಳನ್ನು ತೆರವುಗೊಳಿಸಿ. ಈ ಸಂಬಂಧ ಕೈಗೊಂಡ ಕ್ರಮಗಳ ಕುರಿತು ವಾರದ ಪ್ರಗತಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಿದರು. ಸಿಎಂಐಡಿಪಿ ಮತ್ತು ಎಸ್‌ಎಸ್‌ಐಪಿ ಯೋಜನೆಗಳಡಿ ಕೈಗೊಂಡಿರುವ ಸಮಗ್ರ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪೈಕಿ ಸಿವಿಲ್ ಕಾಮಗಾರಿ ಪೂರ್ಣಗೊಂಡಿರುವ ಪ್ಯಾಕೇಜುಗಳಲ್ಲಿನ ರಸ್ತೆಗಳನ್ನು ಜೂ.9ರ ಒಳಗೆ ಡಾಂಬರೀಕರಣ ಮಾಡುವಂತೆ ಹಾಗೂ ಇನ್ನುಳಿದ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು ನಿಗದಿತ ಗಡುವಿನೊಳಗೆ ಪೂರ್ಣಗೊಳಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಿದರು. ಮಳೆಗಾಲದಲ್ಲಿ ನೀರು ನಿಲುಗಡೆ ಸಮಸ್ಯೆ ಉಂಟಾಗುತ್ತಿರುವ ಪ್ರದೇಶಗಳನ್ನು ಸಂಚಾರ ಪೊಲೀಸರು ಗುರುತಿಸಿದ್ದು, ಅಂತಹ ಎಲ್ಲಾ ಚೋಕ್ ಪಾಯಿಂಟ್‌ಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು ಆದ್ಯತೆ ಮೇರೆಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು. ವಿವಿಧ ನಾಗರಿಕ ಸೇವಾ ಪೂರೈಕೆದಾರ ಸಂಸ್ಥೆಗಳು ರಸ್ತೆ ಕಟ್ ಮಾಡಿರುವ ಸ್ಥಳಗಳನ್ನು ಪರಿಶೀಲಿಸಿ, ಅಗತ್ಯವಿರುವ ಕಡೆ ರಸ್ತೆ ಪುನಃ ಸ್ಥಾಪನೆ ಕಾಮಗಾರಿಗಳನ್ನು ನಗರ ಪಾಲಿಕೆಯಿಂದ ಕೈಗೊಳ್ಳುವಂತೆ ಸೂಚಿಸಿದರು.



ಸಭೆಯ ಇತರೆ ಸೂಚನೆ

- » ರಸ್ತೆಗುಂಡಿ ಮುಚ್ಚುವ ಕಾಮಗಾರಿಗೆ ಕಾರ್ಯಯೋಜನೆ ರೂಪಿಸಿ
- » ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಲಯಕ್ಕೆ ಒಂದರಂತೆ 2 ವಾರ್ಡ್‌ಗಳಲ್ಲಿ ಸಮಗ್ರ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಕ್ರಿಯಾ ಯೋಜನೆ ರೂಪಿಸಿ
- » ಮಳೆಗಾಲದ ಪೂರ್ವಸಿದ್ಧತೆ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಹಿರಿಯ ಅಧಿಕಾರಿಗಳು ನಿರಂತರವಾಗಿ ಮೇಲ್ವಿಚಾರಣೆ ಮಾಡಿ
- » ಸುರಕ್ಷಾ-75 ಯೋಜನೆಯಲ್ಲಿ ಪ್ರಸ್ತಾಪಿತ ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಳ ವಿನ್ಯಾಸಗಳನ್ನು ಶೀಘ್ರದಲ್ಲೇ ಅಂತಿಮಗೊಳಿಸಿ, ಕಾಮಗಾರಿಗಳ ಆರಂಭಿಸಬೇಕು.

ವಿವಿಧ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ

• **ಯಲಹಂಕ:** ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಅವರು, ಹೆಸರಘಟ್ಟ ಹೋಬಳಿಯ ವಿವಿಧ ಗ್ರಾಮಗಳಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಸಲ್ಲಿಸಿದರು.

ಶಿವಕೋಟೆ ಗ್ರಾಮ - ರಸ್ತೆ ಮತ್ತು ಚರಂಡಿ ಕಾಮಗಾರಿ, ಐವರಕಂಡಪುರ ಗ್ರಾಮ -ರಸ್ತೆ ಮತ್ತು ಚರಂಡಿ ಕಾಮಗಾರಿ, ಮತ್ತೂರು ಗ್ರಾಮ - ರಸ್ತೆ ಮತ್ತು ಚರಂಡಿ ಕಾಮಗಾರಿ, ಹಾರೋಹಳ್ಳಿಪಾಳ್ಯ ಗ್ರಾಮ - ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಚಾಲನೆ ನೀಡಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಒಟ್ಟು ಒಂದು ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಈ ಕಾಮಗಾರಿಗಳು ಗ್ರಾಮಗಳ ಮೂಲಭೂತ ಸೌಲಭ್ಯವನ್ನು ಮತ್ತಷ್ಟು ಬಲಪಡಿಸುವುದರ ಜತೆಗೆ ಸಾರ್ವಜನಿಕರ ಸಂಚಾರ ಹಾಗೂ ಸ್ವಚ್ಛತಾ ವ್ಯವಸ್ಥೆಗೆ ಸಹಕಾರಿಯಾಗಲಿವೆ ಎಂದರು.

ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮೂಲಕ ಯಲಹಂಕ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸುವ ಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುತ್ತಿದ್ದೇವೆಂದು ತಿಳಿಸಿದರು.

ಮಳೆಗೆ ಕೆ.ಆರ್. ವೃತ್ತದ ಕೆಳಸೇತುವೆ ಜಲಾವೃತ

ಅಂಡರ್‌ಪಾಸ್ ಸಮಸ್ಯೆಗೆ ಮುಕ್ತಿ

• **ಬೆಂಗಳೂರು:** ಪ್ರತಿ ಬಾರಿ, ಭಾರಿ ಮಳೆಯಾದಾಗಲೂ ಜಲಾವೃತಗೊಂಡು ವಾಹನ ಸವಾರರು ಪರದಾಡುವ ಪರಿಸ್ಥಿತಿ ಎದುರಾಗುತ್ತಿದ್ದ ಕೆ.ಆರ್. ವೃತ್ತದ ಅಂಡರ್ ಪಾಸ್ ಸಮಸ್ಯೆಗೆ ಮುಕ್ತಿ ಹಾಡಲು ಬೆಂಗಳೂರು ಕೇಂದ್ರ ನಗರ ಪಾಲಿಕೆ ಮುಂದಾಗಿದೆ.

ಮಳೆನೀರು ಸರಾಗವಾಗಿ ಹರಿದು ಹೋಗಲು ಅನುಕೂಲವಾಗುವಂತೆ ಕೆ.ಆರ್.ವೃತ್ತದ ಅಂಡರ್‌ಪಾಸ್‌ನಿಂದ ಬೃಹತ್ ನೀರುಗಾಲುವೆ ಸಂಪರ್ಕದವರೆಗೆ 900 ಮಿ.ಮೀ ವ್ಯಾಸದ ಅತ್ಯಾಧುನಿಕ ಎನ್‌ಪಿ3 ಹೊಸ ಹ್ಯೂಮ್ ಪೈಪ್ ಅಳವಡಿಸುವ ಕಾಮಗಾರಿ ಆರಂಭಿಸಿದೆ.

ಮುಂಗಾರು ಮಳೆ ಚುರುಕುಗೊಳ್ಳುತ್ತಿರುವ ಬೆನ್ನಲ್ಲೇ, ಅಂಡರ್ ಪಾಸ್‌ಗಳಲ್ಲಿ ನೀರು ನಿಲ್ಲುವಿಕೆ ತಡೆಗಟ್ಟಲು ಪಾಲಿಕೆ ಈ ಮಹತ್ವದ ಕ್ರಮ ಕೈಗೊಂಡಿದೆ. ಈ ಹೊಸ ಪೈಪ್‌ಲೈನ್ ಅಳವಡಿಕೆಯಿಂದಾಗಿ ಮಳೆನೀರು ಯಾವುದೇ ಅಡೆತಡೆಯಿಲ್ಲದೆ ನೇರವಾಗಿ ರಾಜಕಾಲುವೆಯನ್ನು ಸೇರಲಿದೆ. ಇದರಿಂದಾಗಿ ಅಂಡರ್ ಪಾಸ್‌ನಲ್ಲಿ ಸೃಷ್ಟಿಯಾಗುತ್ತಿದ್ದ ಕೃತಕ ಪ್ರವಾಹ ಪರಿಸ್ಥಿತಿಗೆ ಬ್ರೇಕ್ ಬೀಳಲಿದೆ. ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಳೆನೀರು ಹೆಚ್ಚಿನ ಪ್ರಮಾಣದಲ್ಲಿ ಹರಿದು ಹೋಗಲು ಅನುಕೂಲವಾಗುವಂತೆ 900 ಮಿ.ಮೀ ವ್ಯಾಸದ ಬಲಿಷ್ಠ ಹ್ಯೂಮ್ ಪೈಪ್‌ಗಳನ್ನು ಬಳಸಲಾಗುತ್ತಿದೆ. ಹಳೆಯ ಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುತ್ತಿರುವುದರಿಂದ ಮಳೆನೀರು ಹರಿವಿನ ಸಾಮರ್ಥ್ಯ ದುಪ್ಪಟ್ಟಾಗಲಿದೆ. ನಗರದ ಪ್ರಮುಖ ಕೊಂಡಿಯಾಗಿರುವ ಕೆ.ಆರ್. ವೃತ್ತದ ಅಂಡಪಾಸ್ ನಲ್ಲಿ ನೀರು ನಿಲ್ಲುವುದರಿಂದ ಇಡೀ ನಗರದ ಸಂಚಾರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿತ್ತು. ಈ ಹೊಸ ಕಾಮಗಾರಿಯಿಂದಾಗಿ ಮುಂಬರುವ ದಿನಗಳಲ್ಲಿ ಸಾರ್ವಜನಿಕರು ಮತ್ತು ವಾಹನ ಸವಾರರು ಎದುರಿಸುತ್ತಿದ್ದ ಮಳೆಗಾಲದ ಆತಂಕ ದೂರಾಗಲಿದೆ ಎಂದು ಪಾಲಿಕೆ ತಿಳಿಸಿದೆ.



ಮನೆ ಬಳಿ ಹಾಜರಾತಿ ಪಡೆಯಲಿ: ಆರ್.ಅಶೋಕ ಸೂಚನೆ

ಪ್ರತಿ ಮನೆಯಲ್ಲೂ ಕಸ ಸಂಗ್ರಹಿಸಿ

• **ಬೆಂಗಳೂರು:** ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿ ವಾರ್ಡ್‌ಗೂ ಕಡ್ಡಾಯವಾಗಿ ಕಸದ ಆಟೋವನ್ನು ನಿಯೋಜಿಸಬೇಕು. ಪ್ರತಿ ದಿನ ಮನೆ-ಮನೆಗೆ ಹೋಗಿ ಕಸ ಸಂಗ್ರಹಿಸಬೇಕು ಮತ್ತು ಮನೆಗಳ ಮುಂದೆ ಹಾಜರಾತಿ ಹಾಕಲು ಕ್ರಮಕೈಗೊಳ್ಳುವಂತೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಬುಧವಾರ ಆರ್. ಅಶೋಕ್ ನೇತೃತ್ವದಲ್ಲಿ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್, ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಕಸ ಸಂಗ್ರಹಣ ಆಟೋಗಳ ಚಾಲಕರು ಹಾಗೂ ಸಾರ್ವಜನಿಕರೊಂದಿಗೆ ಪದ್ಮನಾಭನಗರ ಆಟದ ಮೈದಾನದಲ್ಲಿ ಸಭೆ ನಡೆಯಿತು. ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಮನೆಗಳಿಂದ ಅಸಮರ್ಪಕವಾಗಿ ಕಸ ಸಂಗ್ರಹಿಸುತ್ತಿದ್ದಾರೆ. ಇದರಿಂದ ವಾರ್ಡ್‌ಗಳಲ್ಲಿ ಬ್ಲಾಕ್‌ಸ್ಪಾಟ್ ಹೆಚ್ಚಾಗಿರುತ್ತವೆ. ಆಟೋ ಕಸ ಸಂಗ್ರಹಣೆ ಸರಿಯಾದ ಸಮಯಕ್ಕೆ ಆಗುತ್ತಿಲ್ಲ, ನಿಗದಿಪಡಿಸಿರುವ ಆಟೋಗಳಿಗಿಂತ ಕಡಿಮೆ ಆಟೋಗಳು ಕಾರ್ಯನಿರ್ವಹಿಸುತ್ತಿವೆ ಎಂದು ಸಾರ್ವಜನಿಕರು ಸಭೆಯಲ್ಲಿ ಆಕ್ಷೇಪಿಸಿದರು.

ಪ್ರತಿ ವಾರ್ಡ್‌ಗೂ ಕಡ್ಡಾಯವಾಗಿ ಕಸದ ಆಟೋಗಳನ್ನು ನೇಮಿಸಬೇಕು. ಆಟೋಗಳು ಪ್ರತಿದಿನ ಸಾರ್ವಜನಿಕರ ಮನೆ ಮನೆ ಮುಂದೆ ಹೋಗಿ ಕಸ ಸಂಗ್ರಹಿಸಬೇಕು ಮತ್ತು ಮನೆಗಳ ಮುಂದೆ ಹಾಜರಾತಿ ಹಾಕಬೇಕು.



“ ಪದ್ಮನಾಭನಗರ ಕ್ಷೇತ್ರದಲ್ಲಿನ ಕಸದ ಸಮಸ್ಯೆ ನಿವಾರಣೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.
■ ಕೆ.ಎನ್. ರಮೇಶ್, ದಕ್ಷಿಣ ಪಾಲಿಕೆ ಆಯುಕ್ತ

ಕಸ ಸಂಗ್ರಹಿಸದ ಗುತ್ತಿಗೆದಾರರು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಿ

ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರಿಗೆ ಒಂದು ವಾರದ ಗಡುವು ನೀಡುತ್ತಿದ್ದು, ಈ ಅವಧಿಯಲ್ಲಿ ವಾರ್ಡ್‌ಗಳಲ್ಲಿನ ಕಸದ ಸಮಸ್ಯೆ ಸಂಪೂರ್ಣವಾಗಿ ಪರಿಹಾರ ಆಗಬೇಕು. ಒಂದು ವಾರದ ನಂತರವೂ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದಲ್ಲಿ ಅಂತಹ ಗುತ್ತಿಗೆದಾರರನ್ನು ಬ್ಲ್ಯಾಕ್ ಲಿಸ್ಟ್‌ಗೆ ಸೇರಿಸಲಾಗುವುದು ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಸಾರ್ವಜನಿಕರಿಗೆ ಭರವಸೆ ನೀಡಿದರು.

ಇಂದು ನಗರದಲ್ಲಿ...

- ಅಧಿಕ ಮಾಸ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸ
- ಸ್ಥಳ: ಪೂರ್ಣ ಪ್ರಜ್ಞ ವಿದ್ಯಾಪೀಠ
- ಬೆಳಗ್ಗೆ 8

- ದಕ್ಷಿಣ ಭಾರತ ಆಹಾರ ಮೇಳ
- ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ
- ಬೆಳಗ್ಗೆ 11

- ಮಾವು ಮೇಳ
- ಸ್ಥಳ: ಲಾಲ್ ಬಾಗ್
- ಬೆಳಗ್ಗೆ 11

- ನಮಃ ಶಂಕರಾಯ ಜಪ ಯಜ್ಞ
- ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ
- ಸಂಜೆ 6

- ಸಾಮೂಹಿಕ ಗಣಪತಿ ಪೂಜೆ
- ಸ್ಥಳ: ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ, ರಾಗೀಗುಡ್ಡ, ಜಯನಗರ
- ಸಂಜೆ 6:30

ಕಿರುಸುದ್ದಿ

ನೆಟ್ ಬೌಲಿಂಗ್: 7 ಯುವ ಬೌಲರ್‌ಗೆ ಬಿಸಿಸಿಐ ಆಹ್ವಾನ

• **ಮುಂಬೈ:** ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ಗೂ ಮುನ್ನ ಟೀಮ್ ಇಂಡಿಯಾ ಬ್ಯಾಟರ್‌ಗಳಿಗೆ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಲು ಜಮ್ಮು ಕಾಶ್ಮೀರದ ವೇಗಿ ಆಕಿಬ್ ನಬಿ ದಾರ್ ಮತ್ತು ಉತ್ತರಪ್ರದೇಶದ ಲೆಗ್‌ಸ್ಪಿನ್ನರ್ ಜೀಶಾನ್ ಅನ್ಸಾರಿ ಸೇರಿದಂತೆ ಒಟ್ಟು 7 ಬೌಲರ್‌ಗಳನ್ನು ಬಿಸಿಸಿಐ ಆಹ್ವಾನಿಸಿದೆ. ಐಪಿಎಲ್ ಮತ್ತು ರಣಜಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಹೊರತಾಗಿಯೂ ಆಕಿಬ್ ಭಾರತ ತಂಡಕ್ಕೆ ಆಯ್ಕೆ ಆಗದಿರುವುದು ಸಾಕಷ್ಟು ಟೀಕೆಗೆ ಕಾರಣವಾಗಿತ್ತು. ಐಪಿಎಲ್ ಬಳಿಕ ಪ್ರಮುಖ ವೇಗಿಗಳಿಗೆ ವಿಶ್ರಾಂತಿ ಅಗತ್ಯವಿದ್ದು, ಪೂರ್ಣ ಪ್ರಮಾಣದಲ್ಲಿ ನೆಟ್ಸ್‌ನಲ್ಲಿ ಬೌಲಿಂಗ್ ನಡೆಸಲು ಸಾಧ್ಯವಿಲ್ಲ. ಆದರೆ ಬ್ಯಾಟರ್‌ಗಳಿಗೆ ಅಭ್ಯಾಸದ ಅಗತ್ಯವಿದೆ. ಈ ಕಾರಣಕ್ಕೆ 7 ಯುವ ಬೌಲರ್‌ಗಳನ್ನು ಆಹ್ವಾನಿಸಲಾಗಿದೆ ಎನ್ನಲಾಗುತ್ತಿದೆ.

ಇಂಡೋನೇಷ್ಯಾ ಓಪನ್: 2ನೇ ಸುತ್ತಿಗೆ ಆಯುಷ್, ಸಿಂಧು



• **ಹೊಸದಿಲ್ಲಿ:** ಇಂಡೋನೇಷ್ಯಾ ಓಪನ್ 2026 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಯುವ ಶಟ್ಲರ್ ಆಯುಷ್ ಶೆಟ್ಟಿ ಪುರುಷರ ವಿಭಾಗದಲ್ಲಿ ಬುಧವಾರ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತಾರಾ ಆಟಗಾರ್ತಿ ಪಿವಿ ಸಿಂಧು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ.

21ರ ಹರೆಯದ ಆಯುಷ್ ಚೀನಾ ಎದುರಾಳಿ ವೆಂಗ್ ಹೊಂಗ್ ಯಾಂಗ್ ವಿರುದ್ಧ ಏಕಪಕ್ಷೀಯ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದ್ದಾರೆ. 20ನೇ ಶ್ರೇಯಾಂಕದ ಶೆಟ್ಟಿ ಚೀನಾದ 15ನೇ ಶ್ರೇಯಾಂಕದ ಹೊಂಗ್‌ರನ್ನು 66 ನಿಮಿಷಗಳ ಪಂದ್ಯದಲ್ಲಿ 22-20, 21-15 ಅಂಕಗಳ ಅಂತರದಲ್ಲಿ ಸೋಲಿಸಿದ್ದಾರೆ.

ಹೊರಬಿದ್ದ ಸಾತ್ವಿಕ್-ಚಿರಾಗ್ ಜೋಡಿ: ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ನಿರೀಕ್ಷೆಯನ್ನು ಹೊತ್ತಿದ್ದ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂಡೋನೇಷ್ಯಾ ಓಪನ್‌ನಿಂದ ಹೊರಬಿದ್ದಿದೆ. ಇತ್ತೀಚೆಗೆ ಈ ಜೋಡಿ ಸಿಂಗಾಪುರ ಓಪನ್ ಪುರುಷರ ಡಬಲ್ಸ್ ಗರಿ ಮುಡಿಗೇರಿಸಿತ್ತು. ಆದರೆ ಇಂಡೋನೇಷ್ಯಾ ಓಪನ್ ಮೊದಲ ಸುತ್ತಿನಲ್ಲಿ 7 ನಿಮಿಷದ ಆಟದ ಬಳಿಕ ಸಾತ್ವಿಕ್ ಭುಜದ ಗಾಯಕ್ಕೆ ಒಳಗಾದ ಕಾರಣ ಜೋಡಿ ಸ್ಪರ್ಧೆಯಿಂದ ಹಿಂದೆ ಸರಿಯಿತು. ಪಂದ್ಯದಲ್ಲಿ ಮಲೇಷ್ಯಾ ಜೋಡಿ ವಿರುದ್ಧ 6-11 ಅಂಕಗಳ ಹಿನ್ನಡೆ ಅನುಭವಿಸಿದ್ದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಕುಮಾರ್ ಮತ್ತು ರುತ್ವಿಕಾ ಗದ್ದೆ ಜೋಡಿ ಚೈನೀಸ್ ತೈಪೆ ಜೋಡಿಯನ್ನು 21-14, 21-14 ನೇರ ಗೇಮ್‌ಗಳಿಂದ ಸೋಲಿಸಿ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅನುಭವಿ ಎಚ್‌ಎಸ್ ಪ್ರಣೋಯ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದಿದ್ದಾರೆ. ಮಹಿಳೆಯರ ಸಿಂಗಲ್ಸ್ ಸ್ಪರ್ಧೆಯಲ್ಲಿ ಯುವ ಶಟ್ಲರ್ ಉನ್ನತಿ ಹುಡ್ಡಾ ಜಪಾನ್ ಎದುರಾಳಿ ನಸೊಮಿ ಒಕುಹಾರ ವಿರುದ್ಧ 15-21, 14-21 ನೇರ ಸೋಲುಂಡಿದ್ದಾರೆ.

ದ್ವಿತೀಯ ಸುತ್ತಿಗೆ ಸಿಂಧು: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿವಿ ಸಿಂಧು ಮಂಗಳವಾರ ತಡರಾತ್ರಿ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಗೆದ್ದು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಥೈಲೆಂಡ್ ಎದುರಾಳಿ ಬುಸಾನನ್ ವಿರುದ್ಧ 51 ನಿಮಿಷಗಳ ಪಂದ್ಯದಲ್ಲಿ 25-23, 21-16 ಅಂಕಗಳಿಂದ ಸಿಂಧು ಜಯಿಸಿದ್ದಾರೆ. ಗುರುವಾರ ತಮ್ಮ ದ್ವಿತೀಯ ಸುತ್ತಿನ ಪಂದ್ಯದಲ್ಲಿ ಜಪಾನ್ ಎದುರಾಳಿ ಎಸ್‌ವೈ ಆ್ಯನ್ ಸವಾಲನ್ನು ಎದುರಿಸಲಿದ್ದಾರೆ.

ಸೆಮಿಗೆ ಮೆನ್ಸಿಕ್, ಖ್ವಾಲೀನ್ಸಾ

• **ಪ್ಯಾರಿಸ್:** ಫ್ರೆಂಚ್ ಓಪನ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಜೇಕಬ್ ಮೆನ್ಸಿಕ್ ಹಾಗೂ ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಮಾಯ ಖ್ವಾಲೀನ್ಸಾ ತಮ್ಮ ಕ್ವಾರ್ಟರ್ ಫೈನಲ್ ಪಂದ್ಯಗಳನ್ನು ಗೆದ್ದು ಸೆಮಿ ಫೈನಲ್ ಹಂತಕ್ಕೇರಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ತಾಳ್ಮೆಯ ಆಟ ಪ್ರದರ್ಶಿಸಿದ ಜೆಕ್ ಗಣರಾಜ್ಯದ ಆಟಗಾರ ಮೆನ್ಸಿಕ್, ಬ್ರೆಜಿಲ್ ಆಟಗಾರ ಜಾವೊ ಫಾನ್ಸೇಕರನ್ನು 6-4, 6-3 ಮತ್ತು 7-6(3) ಸೆಟ್ ಅಂತರದಿಂದ ಸೋಲಿಸಿದ್ದಾರೆ. ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ 22ನೇ ಶ್ರೇಯಾಂಕದ ರಷ್ಯಾ ಆಟಗಾರ್ತಿ ಅನ್ನಾ ಕಲಿನ್ಸ್‌ಕಯಾ ಅವರನ್ನು ಪೋಲೆಂಡ್ ಆಟಗಾರ್ತಿ 7-6(3), 6-3 ಸೆಟ್ ಅಂತರದಿಂದ ಸೋಲಿಸಿದ್ದಾರೆ.

ಮತ್ತೆ ನಂ.1 ಮ್ಯಾಗ್ನಸ್ ಮಣಿಸಿದ ಭಾರತದ ಗ್ರಾಂಡ್‌ಮಾಸ್ಟರ್

ಪ್ರಜ್ಞಾನಂದ ದಿಗ್ವಿಜಯ



• **ಓಸ್ಲೋ:** ನಾರ್ವೆಯ ಓಸ್ಲೋದಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ 2026 ಪಂದ್ಯಾವಳಿಯ ಎಂಟನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಚೆಸ್ ಲೋಕದಲ್ಲಿ ಭಾರತದ ಪಾರಮ್ಯ ಮುಂದುವರಿದಿದ್ದು, ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್‌ರನ್ನು ಕ್ಲಾಸಿಕಲ್ ವಿಭಾಗದಲ್ಲಿ ಮತ್ತೊಮ್ಮೆ ಮಣಿಸಿದ್ದಾರೆ. ಇದರೊಂದಿಗೆ ಪ್ರಶಸ್ತಿ ಸುತ್ತು ಇನ್ನಷ್ಟು ರೋಚಕಗೊಂಡಿದ್ದು, ಪ್ರಜ್ಞಾನಂದ ಪಂದ್ಯಾವಳಿಯಲ್ಲಿ ಪ್ರಬಲ ಸ್ಪರ್ಧಿಯಾಗಿದ್ದಾರೆ.

ಐತಿಹಾಸಿಕ ದಾಖಲೆ: ಕಳೆದ ವಾರ ಬಿಳಿ ಕಾಯಿಗಳೊಂದಿಗೆ ಮ್ಯಾಗ್ನಸ್ ಅವರನ್ನು ಸೋಲಿಸಿದ್ದ ಪ್ರಜ್ಞಾನಂದ, ಈ ಬಾರಿ ಕಪ್ಪು ಕಾಯಿಗಳೊಂದಿಗೆ ಗೆಲುವು ಸಾಧಿಸಿ ಅಪರೂಪದ ದಾಖಲೆ ನಿರ್ಮಿಸಿದರು. ಒಂದೇ ಟೂರ್ನಿಯಲ್ಲಿ ಕಾರ್ಲ್ಸನ್ ವಿರುದ್ಧ ಎರಡು ಕ್ಲಾಸಿಕಲ್ ಗೆಲುವು ಸಾಧಿಸಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಸಾಧನೆಯನ್ನು ಈ ಹಿಂದೆ ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಮಾತ್ರ ಮಾಡಿದ್ದರು.

ಇದರೊಂದಿಗೆ ಕ್ಲಾಸಿಕಲ್ ಚೆಸ್‌ನಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ಕಾರ್ಲ್ಸನ್ ಅವರನ್ನು ಮೂರು ಬಾರಿ ಮಣಿಸಿದ ಆಯ್ದ ಆಟಗಾರರ ಪಟ್ಟಿಗೂ ಪ್ರಜ್ಞಾನಂದ ಸೇರ್ಪಡೆಯಾದರು. ಇನ್ನೊಂದು ಪ್ರಮುಖ ಪಂದ್ಯದಲ್ಲಿ ಅಲಿರೆಜಾ ಫಿರೌಜಾ, ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಸಮಯದ ಒತ್ತಡದ ನಡುವೆಯೂ ಅಂತಿಮ ಹಂತದಲ್ಲಿ ಉತ್ತಮ ಆಟವಾಡಿದ ಫಿರೌಜಾ ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು.

ವೆಸ್ಲಿ ಸೋ ಮತ್ತು ವಿನ್ಸೆಂಟ್ ಕೀಮರ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ವೆಸ್ಲಿ ಸೋ ಗೆದ್ದು ಹೆಚ್ಚುವರಿ ಅಂಕಗಳನ್ನು ಪಡೆದುಕೊಂಡರು. ಎಂಟು ಸುತ್ತುಗಳ ಅಂತ್ಯಕ್ಕೆ ವೆಸ್ಲಿ ಸೋ 14 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಫಿರೌಜಾ 13 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಪ್ರಜ್ಞಾನಂದ 12 ಅಂಕಗಳೊಂದಿಗೆ ಪ್ರಶಸ್ತಿ ಪೈಪೋಟಿಯಲ್ಲಿ ಉಳಿದಿದ್ದಾರೆ.

ದಿವ್ಯಾಗೆ ಜಂಟಿ ತೃತೀಯ ಸ್ಥಾನ

ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸೌಬಯೇವಾ ಮಹತ್ವದ ಕ್ಲಾಸಿಕಲ್ ಗೆಲುವು ದಾಖಲಿಸಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡರು. ಭಾರತದ ದಿವ್ಯಾ ದೇಶಮುಖ್ ವಿರುದ್ಧ ಕಪ್ಪು ಕಾಯಿಗಳೊಂದಿಗೆ ಆಡಿದ ಅಸೌಬಯೇವಾ, ಸಮಯದ ಒತ್ತಡವನ್ನು ಸದುಪಯೋಗಪಡಿಸಿಕೊಂಡು ಪೂರ್ಣ ಅಂಕ ಗಳಿಸಿದರು.



ಮತ್ತೊಂದು ಪಂದ್ಯದಲ್ಲಿ ಝು ಜಿನರ್, ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರನ್ನು ಮಣಿಸಿ ಮಹತ್ವದ ಜಯ ಸಾಧಿಸಿದರು. ಇದರೊಂದಿಗೆ ಅವರು ದಿವ್ಯಾ ದೇಶಮುಖ್ ಅವರೊಂದಿಗೆ ತಲಾ 10 ಅಂಕಗಳನ್ನು ಹೊಂದಿದ್ದಾರೆ. ಅನ್ನಾ ಮುಜಿಚುಕ್ ಹಾಗೂ ಕೊನೇರು ಹಂಪಿ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ಹಂಪಿ ಗೆದ್ದು ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಎಂಟನೇ ಸುತ್ತಿನ ಬಳಿಕ ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸೌಬಯೇವಾ 15.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅನ್ನಾ ಮುಜಿಚುಕ್ 10.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ದಿವ್ಯಾ ದೇಶಮುಖ್ ಹಾಗೂ ಝು ಜಿನರ್ ತಲಾ 10 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಜೂ.6ಕ್ಕೆ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್

ಕಠಿಣ ಅಭ್ಯಾಸ ನಡೆಸಿದ ಗಿಲ್ ನೇತೃತ್ವದ ಭಾರತ



• **ಹೊಸದಿಲ್ಲಿ:** ಜೂ.6ರಂದು ಚಂಡೀಗಢದಲ್ಲಿ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯಕ್ಕಾಗಿ ಶುಭ್ಮನ್ ಗಿಲ್ ನೇತೃತ್ವದ ಭಾರತ ತಂಡ ಬುಧವಾರ ಕಠಿಣ ಅಭ್ಯಾಸವನ್ನು ಆರಂಭಿಸಿದೆ.

ಏಕೈಕ ಟೆಸ್ಟ್ ಬಳಿಕ ಅಫ್ಘಾನಿಸ್ತಾನ ವಿರುದ್ಧ ಭಾರತ ಮೂರು ಪಂದ್ಯಗಳ ಏಕದಿನ ಸರಣಿಯನ್ನೂ ಆಡಲಿದೆ. ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದ ಕನ್ನಡಿಗರಾದ ಭರವಸೆಯ ಬ್ಯಾಟರ್ ಕೆಎಲ್ ರಾಹುಲ್ ಹಾಗೂ ವೇಗಿ ಪ್ರಸಿದ್ಧ್ ಕೃಷ್ಣ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸದಲ್ಲಿ ಪಾಲ್ಗೊಂಡು ಬೆವರಿಳಿಸಿದ್ದಾರೆ. ಪ್ರಸಿದ್ಧ್ ಜತೆಗೂಡಿ ವೇಗಿ ಮೊಹಮ್ಮದ್ ಸಿರಾಜ್ ನಿರಂತರ 25 ನಿಮಿಷಗಳ ಕಾಲ ಬೌಲಿಂಗ್ ಅಭ್ಯಾಸ ನಡೆಸಿದ್ದಾರೆ. ಸಿರಾಜ್ ಫಿಟ್ ಇದ್ದಾರೆಂದೂ ಅಫ್ಘಾನ್ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಸಿದ್ಧರಿದ್ದಾರೆಂದೂ ತಿಳಿದುಬಂದಿದೆ.

ನೆಟ್ಸ್‌ನಲ್ಲಿ ಗಮನಸೆಳೆದ ವೇಗಿಗಳು: ಸಿರಾಜ್ ಮತ್ತು ಪ್ರಸಿದ್ಧ್ ಮಾತ್ರವಲ್ಲದೆ, ಇತರ ವೇಗಿಗಳೂ ನೆಟ್ ಅಭ್ಯಾಸದ ವೇಳೆ ಗಮನಸೆಳೆದರು. ವೇಗಿ ಗುರ್‌ನೂರ್ ಬ್ರಾರ್ ತಮ್ಮ ಬೌನ್ಸಿ ಎಸೆತಗಳಿಂದ ಬ್ಯಾಟರ್ ಕೆಎಲ್ ರಾಹುಲ್ ಅವರನ್ನು ತುಸು ಕಾಡಿದರು. ಬ್ರಾರ್ ಅವರ ಕೆಲವು ಎಸೆತಗಳು ರಾಹುಲ್ ಸ್ಟಂಪ್‌ಗಳನ್ನು ತಗುಲಿದವು. ಆದರೂ ನೆಟ್ಸ್‌ನಲ್ಲಿ ರಾಹುಲ್ ಅದ್ಭುತ ಲಯದಲ್ಲಿ ಇರುವಂತೆ ಕಾಣಿಸಿದರು.

7 ಯುವ ಬೌಲರ್‌ಗಳು ಭಾಗಿ: ಬಿಸಿಸಿಐ ಆಹ್ವಾನಿಸಿದ 7 ಯುವ ಬೌಲರ್‌ಗಳೂ ನೆಟ್ ಅಭ್ಯಾಸದಲ್ಲಿ ಭಾರತೀಯ ಬ್ಯಾಟರ್‌ಗಳಿಗೆ ಬೌಲಿಂಗ್ ನಡೆಸಿದರು. ಐಪಿಎಲ್ ಮತ್ತು ರಣಜಿ ಋತುವಿನಲ್ಲಿ ಮಿಂಚಿದ್ದ ಜಮ್ಮು ಕಾಶ್ಮೀರದ ವೇಗಿ



ಆಕಿಬ್ ನಬಿ ದಾರ್ ಬಹಳ ಹೊತ್ತು ಬೌಲಿಂಗ್ ನಡೆಸಿದರು. ಇದೇ ಸಂದರ್ಭ ನಾಯಕ ಶುಭ್ಮನ್ ಗಿಲ್ ಸಹಿತ ಬ್ಯಾಟರ್‌ಗಳೆಲ್ಲರೂ ರಿಸರ್ವ್ ಬೌಲರ್ಸ್ ವಿರುದ್ಧ ಬ್ಯಾಟಿಂಗ್ ಅಭ್ಯಾಸ ನಡೆಸಿದರು.

ಸ್ಪಿನ್ನರ್‌ಗಳ ಮಧ್ಯೆ ಸ್ಪರ್ಧೆ: ತರಬೇತಿ ಸಂದರ್ಭ ಎಡಗೈ ಸ್ಪಿನ್ನರ್ ಹರ್ಷ್ ದುಬೆ ಗಮನಸೆಳೆದರು. ಇದೇ ವೇಳೆ ಟೀಮ್ ಮ್ಯಾನೇಜ್‌ಮೆಂಟ್ ಹರ್ಷ್ ಅವರ ಬ್ಯಾಟಿಂಗ್ ಕೌಶಲವನ್ನೂ ಪರೀಕ್ಷಿಸಿದೆ. ಕೆಲಹೊತ್ತು ಹರ್ಷ್ ಬ್ಯಾಟಿಂಗ್ ಅಭ್ಯಾಸವನ್ನೂ ನಡೆಸಿದ್ದಾರೆ. ದುಬೆ ಮತ್ತು ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ನಡುವೆ ಆಡುವ ಬಳಗಕ್ಕೆ ಯಾರು ಆಯ್ಕೆ ಆಗುತ್ತಾರೆ ಎಂಬ ಸ್ಪರ್ಧೆ ಏರ್ಪಟ್ಟಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಇಬ್ಬರ ಮೇಲೂ ಗಮನಹರಿಸಿದ್ದಾರೆ.

ಮರಳಿದ ಮಯಾಂಕ್: ಕಳೆದ ಕೆಲವು ವರ್ಷಗಳಿಂದ ಹಲವು ಗಾಯಗಳ ಕಾರಣದಿಂದ ಸ್ಥಾನ ಪಡೆಯದ ವೇಗಿ ಮಯಾಂಕ್ ಯಾದವ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಬೌಲಿಂಗ್ ಅಭ್ಯಾಸಕ್ಕಿಂತ ಹೆಚ್ಚಾಗಿ ಡ್ರಿಲ್ಸ್ ಮತ್ತು ಫಿಟ್‌ನೆಸ್ ಮೇಲೆ ಗಮನಹರಿಸಿದ್ದಾರೆ.

ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಸರಣಿ

ಭಾರತಕ್ಕೆ ಸರಣಿ ಸೋಲು



• **ಟೌಂಟನ್:** ಮುಂಬರುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಟಿ20 ಸರಣಿ ಆಡಿದ ಭಾರತ, ಆತಿಥೇಯರ ವಿರುದ್ಧ 1-2 ಅಂತರದ ಸರಣಿ ಸೋಲುಂಡಿದೆ. ಇಲ್ಲಿ ಮಂಗಳವಾರ ತಡರಾತ್ರಿ ನಡೆದ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ 6 ವಿಕೆಟ್ ಜಯ ಸಾಧಿಸಿದೆ.

ಟಾಸ್ ಗೆದ್ದ ಇಂಗ್ಲೆಂಡ್ ನಾಯಕಿ ಚಾರ್ಲಿ ಡೀನ್ ಭಾರತೀಯರನ್ನು ಬ್ಯಾಟಿಂಗ್‌ಗೆ ಇಳಿಸಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಅರ್ಧ ಶತಕದ (56) ನೆರವಿನಿಂದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್ ಪೇರಿಸಿತ್ತು. ಅಲೀಸ್ ಕ್ಯಾಪ್ಸಿ ಸ್ಫೋಟಕ 82 ರನ್ ಮತ್ತು ಹೀದರ್ ನೈಟ್ ಅವರ ಅಜೇಯ 70 ರನ್ ನೆರವಿನಿಂದ ಇಂಗ್ಲೆಂಡ್ ಗೆಲುವಿನ ದಡ ಸೇರಿಸಿದೆ.

ಭಾರತದ ಪರ ಸ್ಮೃತಿ ಮಂದನಾ(8) ಮತ್ತು ಶೆಫಾಲಿ ವರ್ಮಾ(11) ಬೇಗನೆ ಔಟಾಗಿ ಪೆವಿಲಿಯನ್ ಸೇರಿದ್ದರು. ತಂಡ ಸಂಕಷ್ಟದಲ್ಲಿದ್ದಾಗ ಯಸ್ತಿಕಾ ಭಾಟಿಯಾ(32) ಮತ್ತು ಜೆಮಿಮಾ ರಾಡ್ರಿಗ್ಸ್(29) ಕೊಡುಗೆ ನೀಡಿದರು. ಜೆಮಿಮಾ ಮತ್ತು ಹರ್ಮನ್ 4ನೇ ಜತೆಗೂಡಿ 26 ಎಸೆತಗಳಲ್ಲಿ 40 ರನ್ ಚಚ್ಚಿದರು. ಭಾರತ ತಂಡವು ಭರ್ತಿ 100 ರನ್ ಗಳಿಸಿದ್ದಾಗ 4ನೇ ವಿಕೆಟ್ ರೂಪದಲ್ಲಿ ಜೆಮಿಮಾ ಔಟಾಗಿದ್ದರು. ಈ ಸಂದರ್ಭ ಜತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಮತ್ತು ದೀಪ್ತಿ ಶರ್ಮಾ 5ನೇ ವಿಕೆಟ್‌ಗೆ 67 ರನ್ ಸೇರಿಸಿದರು. ಜೆಮಿಮಾರನ್ನು ಕ್ಲೀನ್‌ಬೌಲ್ಡ್ ಮಾಡಿದ್ದ ಬೆಲ್ ದೀಪ್ತಿ ವಿಕೆಟ್ ಸಹ ಕಬಳಿಸಿದರು.

ಕ್ಯಾಪ್ಸಿ-ನೈಟ್ 137 ರನ್ ಜತೆಯಾಟ: ಇಂಗ್ಲೆಂಡ್ ಆರಂಭಿಕ ಆಘಾತಗಳನ್ನು ಕಂಡರೂ ಬ್ಯಾಟಿಂಗ್ ಆಲ್‌ರೌಂಡರ್ ಅಲೀಸ್ ಕ್ಯಾಪ್ಸಿ 43 ಎಸೆತಗಳಿಂದ 82 ರನ್ ಬಾರಿಸಿದರು. ಇನ್ನೊಂದು ಬದಿ ಕ್ರೀಸ್ ಆಕ್ರಮಿಸಿದ ಹೀದರ್ 42 ಎಸೆತಗಳಿಂದ ಔಟಾಗದೆ 70 ರನ್ ಗಳಿಸಿದರು. ಇಬ್ಬರೂ 5ನೇ ವಿಕೆಟ್‌ಗೆ 76 ಎಸೆತಗಳಲ್ಲಿ 137 ರನ್ ಪೇರಿಸುವ ಮೂಲಕ ಇಂಗ್ಲೆಂಡ್ ಟಿ20 ಸರಣಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂಗ್ಲೆಂಡ್‌ನಲ್ಲಿ ಕೌರ್ ಚೊಚ್ಚಲ ಟಿ20 ಫಿಫ್ಟಿ: ನಾಯಕಿ ಹರ್ಮನ್‌ಪ್ರೀತ್ ಕೌರ್ ಇಂಗ್ಲೆಂಡ್ ನೆಲದಲ್ಲಿ ಚೊಚ್ಚಲ ಟಿ20 ಅರ್ಧ ಶತಕ ದಾಖಲಿಸಿದ್ದು, ಒಟ್ಟಾರೆ ಅವರ 17ನೇ ಟಿ20 ಅರ್ಧ ಶತಕ ಇದಾಗಿತ್ತು.

ಸಂಕ್ಷಿಪ್ತ ಸ್ಕೋರ್

ಭಾರತ ವನಿತೆಯರು 180/5(20): ಹರ್ಮನ್‌ಪ್ರೀತ್ 56*, ಯಸ್ತಿಕಾ 32, ದೀಪ್ತಿ 32, ಜೆಮಿಮಾ 29, ಬೆಲ್ 36ಕ್ಕೆ 2.

ಇಂಗ್ಲೆಂಡ್ ವನಿತೆಯರು 184/4(20): ಕ್ಯಾಪ್ಸಿ 82, ನೈಟ್ 70*, ಅರುಂಧತಿ 31ಕ್ಕೆ 2, ಕ್ರಾಂತಿ 40ಕ್ಕೆ 2.

ಕೊಡಗು ಸೈನಿಕ ಶಾಲೆಯಲ್ಲಿ ಅಖಿಲ ಭಾರತ ಅಂತರಗುಂಪು ಫುಟ್ಬಾಲ್

ಪ್ರಿ ಸುಬ್ರೊಟೊ ಕಪ್‌ಗೆ ಚಾಲನೆ

• **ಕುಶಾಲನಗರ:** ಕೂಡಿಗೆಯಲ್ಲಿರುವ ಕೊಡಗು ಸೈನಿಕ ಶಾಲೆಯ ಮರಿಯಪ್ಪ ಕೆಂಪಯ್ಯ ಫುಟ್ಬಾಲ್ ಮೈದಾನದಲ್ಲಿ ಪ್ರತಿಷ್ಠಿತ ಅಖಿಲ ಭಾರತ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ(ಪ್ರಿ ಸುಬ್ರೊಟೊ ಕಪ್-2026) ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು.

ಕೂಡಿಗೆಯ ಸೈನಿಕ ಶಾಲೆಯಲ್ಲಿ ಮೊದಲ ಬಾರಿಗೆ ನಡೆಯುತ್ತಿರುವ ಈ ಪಂದ್ಯಾವಳಿಯು ಜೂ.11ರವರೆಗೆ ನಡೆಯಲಿದ್ದು, ದೇಶದೆಲ್ಲೆಡೆಯ 13 ಸೈನಿಕ ಶಾಲೆಗಳ 21 ತಂಡಗಳು ಇದರಲ್ಲಿ ಭಾಗವಹಿಸಿವೆ.

ಈ ಚಾಂಪಿಯನ್‌ಶಿಪ್ ಸಬ್ ಜೂನಿಯರ್ ಬಾಲಕರು(15 ವರ್ಷದೊಳಗಿನ), ಜೂನಿಯರ್ ಬಾಲಕರು(17 ವರ್ಷದೊಳಗಿನ) ಮತ್ತು ಜೂನಿಯರ್ ಬಾಲಕಿಯರು(17 ವರ್ಷದೊಳಗಿನ) ಎಂಬ ಮೂರು ವಿಭಾಗಗಳಲ್ಲಿ ನಡೆಯಲಿದೆ. ಕೊಡಗು ಸೈನಿಕ ಶಾಲೆ ಗುಂಪು ಮಟ್ಟದ ಪಂದ್ಯಗಳಲ್ಲಿ ಜಯ ಗಳಿಸಿ ಮೂರೂ ವಿಭಾಗಗಳಲ್ಲಿ ಗ್ರೂಪ್ ಎಚ್ ಅನ್ನು ಪ್ರತಿನಿಧಿಸುತ್ತಿದ್ದು, ಈ ಮೂಲಕ ಸಂಸ್ಥೆಯು ಇತಿಹಾಸವನ್ನು ಸೃಷ್ಟಿಸಿದೆ.

ಉದ್ಘಾಟನಾ ಸಮಾರಂಭವು ಕೊಡಗು ಸೈನಿಕ ಶಾಲೆಯ ಪರೇಡ್ ಕಮಾಂಡರ್ ಕೆಡೆಟ್



ಆರ್ಯನ್ ಮಹಾಪಾರ್ಕರ್ ನೇತೃತ್ವದಲ್ಲಿ ಭಾಗವಹಿಸಿದ ಎಲ್ಲಾ ತಂಡಗಳ ಆಕರ್ಷಕ ಪಥಸಂಚಲನದೊಂದಿಗೆ ಚಾಲನೆಗೊಂಡಿತು.

ಪ್ರಸ್ತುತ ಪಂದ್ಯಾವಳಿಯಲ್ಲಿ ಒಟ್ಟು 336 ಕ್ರೀಡಾಪಟುಗಳು ಸ್ಪರ್ಧಿಸುತ್ತಿದ್ದು, ಇದು ಸೈನಿಕ ಶಾಲೆಗಳ ಕ್ಯಾಲೆಂಡರ್‌ನ ಅತಿ ದೊಡ್ಡ ಮತ್ತು ಅತಿ ಮಹತ್ವದ ಕ್ರೀಡಾಕೂಟಗಳಲ್ಲಿ ಒಂದಾಗಿದೆ. ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್‌ಜೀತ್ ಸಿಂಗ್ ಅವರು, ಮುಖ್ಯ ಅತಿಥಿಗಳಾದ ಮೈಸೂರು ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ. ಎಂ.ಬಿ.ಬೋರಲಿಂಗಯ್ಯ, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಹಾಗೂ ಭಾಗವಹಿಸಿದ ಎಲ್ಲಾ ತಂಡಗಳ ಕ್ರೀಡಾಪಟುಗಳು ಹಾಗೂ ಆಯಾ ಶಾಲೆಗಳ ಸಿಬ್ಬಂದಿಗಳನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ, ಸೈನಿಕ ಶಾಲೆಯ ಉಪ ಪ್ರಾಂಶುಪಾಲ ವಿಂಗ್ ಕಮಾಂಡರ್ ಮೊಹಮ್ಮದ್ ಶಾಜಿ, ದಿವ್ಯಾ ಸಿಂಗ್, ಹಿರಿಯ ಶಿಕ್ಷಕ ವಿಬಿನ್ ಕುಮಾರ್, ಭಾಗವಹಿಸಿದ ವಿವಿಧ ತಂಡಗಳ ಮೇಲ್ವಿಚಾರಕರು, ತೀರ್ಪುಗಾರರು, ಪಂದ್ಯದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸೈನಿಕ ಶಾಲೆಯ ಸಿಬ್ಬಂದಿ ವರ್ಗ, ಕೂಡಿಗೆಯ ಮೊರಾರ್ಜಿ ಶಾಲೆ ಮತ್ತು ಅತ್ತೂರಿನ ಜ್ಞಾನಗಂಗಾ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಫ್ರೆಂಚ್ ಓಪನ್: ವಿಶ್ವ ನಂ.1 ಸಬಲೆಂಕಾಗೆ ಆಘಾತ!




• **ಪ್ಯಾರಿಸ್:** ವಿಶ್ವ ನಂ.1 ಅರೀನಾ ಸಬಲೆಂಕಾ ಫ್ರೆಂಚ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಆಘಾತ ಅನುಭವಿಸಿದ್ದಾರೆ. ನಾಲ್ಕು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಸಬಲೆಂಕಾ ಅವರು ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡಯಾನ ಶ್ನೈಡರ್ ಎದುರು 3-6, 7-5, 6-0 ಸೆಟ್ ಅಂತರದಿಂದ ಸೋಲುಂಡಿದ್ದಾರೆ. ಸುಲಭದಲ್ಲಿ ಸೆಮಿ ಫೈನಲ್ ಪ್ರವೇಶಿಸುತ್ತಾರೆ ಎಂಬ ನಿರೀಕ್ಷೆಯಿದ್ದ ಸಬಲೆಂಕಾ ಕ್ವಾರ್ಟರ್ ಸೋಲುಂಡು ಹೊರಬಿದ್ದಿದ್ದಾರೆ. ಕಳೆದ ಬಾರಿ ಅವರು ಫೈನಲ್‌ನಲ್ಲಿ ಕೊಕೊ ಗಾಫ್ ಎದುರು ಸೋತು ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿದ್ದರು.

ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿ ಪ್ರಕಟ

ಕಿವೀಸ್ ವಿರುದ್ಧ 12 ಪಂದ್ಯ

• **ವೆಲ್ಲಿಂಗ್ಟನ್:** ಐತಿಹಾಸಿಕ ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದೆ. ಇದೇ ವರ್ಷ ಅಕ್ಟೋಬರ್‌ನಲ್ಲಿ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತೀಯ ಕ್ರಿಕೆಟ್ ತಂಡವು 12 ಪಂದ್ಯಗಳನ್ನು ಆಡಲಿದೆ. ಸುದೀರ್ಘ ಸರಣಿಯಲ್ಲಿ ಐದು ಟಿ20, ಐದು ಏಕದಿನ ಮತ್ತು 2 ಟೆಸ್ಟ್ ಪಂದ್ಯಗಳನ್ನು ಒಳಗೊಂಡಿವೆ. ಕಿವೀಸ್ ಪ್ರವಾಸ ಅ.22ರಂದು ಆರಂಭವಾಗಲಿದ್ದು, ಸರಣಿ ಮೊದಲ ಟಿ20 ಪಂದ್ಯ ಹ್ಯಾಗ್ಲೆ ಓವಲ್‌ನಲ್ಲಿ ನಡೆಯಲಿದೆ. ನ.27ರಂದು ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯುವ ಎರಡನೇ ಟೆಸ್ಟ್ ಪಂದ್ಯದೊಂದಿಗೆ ಸರಣಿ ಸಮಾರೋಪಗೊಳ್ಳಲಿದೆ. ಇದು ಕ್ರಿಕೆಟ್ ಅಷ್ಟೇ ಅಲ್ಲದೆ, ಭಾರತ- ಕಿವೀಸ್ ನಡುವಿನ ಸ್ನೇಹ, ಇತಿಹಾಸ ಮತ್ತು ಸಂಸ್ಕೃತಿಯ ಸಂಭ್ರಮಾಚರಣೆ ಆಗಿರಲಿದೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಾರ್ಕೆಟಿಂಗ್ ಮತ್ತು ವಾಣಿಜ್ಯ ಅಧಿಕಾರಿ ಗ್ಲೆನ್ ಕ್ರಿಟ್‌ಚ್ಲೆ ಹೇಳಿದ್ದಾರೆ.



ತಿಂಗಳಾಂತ್ಯ ಐರ್ಲೆಂಡ್ ಪ್ರವಾಸ

ಭಾರತೀಯ ಕ್ರಿಕೆಟ್ ತಂಡ ಇದೇ ತಿಂಗಳಾಂತ್ಯದಲ್ಲಿ ಐರ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಎರಡು ಟಿ20 ಪಂದ್ಯಗಳನ್ನು ಆಡಲಿದೆ. ಬೆಲ್‌ಫಾಸ್ಟ್ ಮೈದಾನದಲ್ಲೇ ಜೂ.26ರಂದು ಮೊದಲ ಟಿ20 ಮತ್ತು ಜೂ.28ರಂದು ದ್ವಿತೀಯ ಟಿ20 ಪಂದ್ಯ ಆಡಲಾಗುವುದು.

ಸರಣಿ ವೇಳಾಪಟ್ಟಿ

ಐದು ಟಿ20 ಅಂ. ಪಂದ್ಯಗಳು

ಅ.22, ಮೊದಲ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್
ಅ.24, ದ್ವಿತೀಯ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್
ಅ.27, ತೃತೀಯ ಟಿ20, ಹೆಸ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ಅ.30, ನಾಲ್ಕನೇ ಟಿ20, ಈಡನ್ ಪಾರ್ಕ್, ಆಕ್ಲೆಂಡ್
ನ.1, ಐದನೇ ಟಿ20, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಮಧ್ಯಾಹ್ನ 1.30ರಿಂದ).

ಐದು ಏಕದಿನ ಪಂದ್ಯಗಳು

ನ.4, ಮೊದಲ ಏಕದಿನ, ಈಡನ್ ಪಾರ್ಕ್, ಆಕ್ಲೆಂಡ್
ನ.7, ಎರಡನೇ ಏಕದಿನ, ಹೆಸ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ನ.10, ತೃತೀಯ ಏಕದಿನ, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
ನ.13, 4ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
ನ.15, 5ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಬೆಳಗ್ಗೆ 8.30ರಿಂದ).

ಎರಡು ಟೆಸ್ಟ್ ಪಂದ್ಯಗಳು

ನ.19, ಮೊದಲ ಟೆಸ್ಟ್, ಬೇಸಿನ್ ರಿಸರ್ವ್, ವೆಲ್ಲಿಂಗ್ಟನ್
ನ.27, ದ್ವಿತೀಯ ಟೆಸ್ಟ್, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್.
(ಎರಡೂ ಪಂದ್ಯಗಳು ಭಾರತೀಯ ಕಾಲಮಾನ ಬೆಳಗ್ಗೆ 4.30ರಿಂದ).

ಪದಬಂಧ

ರಾಜ್ಞಾ ಸಂಗಮೇಶ ಹಿರೇಮಠ



6004

ಎಡದಿಂದ ಬಲಕ್ಕೆ

1.ದರದ ನಡುವೆ ಅಡಗಿದ ಮೋಸಗಾರ (4)
6.ನ್ಯಾಯ ನಿರ್ವಹಣಾ ಶಾಸ್ತ್ರ (4)
7.ಮುಚ್ಚಳವಿರುವ ಸಣ್ಣಪಾತ್ರೆ (3)
8.ಈಕೆ ಅಣ್ಣನ ಹೆಂಡತಿ (3)
10.ನಡವಳಿಕೆ-ವರ್ತನೆ (3)
11.ಜೊತೆಯಾಗಿರುವ ಗಂಡಹೆಂಡತಿ (3)
12.ವಸ್ತುವಿನ ಏಕಮಾನ ಗಾತ್ರದಲ್ಲಿರುವ ದ್ರವ್ಯರಾಶಿಯ ಅಳತೆ (3)
14.ತರಬೇತಿ-ಅಭ್ಯಾಸದ ಸಮಾನಪದ (3)
16.ಆರಂಭದಲ್ಲಿ ವಿಷ್ಣು ಹೊಂದಿರುವ ಸುದ್ದಿ ತಲುಪಿಸುವ ವ್ಯಕ್ತಿ (4)
17.ಒಳ್ಳೆಯ ಮನಸ್ಸಿರುವವನು (4)

ಮೇಲಿನಿಂದ ಕೆಳಕ್ಕೆ

2.ಈಕೆ ತೆಲ್ಲಿಗರ ಮಹಿಳೆ (4)
3.ಹಾಸ್ಯ ಮನೋಭಾವದವ-ರಸಜ್ಞ (3)
4.ದಂಡ ಕಡೆಯಲ್ಲಿಟ್ಟುಕೊಂಡ ಬಿಲ್ಲು (3)
5. ಪಾತಿವ್ರತ್ಯವುಳ್ಳವಳು-ಗರತಿ (4)
9. ಸಖಿ-ಮಿತ್ರೆಯೀಕೆ (3)
10. ಸಮಾಧಾನದ ಮಾತು ತಲೆಕೆಳಗಾಗಿದೆ (3)
11. ಕಡಗೋಲಿನಿಂದ ಕಡೆದ ಮಜ್ಜಿಗೆ (4)
13. ಹಣವಿಲ್ಲದವನು-ಬಡವ (4)
14. ತಾಣದ ನಡುವೆ ದಾಟುವಿಕೆಯಿದೆ (3)
15. ಹತ್ತಿರದವರ ಕೋಪಿಸಿಕೊಳ್ಳುವಿಕೆ (3)

6003 ಉತ್ತರ

ಎಡದಿಂದ ಬಲಕ್ಕೆ:

2.ತಿನ್ನಾಸಕ 4.ಕಪ್ಪೆ
5.ಕುಕಿಲ 6.ದ್ವಾರಪಾಲಕ
8.ಮರಾಠನ
11.ತಾಳಮೇಳ
12.ಮತಿಭ್ರಮಣೆ
14.ದಾತಾರ 16.ಕೇರಿ
17.ಯಶಸ್ಕರ

ಮೇಲಿನಿಂದ ಕೆಳಕ್ಕೆ :

1.ಬೇಕು 2.ತಿಲಘಾತಕ
3.ಕಸರತ್ತು 4.ಕಪಾಲ
7.ಕಳವಳ 8.ಪುಣ್ಯಧಾಮ
9.ಬಳಕೆದಾರ
10.ಕಮನೀಯ
13.ತಿಜೋರಿ 15.ರಟ್ಟು

ಮುಚ್ಚುವ ಹಂತಕ್ಕೆ ತಲುಪಿದ ಆರ್.ಗೊಲ್ಲರಹಟ್ಟಿ ಸರ್ಕಾರಿ ಶಾಲೆ

ಓರ್ವ ವಿದ್ಯಾರ್ಥಿ, ಒಬ್ಬ ಶಿಕ್ಷಕ

ಕುಣಿಗಲ್: ತಾಲೂಕಿನ ಆರ್ . ಗೊಲ್ಲರಹಟ್ಟಿ ಸರಕಾರಿ ಪ್ರಾಥಮಿಕ ಶಾಲೆಗೆ ದಾಖಲಾಗಿರುವ ಓರ್ವ ವಿದ್ಯಾರ್ಥಿಗೆ ಓರ್ವನೇ ಶಿಕ್ಷಕ ಬೋಧನೆ ಮಾಡುತ್ತಿರುವುದರಿಂದ ಶಾಲೆ ಮುಚ್ಚುವ ಹಂತಕ್ಕೆ ತಲುಪಿದೆ.

ಆರ್ .ಗೊಲ್ಲರ ಹಟ್ಟಿ ಶಾಲೆ 2001 - 2002ನೇ ಸಾಲಿನಲ್ಲಿ ಮನೆಯೊಂದರಲ್ಲಿ ಪ್ರಥಮವಾಗಿ ಪ್ರಾರಂಭಗೊಂಡಿತು. ಅಂದು ಒಂದರಿಂದ ಐದನೇ ತರಗತಿಯವರೆಗೆ 17 ವಿದ್ಯಾರ್ಥಿಗಳಿದ್ದರು. 2003-2004ರಲ್ಲಿ ಉತ್ತಮವಾದ ಕಟ್ಟಡವನ್ನು ಕಟ್ಟಲಾಯಿತು. ತುಂಬಾ ಚೆನ್ನಾಗಿ ನಡೆಯುತ್ತಿದ್ದ ಶಾಲೆಯಲ್ಲಿ ದಾಖಲಾತಿಯಲ್ಲಿ ಇಳಿಮುಖ ಕಂಡುಬಂದಿತು.

2025-26ನೇ ಸಾಲಿಗೆ ಕೇವಲ ನಾಲ್ಕು ವಿದ್ಯಾರ್ಥಿಗಳಿದ್ದರು. ಇಬ್ಬರು ವಿದ್ಯಾರ್ಥಿಗಳು ತೇರ್ಗಡೆಯಾಗಿ ಆರನೇ ತರಗತಿಗೆ ಸೇರಿಕೊಂಡರು. ಮತ್ತಿಬ್ಬರಲ್ಲಿ ಓರ್ವ ವಿದ್ಯಾರ್ಥಿ ಗುಬ್ಬಿ ತಾಲೂಕಿಗೆ ಸೇರಿಕೊಂಡಿದ್ದಾನೆ. ಮತ್ತೊಬ್ಬ ವಿದ್ಯಾರ್ಥಿ ಎರಡನೇ ತರಗತಿ ಓದುತ್ತಿದ್ದಾನೆ. ಬಿಸಿಯೂಟ ತಯಾರಿಸುವ ಚಂದ್ರಕಲಾ ಅವರ ಪುತ್ರನಾಗಿದ್ದಾನೆ. ವಿದ್ಯಾರ್ಥಿಗಳಿಲ್ಲದೆ ಒಬ್ಬಂಟಿಯಾದ್ದರಿಂದ ಪಕ್ಕದ ಶಾಲೆಗೆ ಸೇರುವ ಅಭಿಪ್ರಾಯವ್ಯಕ್ತಪಡಿಸಿದ್ದಾರೆ, ಅದಕ್ಕೆ ಪೋಷಕರು ಸಮ್ಮತಿಸಿದ್ದಾರೆಂದು ನಿಯೋಜನೆಗೊಂಡ ಶಿಕ್ಷಕರಾದ ವೆಂಕಟೇಶ್ ತಿಳಿಸಿದ್ದಾರೆ.

ತಾಲೂಕಿನಲ್ಲಿ ಶಿಕ್ಷಕರ ಕೊರತೆ ಇರುವುದರಿಂದ ಶಾಲೆಯಲ್ಲಿ ವಿದ್ಯಾರ್ಥಿ ಒಬ್ಬರೇ ಇರುವ ಕಾರಣ ಪಕ್ಕದ ಶಾಲೆಗೆ ವರ್ಗಾವಣೆ ಮಾಡಿ ನಿಯೋಜನೆಗೊಂಡ ಶಿಕ್ಷಕರನ್ನು ಮೂಲ ಶಾಲೆಗೆ ಕಳುಹಿಸುವ ಪ್ರಯತ್ನವೂ ನಡೆಯುತ್ತಿದೆ. ಸದ್ಯಕ್ಕೆ ಈ ಶಾಲೆಯಲ್ಲಿ ಒಬ್ಬರೇ ವಿದ್ಯಾರ್ಥಿ, ಶಿಕ್ಷಕರು ಒಬ್ಬರೇ, ಬುಧವಾರ ಶಾಲೆಗೆ ಭೇಟಿ ನೀಡಿದಾಗ ಶಿಕ್ಷಕರು ಮಾತ್ರ ಶಾಲೆಯಲ್ಲಿದ್ದರು.

ಕೊತ್ತಗೆರೆ ಹೋಬಳಿಯಲ್ಲಿ ನಡೆಯುತ್ತಿರುವ ಉತ್ತಮ ಶಾಲೆಯಲ್ಲಿ ಈ ಶಾಲೆಯು ಒಂದಾಗಿತ್ತು. 2016-17ರಲ್ಲಿ ಹಸಿರು ಶಾಲೆ ಎಂಬ ಪ್ರಶಸ್ತಿ ಪಡೆದಿದೆ. ನಂತರದ ದಿನದಲ್ಲಿ ಶಾಲೆ ಮುಚ್ಚುವ ಹಂತ ತಲುಪಿರುವುದು ಗ್ರಾಮದ ಕೆಲವು ಯುವಕರಿಗೆ ನೋವು ಉಂಟಾಗಿದೆ.



ಗ್ರಾಮದಲ್ಲಿ 55 ಮನೆಗಳಿವೆ. ಗ್ರಾಮದಲ್ಲಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರುವಂತವರು 12ರಿಂದ 13 ವಿದ್ಯಾರ್ಥಿಗಳಿದ್ದಾರೆ. ಉತ್ತಮ ಶಾಲಾ ಕಟ್ಟಡವಿದೆ. ಎರಡು ಕೊಠಡಿಗಳಿವೆ. ಆಫೀಸ್ ರೂಮ್, ಅಡುಗೆ ಮನೆ, ಶೌಚಾಲಯ, ನೀರಿನ ವ್ಯವಸ್ಥೆ, ಪ್ರತಿನಿತ್ಯ ಬಿಸಿಯೂಟ, ಕ್ಷೀರಭಾಗ್ಯ, ಮೊಟ್ಟೆ , ಬಾಳೆಹಣ್ಣು, ವಿದ್ಯಾರ್ಥಿ ವೇತನ, ಜತೆಗೆ ಶಾಲಾ ಸಮವಸ್ತ್ರ, ಪಠ್ಯಪುಸ್ತಕವನ್ನು ಉಚಿತವಾಗಿ ನೀಡಲಾಗುತ್ತಿದೆ.

ಶಾಲಾ ಆರಂಭದಲ್ಲಿ ಶಿಕ್ಷಕರು ಪೋಷಕರ ಮನೆ ಮನೆಗೆ ತೆರಳಿ ವಿದ್ಯಾರ್ಥಿಗಳನ್ನು ಕರೆತರುವ ಪ್ರಯತ್ನವೂ ನಡೆದಿದೆ. ಆದರೆ, ಪೋಷಕರು ಮಾತ್ರ ತಮ್ಮೂರಿನ ಶಾಲೆಯ ಕಡೆ ಮುಖ ಮಾಡದೆ ತಮ್ಮೂರಿನ ಶಾಲೆ ಮುಚ್ಚಿ ಹೋಗುತ್ತದೆ ಎಂಬ ಅರಿವಿದ್ದರೂ ಇಂಗ್ಲಿಷ್ ವ್ಯಾಮೋಹಕ್ಕೋ, ಪಟ್ಟಣದ ನೋಟಕ್ಕೋ ಸಾವಿರಾರು ರೂಪಾಯಿ ಡೊನೇಷನ್ ಕಟ್ಟುವ ಮೂಲಕ ಖಾಸಗಿ ಶಾಲೆಗೆ ದಾಖಲಿಸಿದ್ದಾರೆ. ಇದರಿಂದ ಶಾಲೆ ಮುಚ್ಚು ಹೋಗುವ ಕೊನೆ ಹಂತದಲ್ಲಿದೆ.

ಶಾಲೆ ಮುಚ್ಚುತ್ತಿರುವುದು ನೋವಾಗುತ್ತಿದೆ

ನಮ್ಮೂರ ಶಾಲೆ ಪ್ರಾರಂಭಿಸುವಾಗ ನಮ್ಮ ತಂದೆಯವರು ನಮ್ಮ ಮನೆಯನ್ನೇ ಶಾಲೆಗೆ ಬಿಟ್ಟುಕೊಟ್ಟಿದ್ದರು. ಶಾಲಾ ಕಟ್ಟಡಕ್ಕೆ ಜಾಗವನ್ನು ಕೊಟ್ಟಿದ್ದರು. ಶಾಲೆ ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಶಾಲೆ ಉಳಿಸಿಕೊಳ್ಳಲು ಪೋಷಕರನ್ನು ಮನವೊಲಿಸಿದರೂ ಪ್ರಯೋಜನವಾಗಲಿಲ್ಲ, ನಾವು ಓದಿದ ಶಾಲೆ ನಮ್ಮ ಕಣ್ಣೆದುರಿಗೆ ಮುಚ್ಚಿ ಹೋಗುತ್ತಿರುವುದು ಮನಸ್ಸಿಗೆ ತುಂಬಾ ನೋವುಂಟಾಗಿದೆ ಎಂದು ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಯಣ್ಣ ಹೇಳಿದರು.

ಶಾಲೆಗೆ ದಾಖಲಾಗದ ಮಕ್ಕಳು

ಸರ್ಕಾರಿ ಶಾಲೆಗಳು ಮುಚ್ಚಿ ಹೋಗುತ್ತಿರುವುದು ನೋವು ತರುವ ವಿಚಾರವಾದರೂ ಮುಚ್ಚುತ್ತಿರುವುದು ಮಾತ್ರ ಕಟುಸತ್ಯ, ತಾಲೂಕಿನ ಕೊತ್ತಗೆರೆ ಹೋಬಳಿ ಆರ್ .ಗೊಲ್ಲರಹಟ್ಟಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಗ್ರಾಮದಲ್ಲಿ ವಿದ್ಯಾರ್ಥಿಗಳಿದ್ದರೂ ದಾಖಲಾಗದೆ ಮುಚ್ಚುವ ಹಂತ ತಲುಪಿರುವುದು ಇದಕ್ಕೆ ಸಾಕ್ಷಿಯಾಗಿದೆ.

1885 ಎಕರೆ ಭೂಸ್ವಾಧೀನಕ್ಕೆ ತೀವ್ರ ವಿರೋಧ

ನಾಳೆ ವಿಧಾನಸೌಧ ಚಲೋ



ದೊಡ್ಡಬಳ್ಳಾಪುರ: ದೊಡ್ಡಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲೆಯ ಜಂಗಮ ಕೋಟೆಯ 1885 ಎಕರೆ ಭೂಸ್ವಾಧೀನ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಜೂ.5ರಂದು ನಡೆಯುತ್ತಿರುವ ರೈತರ ವಿಧಾನಸೌಧ ಚಲೋ ಪ್ರತಿಭಟನೆಗೆ ಬೆಂಬಲಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರೈತ ಸಂಘದ ನೇತೃತ್ವದಲ್ಲಿ ಜಿಲ್ಲೆಯ ರೈತರು ಹೋರಾಟದಲ್ಲಿ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಸನ್ನ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರ ಫಲವತ್ತಾದ ಕೃಷಿ ಭೂಮಿಗಳನ್ನು ಕೈಗಾರಿಕೆ ಹೆಸರಿನಲ್ಲಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಕ್ರಮ ಖಂಡನೀಯವಾಗಿದೆ. ನಮ್ಮ ತಾಲೂಕಿನಲ್ಲಿ ಅಪರಲ್ ಪಾರ್ಕ್ ಗಾಗಿ ನೂರಾರು ಎಕರೆ ಸ್ವಾಧೀನ ಜಮೀನನ್ನ ರೈತರಿಂದ ಕಿತ್ತುಕೊಂಡು, ಬಂಡವಾಳಶಾಹಿಗಳಿಗೆ ಹಸ್ತಾಂತರ ಮಾಡಲಾಗಿದೆಂದರು.

ಇಲ್ಲಿ ಮೂಲ ಸ್ಥಳೀಯರಿಗೆ ಎಷ್ಟು ಉದ್ಯೋಗವನ್ನು ಸೃಷ್ಟಿ ಮಾಡಲಾಗಿದೆ ಎನ್ನುವ ಕುರಿತು ಸರ್ಕಾರ ಶ್ವೇತಪತ್ರ ಹೊರಡಿಸಲಿ. ಕೆಐಎಡಿಬಿ ಒಂದು ಮಧ್ಯವರ್ತಿ ಸಂಸ್ಥೆಯಾಗಿ ನಿರ್ಮಾಣ ಆಗಿದೆ. ದೇಶದಲ್ಲಿ ಆಹಾರ ಭದ್ರತೆಗಾಗಿ 80ರ ದಶಕದಲ್ಲಿ ಬೇರೆ ದೇಶಗಳಿಗೆ ಭಿಕ್ಷೆ ಬೇಡಬೇಕಿತ್ತು ಎಂದು ಹೇಳಿದರು.

ಸಕ್ಕರೆ ಕಾರ್ಖಾನೆ, ಸೋಲಾರ್ ಯೋಜನೆಗಳು ಮೊದಲಾದ ಸಾರ್ವಜನಿಕ ಉದ್ದಿಮೆಯನ್ನು ಸ್ಥಾಪನೆ ಮಾಡಲಿ ಆದರೆ , ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುತ್ತೇವೆ ಅಂತ ಯಾರೋ ಒಬ್ಬರಿಗೆ ಕೊಟ್ಟು ಬಿಟ್ಟು, ಹತ್ತು ಸಾವಿರ ಎಕರೆ ಒಬ್ಬರಿಗೆ ಕೊಟ್ಟು ವಿದ್ಯುತ್ ಉತ್ಪಾದನೆ ಮಾಡಿ ಕಳಿಸಬಾರದು. ರೈತರಿಗೆ ವಿದ್ಯುತ್ ಉತ್ಪಾದನೆ ಮಾಡಲು ಅವಕಾಶ ನೀಡಬೇಕು. ಇತ್ತೀಚೆಗೆ ರಾಜ್ಯದಲ್ಲಿ ಬಲವಂತದ ಭೂಸ್ವಾಧೀನ ನಡೆಯುತ್ತಿದೆ. ನಮ್ಮ ತಾಲೂಕಿನಲ್ಲಿಯೂ ಸಹ ಭೂಸ್ವಾಧೀನ ನಡೆಯುತ್ತಿದೆ. ಸರ್ಕಾರ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಬೇಕೆಂದು ಹೋರಾಟ ನಡೆಸಲಾಗುತ್ತಿದೆ ಎಂದರು.

ರೈತ ಸಂಘದ ತಾಲೂಕು ಅಧ್ಯಕ್ಷ ಹನುಮೇಗೌಡ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಸತೀಶ್ ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯ ಜಂಗಮ ಕೋಟೆಯ 13 ಹಳ್ಳಿಗಳಿಗೆ ಸೇರಿದ ಕೆಐಎಡಿಬಿ ಭೂಸ್ವಾಧೀನ ಕೈಬಿಡುವಂತೆ ಒತ್ತಾಯಿಸಿ ಅಲ್ಲಿನ ರೈತರಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುತ್ತಿದೆ. ಆದರೆ, ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಕಾರಣ ಜೂ.5ರಂದು ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆಂದು ಹೇಳಿದರು.

ಈ ಹೋರಾಟಕ್ಕೆ ರಾಜ್ಯ ರೈತ ಸಂಘದ ಜಿಲ್ಲಾ ಘಟಕ ಬೆಂಬಲಿಸಿದೆ. ಚಿಕ್ಕಬಳ್ಳಾಪುರ ಸೇರಿದಂತೆ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು ಮೊದಲಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಲಿದ್ದಾರೆ. ಚಿಕ್ಕಬಳ್ಳಾಪುರದ ರಾಣಿ ಸರ್ಕಲ್ ಬಳಿಯಿಂದ ಮೂಲಕ ವಿಧಾನಸೌಧ ಚಲೋ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಮುಖಂಡರಾದ ಮಹೇದೇವ್, ರವಿಶಿರವಾರ ಹಾಜರಿದ್ದರು.

ಕಿರ್ಗಿಸ್ತಾನ್ ಹಣಕಾಸು ಸಚಿವರೊಂದಿಗೆ ಎಚ್‌ಡಿಕೆ ಸಭೆ

ಬಿಷ್ಕೇಕ್ (ಕಿರ್ಗಿಸ್ತಾನ್ ಗಣರಾಜ್ಯ): ಕೈಗಾರಿಕೋತ್ಪಾದನೆ ವಲಯದಲ್ಲಿ ಪರಸ್ಪರ ಸಹಕಾರ ಹೊಂದುವ ನಿಟ್ಟಿನಲ್ಲಿ ಬಿಷ್ಕೇಕ್‌ನಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಕಿರ್ಗಿಸ್ತಾನ್ ಗಣರಾಜ್ಯದ ಆರ್ಥಿಕ ಮತ್ತು ವಾಣಿಜ್ಯ ಸಚಿವ ಬಕಿತ್ ಸಿಡಿಕೋವ್ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಯಿತು.

ಭಾರತ ಮತ್ತು ಕಿರ್ಗೊಸ್ತಾನ್ ನಡುವೆ ಕೈಗಾರಿಕಾ ಸಂಬಂಧಗಳನ್ನು ಮತ್ತಷ್ಟು ದೃಢಗೊಳಿಸುವ ನಿಟ್ಟಿನಲ್ಲಿ, ಇಬ್ಬರೂ ಸಚಿವರ ನಡುವೆ ಚರ್ಚೆ ನಡೆಯಿತಲ್ಲದೆ, ಉಭಯ ದೇಶಗಳ ನಡುವೆ ಆರ್ಥಿಕ ತೊಡಗಿಸಿಕೊಳ್ಳುವಿಕೆ, ಕೈಗಾರಿಕಾ ಸಹಕಾರ ಮತ್ತು ವ್ಯಾಪಾರ ಪಾಲುದಾರಿಕೆಯನ್ನು ಗಾಢಗೊಳಿಸುವ ಮಾರ್ಗಗಳ ಬಗ್ಗೆ ಸಚಿವದ್ವಯರು ಚರ್ಚಿಸಿದರು.

ಶಾಂಘೈ ಸಹಕಾರ ಸಂಸ್ಥೆಯ ಕೈಗಾರಿಕಾ ಸಚಿವರ 4ನೇ ಶೃಂಗಸಭೆಯ ಸಂದರ್ಭದಲ್ಲಿ ನಡೆದ ಈ ಸಭೆಯು, ಭಾರತ ಕಿರ್ಗಿಸ್ತಾನ್ ಸಂಬಂಧಗಳಲ್ಲಿ ಆಗುತ್ತಿರುವ ಮುನ್ನಡೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹಾಗೂ ಮಧ್ಯ ಏಷ್ಯಾ ಭಾಗದಲ್ಲಿ ತನ್ನ ಆರ್ಥಿಕ ಹೆಜ್ಜೆಗುರುತನ್ನು ವಿಸ್ತರಿಸುವ ನಿಟ್ಟಿನಲ್ಲಿ ಭಾರತದ ಬದ್ಧತೆಯ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಕಿರ್ಗಿಜ್ ಸಚಿವರೊಂದಿಗೆ ವಿಸ್ತೃತ ಸಮಾಲೋಚನೆ ನಡೆಸಿದರು.



ಈ ಚರ್ಚೆಯ ಸಮಯದಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಬಲಪಡಿಸುವುದು, ಕೈಗಾರಿಕಾ ಸಹಕಾರವನ್ನು ವೃದ್ಧಿಸುವುದು, ಹೂಡಿಕೆ ಅವಕಾಶಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ತೇಜಿಸುವುದು ಮತ್ತು ಎರಡೂ ದೇಶಗಳ ವ್ಯವಹಾರಗಳು ಮತ್ತು ಉತ್ಪಾದನಾ ವಲಯಗಳ ನಡುವೆ ಹೆಚ್ಚಿನ ಸಹಯೋಗವನ್ನು ಉತ್ತೇಜಿಸುವ ಕುರಿತು ಸಚಿವರಿಬ್ಬರೂ ಮಾತುಕತೆ ನಡೆಸಿದರು.

ಯುರೇಷಿಯಾ (ಏಷ್ಯಾ-ಯುರೋಪ್) ಭಾಗದಲ್ಲಿ ಬಲವಾದ ಪ್ರಾದೇಶಿಕ ಸಹಕಾರ, ಆರ್ಥಿಕ ಒಗ್ಗೂಡುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ನಿರಂತರವಾಗಿ ಪ್ರತಿಪಾದಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಶಾಂಘೈ ಸಹಕಾರ ಸಂಸ್ಥೆ ಸದಸ್ಯ ರಾಷ್ಟ್ರಗಳೊಂದಿಗೆ ತನ್ನ ಸಂಬಂಧವನ್ನು ಇನ್ನಷ್ಟು ಗಾಢವಾಗಿಸುತ್ತಿರುವುದರಿಂದ ಈ ಸಭೆ ಮಹತ್ವದ್ದಾಗಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಪ್ರತಿಪಾದಿಸಿದರು.

ಉನ್ನತ ನಿಯೋಗವನ್ನು ಒಳಗೊಂಡ ಈ ಸಭೆಯಲ್ಲಿ ಸಚಿವ ಕುಮಾರಸ್ವಾಮಿ ಅವರೊಂದಿಗೆ ಕಿರ್ಗಿಸ್ತಾನ್ ಗಣರಾಜ್ಯದ ಭಾರತದ ರಾಯಭಾರಿ ಬೀರೇಂದರ್ ಸಿಂಗ್ ಯಾದವ್ ಅವರು ಭಾಗಿಯಾಗಿದ್ದರು.

ವೆಂಕಟಾಚಲಧಾಮದ ವಾರ್ಷಿಕೋತ್ಸವ ನಾಳೆ

ಮೈಸೂರು: ನಗರದ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀವೆಂಕಟಾಚಲಧಾಮದ 15 ನೇ ವಾರ್ಷಿಕೋತ್ಸವ ಜೂನ್ 5ರಂದು ನಡೆಯಲಿದೆ ಎಂದು ಎಸ್.ಎಸ್.ರವಿ ತಿಳಿಸಿದ್ದಾರೆ.

ಶ್ರೀ ಶ್ರೀನಿವಾಸನು ತನ್ನ ಪರಿವಾರ ಸಮೇತನಾಗಿ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಶ್ರೀವೇಂಕಟಾಚಲಧಾಮದಲ್ಲಿ ಬಂದು ನೆಲಸಿ 15 ಸಂವತ್ಸರಗಳು ಕಳೆದಿವೆ. ತನ್ನ ಬಂಧ ಪ್ರತಿವರ್ಷದಂತೆ ಈ ವರ್ಷವೂ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ ವಿದ್ಯೇಶತೀರ್ಥ ಶ್ರೀಪಾದರ ಆದೇಶದಂತೆ ಜೂನ್ 5 ರಂದು ಬೆಳಗ್ಗೆ ತತ್ವಮಂತ್ರ ಹೋಮಾದಿಗಳು, ಕಲಶಾಭಿಷೇಕ, ಅಲಂಕಾರ ಹಾಗೂ ಶ್ರೀಗಳವರಿಂದ ಶ್ರೀಮನ್ಮಧ್ವಕರಾರ್ಚಿತ ಶ್ರೀ ಕೋದಂಡರಾಮದೇವರ ಸಂಸ್ಥಾನಪೂಜೆ ಮತ್ತು ಸಂಜೆ ಸಂಗೀತ ಕಾರ್ಯಕ್ರಮ, ಶ್ರೀಗಳವರ ಆಶೀರ್ವಚನ, ರಥೋತ್ಸವ, ಸಂಕೀರ್ತನೆಗಳು, ಅಷ್ಟಾವಧಾನ, ರಂಗಪೂಜೆ ಇತ್ಯಾದಿಗಳು ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮಾರ್ನಿಂಗ್ ಶೋ

ಭಾವಾಂತರ ಚಿತ್ರದ ಟೀಸರ್ ಬಿಡುಗಡೆ

ವೀರ ಕನ್ನಡಿಗ, ಮ್ಯಾಜಿಕ್ ಅಜ್ಜಿ ಸೇರಿದಂತೆ ಮೂವತ್ತಕ್ಕೂ ಅಧಿಕ ಚಿತ್ರಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡಿದ್ದ ಯುವ ಪ್ರತಿಭೆ ಕಾರ್ತಿಕ್ ಶರ್ಮ, ಇತ್ತೀಚೆಗೆ ಸಂಗೀತ ನಿರ್ದೇಶಕನಾಗಿ ನೂರಕ್ಕೂ ಅಧಿಕ ಧಾರಾವಾಹಿಗಳು ಹಾಗೂ ಟಿವಿ ಶೋಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕಾರ್ತಿಕ್ ಶರ್ಮ ಪ್ರಸ್ತುತ ಭಾವಾಂತರ ಚಿತ್ರದ ಮೂಲಕ ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿ ಮತ್ತೊಂದು ಹೆಜ್ಜೆಯನ್ನು ಇಟ್ಟಿದ್ದಾರೆ. ನೈಜ ಘಟನೆಯನ್ನು ಆಧರಿಸಿ ನಿರ್ಮಾಣವಾಗಿರುವ ಭಾವಾಂತರ ಚಿತ್ರಕ್ಕೆ ಕಾರ್ತಿಕ್ ಶರ್ಮ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಸಂಗೀತ ನಿರ್ದೇಶನದ ಜೊತೆಗೆ ಚಿತ್ರದ ಪ್ರಮುಖ ಪಾತ್ರದಲ್ಲಿ ಕೂಡ ಅಭಿನಯಿಸಿದ್ದಾರೆ. ಈಗಾಗಲೇ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಚಿತ್ರವೀಗ ತೆರೆಗೆ ಬರಲು ಅಣಿಯಾಗಿದೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಆಡಿಯೋ ಹಕ್ಕನ್ನು ಪ್ರತಿಷ್ಠಿತ ಹೊಂಬಾಳೆ ಮ್ಯೂಸಿಕ್ ಸಂಸ್ಥೆ ಪಡೆದುಕೊಂಡಿದೆ.

ಬಾಲ ನಟನಾಗಿ ಹಾಗೂ ಸಂಗೀತ ಸಂಯೋಜಕನಾಗಿ ಪರಿಚಿತನಾಗಿದ್ದ ನಾನು, ಭಾವಾಂತರ ಸಿನಿಮಾದ ಮೂಲಕ ನಿರ್ದೇಶಕನಾಗಿದ್ದೇನೆ. ಭಾವಾಂತರ, ಇದೊಂದು ನೈಜ ಘಟನೆ ಆಧಾರಿತ ಚಿತ್ರ. ನನಗೆ ತಿಳಿದ ಹಾಗೆ ದಕ್ಷಿಣ ಭಾರತದ ಯಾವ ಭಾಷೆಯಲ್ಲೂ, ಈ ರೀತಿಯ ಕಥೆ ಈವರೆಗೂ ತೆರೆಗೆ ಬಂದಿಲ್ಲ, ಅಂತಹ ಅಪರೂಪದ ಕಥಾಹಂದರ ಹೊಂದಿರುವ ಚಿತ್ರ ಇದಾಗಿದೆ. ಈ ಚಿತ್ರದಲ್ಲಿ ನಾನೇ ಸಂಗೀತ ಸಂಯೋಜಿಸಿರುವ ಐದು ಹಾಡುಗಳಿದ್ದು, ಹೆಸರಾಂತ ಹೊಂಬಾಳೆ ಮ್ಯೂಸಿಕ್ ಸಂಸ್ಥೆ ಆಡಿಯೋ ಹಕ್ಕುಗಳನ್ನು ಪಡೆದುಕೊಂಡಿದೆ. ಈಗಾಗಲೇ ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿದ್ದು, ಕೇಳುಗರಿಂದ ನಿರೀಕ್ಷೆಗೂ ಮೀರಿ ಮೆಚ್ಚುಗೆ ಪಡೆದುಕೊಂಡಿದೆ. ಭಾವಾಂತದ ಚಿತ್ರಕ್ಕೆ ಉಡುಪಿ, ಬೆಂಗಳೂರು ಹಾಗೂ ತಮಿಳುನಾಡಿನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಚಿತ್ರವೀಗ ತೆರೆಗೆ ಬರಲು ಸಿದ್ದವಾಗಿದ್ದು, ಆದಷ್ಟು ಬೇಗ ಬಿಡುಗಡೆಯಾಗಲಿದೆ. ನನ್ನ ಜೊತೆಗೆ ತನ್ವಿ ರಾವ್ ಅವರು ಸಹ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಣವ್ ಶ್ರೀಧರ್, ಶ್ರೀವೈಷ್ಣವ್, ವೇದರಾವ್, ಭಾನು ಮುಂತಾದವರು ಪ್ರಮುಖ ತಾರಾಬಳಗದಲ್ಲಿದ್ದಾರೆ. ಕಿಕ್ ಮೀಡಿಯಾ ಸಂಸ್ಥೆ ನಿರ್ಮಾಣ ಮಾಡಿರುವ ಈ ಚಿತ್ರಕ್ಕೆ ಸಾಗರ್ ಅಪ್ಸರ್ ಅವರ ಛಾಯಾಗ್ರಹಣ ಹಾಗೂ ಆಶೀಷ್ ಹುಲಕುಂದ್ ಅವರ ಸಂಕಲನವಿದೆ ಎಂದು ನಿರ್ದೇಶಕ ಹಾಗೂ ನಟ ಕಾರ್ತಿಕ್ ಶರ್ಮ ಅವರು ತಿಳಿಸಿದ್ದಾರೆ.

ಹೊಂಬಾಳೆ ಮ್ಯೂಸಿಕ್‌ನಲ್ಲಿ ಕಾರ್ತಿಕ್ ಶರ್ಮ ಚೊಚ್ಚಲ ನಿರ್ದೇಶನದ ಈ ಚಿತ್ರದ ಹಾಡುಗಳು



ಮಕ್ಕಳ ಮೇಲೆ ನಿಮ್ಮ ಕನಸುಗಳನ್ನು ಹೇರಬೇಡಿ ಎಂಬ ಸಂದೇಶ ಇರುವ ಚಿತ್ರ



ಕ್ಯಾನ್ಸರ್ ಪೀಡಿತ ಅಭಿಮಾನಿಯ ಆರೋಗ್ಯ ವಿಚಾರಿಸಿದ ಯಶ್



ರಾಕಿಂಗ್ ಸ್ಟಾರ್ ಯಶ್ ಸಿನಿಮಾದಲ್ಲಷ್ಟೇ ಅಲ್ಲ, ನಿಜಜೀವನದಲ್ಲೂ ಹೀರೋ ಆಗಿ ನಡೆದುಕೊಳ್ಳುತ್ತಿದ್ದಾರೆ, ಅವರು ಯಾವತ್ತೂ ತಮ್ಮ ಅಭಿಮಾನಿಗಳ ಕಷ್ಟಗಳಿಗೆ ಸ್ಪಂದಿಸುತ್ತಲೇ ಬಂದಿದ್ದಾರೆ, ಇತೀಚೆಗೆ ರೆಕ್ಟಲ್ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದ ತಮ್ಮ ಅಭಿಮಾನಿಯ ಆರೋಗ್ಯವನ್ನು ವಿಚಾರಿಸಿ ಅವರಿಗೆ ಸಾಂತ್ವನದ ಮಾತುಗಳನ್ನಾಡಿದ್ದಾರೆ. ಶಿವಮೊಗ್ಗದ ಯಶ್ ಫ್ಯಾನ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಸುನಿಲ್‌ಕುಮಾರ್ ಅವರು ಕ್ಯಾನ್ಸರ್ ರೋಗಿಯಾಗಿದ್ದು, ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಈ ವಿಷಯ ತಿಳಿದ ರಾಕಿಂಗ್ ಸ್ಟಾರ್ ಯಶ್ ಆತನಿಗೆ ವೀಡಿಯೋ ಕಾಲ್ ಮಾಡಿ ಆರೋಗ್ಯ ವಿಚಾರಿಸಿ, ಆತನಿಗೆ ಧೈರ್ಯ ತುಂಬುವ ಮಾತುಗಳನ್ನಾಡಿದ್ದಾರೆ.

ಶಿವಮೊಗ್ಗದ ಸುನಿಲ್‌ಕುಮಾರ್ ಅವರು ಕಳೆದ 4-5 ತಿಂಗಳಿಂದ ರೆಕ್ಟಲ್ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದಾರೆ. ನಿಮ್ಮ ಆರೋಗ್ಯ ಬೇಗ ಸುಧಾರಿಸಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ, ಯಾವತ್ತೂ ಧೈರ್ಯವನ್ನು ಕಳೆದುಕೊಳ್ಳುವುದು ಬೇಡ ಎಂದು ನಟ ಯಶ್ ಮಾತನಾಡಿ ಅಭಯ ನೀಡಿದ್ದಾರೆ. ನನಗೆ ಈ ವಿಷಯ ಇವತ್ತು ಗೊತ್ತಾಯಿತು. ತಕ್ಷಣ ನಿಮ್ಮ ಜತೆ ಮಾತಾಡುತ್ತಿದ್ದೇನೆ. ಹೋಪ್ ಕಳೆದುಕೊಳ್ಳುವುದು ಬೇಡ, ಧೈರ್ಯವಾಗಿರಿ ಎಂದು ಹಾಸಿಗೆ ಹಿಡಿದಿರುವ ಅಭಿಮಾನಿ ಸುನಿಲ್‌ಕುಮಾರ್ ಅವರಿಗೆ ಯಶ್ ಧೈರ್ಯದ ಮಾತುಗಳನ್ನಾಡುವ ಮೂಲಕ ಅವರಲ್ಲಿ ಆತ್ಮಸ್ಥೈರ್ಯವನ್ನು ತುಂಬಿದ್ದಾರೆ.

ಟ್ರೈಲರ್‌ನಲ್ಲಿ ರೈತರ ಮಕ್ಕಳ ಬದುಕಿನ ಚಿತ್ರಣ



ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ತನ್ನ ಟೈಟಲ್ ಮೂಲಕವೇ ಹೆಚ್ಚು ಗಮನ ಸೆಳೆಯುತ್ತಿರುವ ಚಿತ್ರ 'ರೈತರ ಮಕ್ಕಳಿಗೆ ಹೆಣ್ಣು ಕೊಡಿ' ಬಿಡುಗಡೆಗೆ ಸಿದ್ದವಾಗಿರುವ ಈ ಚಿತ್ರಕ್ಕೆ ನಿವೃತ್ತ ಸರ್ಕಾರಿ ಉದ್ಯೋಗಿ ಕೆಂಪುರಾಮ್ ಹೆಡಿಯಾಲ ಅವರು ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಅಲ್ಲದೆ ಮೆಲ್ಲುಲಿಗಾನ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಾಣ ಸಹ ಮಾಡಿದ್ದಾರೆ. ರೈತರ ಬದುಕು ಬವಣೆ, ಆತನ ಮೇಲೆ ನಡೆಯುತ್ತಿರುವ ಶೋಷಣೆಯ ಕುರಿತಾಗಿ ಈ ಚಿತ್ರದ ಕಥೆ ಹೇಳುತ್ತದೆ.

ಇತ್ತೀಚೆಗೆ 'ರೈತರ ಮಕ್ಕಳಿಗೆ ಹೆಣ್ಣು ಕೊಡಿ' ಚಿತ್ರದ ಟ್ರೇಲರ್ ಹಾಗೂ ಹಾಡುಗಳ ಬಿಡುಗಡೆ ಕಾರ್ಯಕ್ರಮ ನಡೆಯಿತು. ನಂತರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ನಿರ್ದೇಶಕ ಕೆಂಪುರಾಮ್ ಹೆಡಿಯಾಲ 'ಇದೊಂದು ವಿಶೇಷವಾದ ಚಿತ್ರ, ಬಿಡುಗಡೆಗೆ ಸಿದ್ದವಾಗಿರುವ ನಮ್ಮ ಚಿತ್ರದ ಟ್ರೇಲರ್, ಹಾಡುಗಳನ್ನು ಬಿಡುಗಡೆ ಮಾಡಿದ್ದೇವೆ. ನಾನು ರಿಟೈರ್ಡ್ ಆಫೀಸರ್. ಆಕಾಶವಾಣಿಯಲ್ಲಿ ಕೆಲಸ ಮಾಡಿದ್ದೆ. ನನ್ನ ನಿವೃತ್ತ ಜೀವನದಲ್ಲಿ ಸಿನಿಮಾವನ್ನು ಪ್ರವೃತ್ತಿಯಾಗಿ ತೆಗೆದುಕೊಂಡು ಒಳ್ಳೆಯ ಕಂಟೆಂಟ್ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ. ಸಂಸ್ಕೃತದ ಒಂದು ಶ್ಲೋಕ ನನಗೆ ಈ ಸಿನಿಮಾ ಮಾಡಲು ಪ್ರೇರಣೆ. ಧಾನ್ಯವೇ ಎಲ್ಲ ವಸ್ತುಗಳಿಗಿಂತಲೂ ಶ್ರೇಷ್ಠ. ಅದನ್ನು ಬೆಳೆಯುವ ರೈತನಿಗೆ ಇವತ್ತು ಯಾರೂ ಹೆಣ್ಣು ಕೊಡುತ್ತಿಲ್ಲ, ಇದರಲ್ಲಿ ಅವರದೂ ತಪ್ಪಿಲ್ಲ, ನಮ್ಮ ಮಗಳು ಶ್ರೀಮಂತರನೆ ಸೇರಬೇಕು ಎನ್ನುವುದು ಅವರ ಕನಸಾಗಿರುತ್ತೆ, ಇದೆಲ್ಲವನ್ನೂ ಇಟ್ಟುಕೊಂಡು ಈ ಚಿತ್ರದ ಕಥೆ ಮಾಡಿದ್ದೇನೆ, ಪಿಯುಸಿ ಡ್ರಾಪೌಟ್ ಆದ ನಾಯಕ ಹಳ್ಳಿಯಲ್ಲೇ ವ್ಯವಸಾಯ ಮಾಡುತ್ತಾನೆ, ಆಗ ರೈತರ ಕಷ್ಟಗಳನ್ನು ಹತ್ತಿರದಿಂದ ನೋಡುತ್ತಾನೆ. ಆತನಿಗೇ ಯಾರೂ ಹೆಣ್ಣು ಕೊಡಲ್ಲ, ಆತ ರೈತರ ಮೇಲೆ ನಡೆಯುತ್ತಿರುವ ಶೋಷಣೆ ತಡೆಯಬೇಕು ಎಂದು ಹೋರಾಟ ಆರಂಭಿಸುತ್ತಾನೆ. ಆ ಹೋರಾಟ ಹೇಗಿರುತ್ತೆ? ರೈತರು ಏನೆಲ್ಲಾ ಕಷ್ಟ ಅನುಭವಿಸುತ್ತಿದ್ದಾರೆ? ರೈತರ ಮಕ್ಕಳಿಗೆ ಯಾಕೆ ಹೆಣ್ಣು ಕೊಡುತ್ತಿಲ್ಲಾ ಎಂಬ ಎಲ್ಲಾ ಅಂಶಗಳನ್ನು ಈ ಚಿತ್ರದಲ್ಲಿ ತೆಗೆದುಕೊಂಡಿದ್ದೇನೆ, ನಾವು ಈ ಚಿತ್ರವನ್ನು ಕಷ್ಟಪಟ್ಟು, ಇಷ್ಟಪಟ್ಟು ಮಾಡಿದ್ದೇವೆ' ಎಂದು ಹೇಳಿದರು.



ನಂತರ ಚಿತ್ರಕ್ಕೆ ಛಾಯಾಗ್ರಹಣ, ಸಂಕಲನದ ಜತೆ ಸಂಗೀತ ಸಂಯೋಜಿಸಿರುವ ರೋಹನ್ ಎಸ್. ದೇಸಾಯಿ ಮಾತನಾಡುತ್ತಾ, 'ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗಳು, ಐದು ಫೈಟ್‌ಗಳಿವೆ. ನಿರ್ದೇಶಕರು ಜೀವನದಲ್ಲಿ ನೋಡಿಕೊಂಡು ಬಂದ ಒಂದಿಷ್ಟು ಅಂಶವನ್ನು ಇಟ್ಟುಕೊಂಡು ಈ ಕಥೆ ಬರೆದಿದ್ದಾರೆ. ಹುಬ್ಬಳ್ಳಿಯ ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆಸಿದ್ದೇವೆ, ನಾವೆಲ್ಲಾ ಒಂದು ಟೀಮ್ ಆಗಿ ಕೆಲಸ ಮಾಡಿದ್ದೇವೆ' ಎಂದರು. 'ರೈತರ ಮಕ್ಕಳಿಗೆ ಹೆಣ್ಣು ಕೊಡಿ' ಚಿತ್ರದಲ್ಲಿ ನಾಯಕನಾಗಿ ಜಗದೀಶ್ ಮೂಕಿ ಅಭಿನಯಿಸಿದ್ದಾರೆ, ನಾಯಕಿ ಪಾತ್ರಕ್ಕೆ ನಟಿ ದಿವ್ಯಾ ಬಣ್ಣ ಹಚ್ಚಿದ್ದಾರೆ. 'ನಾನು ಇದರಲ್ಲಿ ಕಾಲೇಜ್ ಹುಡುಗಿಯ ಪಾತ್ರ ಮಾಡಿದ್ದೇನೆ. ಈ ಮೊದಲು ಶಾರ್ಟ್ ಫಿಲಂನಲ್ಲಿ ಅಭಿನಯಿಸಿದ್ದೆ, ಸಿನಿಮಾ ಮೊದಲ ಅನುಭವ' ಎಂದು ದಿವ್ಯಾ ತಿಳಿಸಿದರು. ಉಳಿದಂತೆ ಕಲಾವಿದ ಅಗಸ್ತ್ಯ ಪ್ರೇಮ್, ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ, ಎಂಜೆ ಸ್ಟುಡಿಯೋಸ್‌ನ ವೇಣುಗೋಪಾಲ್, ಮೃತ್ಯುಂಜಯ, ವಿತರಕ ಆಟೋ ರಾಜು ವೇದಿಕೆಯಲ್ಲಿದ್ದು ಚಿತ್ರದ ಬಗ್ಗೆ ಮಾತನಾಡಿದರು, ಸಂತೋಷ್ ರಾಥೋಡ್ ಅವರ ಸಾಹಸ, ಅಕುಲ್ ಮಾಸ್ಟರ್, ಅಜಯ್ ಜೈಕೃಷ್ಣ ಹಾಗೂ ಸಾಕ್ಷಿ ಅವರ ನೃತ್ಯವಿರುವ 'ರೈತರ ಮಕ್ಕಳಿಗೆ ಹೆಣ್ಣು ಕೊಡಿ' ಚಿತ್ರದ ಉಳಿದ ತಾರಾಗಣದಲ್ಲಿ ಜೈ ಅಮೋಘಾಸ್, ಸಂತೋಷ್ ಜೋಗುಳ್, ಅಶ್ವಿನಿ ಮುಂತಾದವರು ನಟಿಸಿದ್ದಾರೆ.

ರೈತರ ಮಕ್ಕಳಿಗೆ ಹೆಣ್ಣು ಕೊಡಿ



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26